ಸಂಪುಟ: 06 ಸಂಚಿಕೆ: 150 ಪುಟಗಳು: 08 ಬುಧವಾರ 12 ಆಗಸ್ಟ್ 2026 www.udayavahini.in epaper.udayavahini.in Udaya vahini news Udaya vahini news Udayavahini news youtube udayavahininews@gmail.com

ಸಂಪಾದಕರು: ಟಿ. ಹೊಂಬೇಗೌಡ RNI No. KARKAN/2021/80833 9448225696 +91 8035841833 ₹5

**ಮುಂಜಾನೆ ಮಾತು**

ಆತ್ಮವಿಶ್ವಾಸವೊಂದಿದ್ದರೆ ಆಯಾಸವಿಲ್ಲದೇ ಕೊನೆಯವರೆಗೂ ಪಯಣಿಸಬಹುದು. ವಿಶ್ವಾಸದ ಕೊರತೆಯಿಂದ ಪ್ರಯಾಣ ಅರ್ಧಕ್ಕೆ ನಿಲ್ಲಬಹುದು.

# ಉದಯ ವಾಹಿನಿ

ಸರ್ವ ಸಮಾನತೆಯ ಕನ್ನಡ ದಿನಪತ್ರಿಕೆ

## ಕನ್ನಡಪರ ಸಂಘಟನೆಗಳ 'ಕರ್ನಾಟಕ ಬಂದ್' ಗೊಂದಲ

• ಉದಯವಾಹಿನಿ, ಬೆಂಗಳೂರು

ತಮಿಳುನಾಡಿಗೆ ಕಾವೇರಿ ನೀರು ಹರಿಸುವ ಹಿನ್ನೆಲೆಯಲ್ಲಿ ಕರ್ನಾಟಕ ಬಂದ್‌ಗೆ ಕರೆ ಕೊಟ್ಟಿದ್ದ ಕನ್ನಡಪರ ಸಂಘಟನೆಗಳಲ್ಲಿ ಒಮತದ ಕೊರತೆ ಕಂಡುಬಂದಿದೆ. ಕಾವೇರಿ ನೀರನ್ನು ತಮಿಳುನಾಡಿಗೆ ಹರಿಸುವ ತೀರ್ಪಿನ ವಿರುದ್ಧ ಇದೇ 13ರಂದು ಕನ್ನಡಪರ ಚಳುವಳಿ ಒಕ್ಕೂಟದ ಅಧ್ಯಕ್ಷ ವಾಟಾಳ್ ನಾಗರಾಜ್ ನೇತೃತ್ವದಲ್ಲಿ ಅಖಿಲ ಕರ್ನಾಟಕ ಬಂದ್‌ಗೆ ಕರೆ ನೀಡಲಾಗಿತ್ತು. ಕಾವೇರಿ ಜಲಾಯನ ಪ್ರದೇಶದಲ್ಲಿ ಮಳೆ ಕೊರತೆ ಉಂಟಾಗಿ ಆ ಭಾಗದ ಜಲಾಶಯಗಳಲ್ಲಿ ನೀರಿನ ಕೊರತೆ ಇತ್ತು. ನಂತರದ ಬೆಳವಣಿಗೆಯಲ್ಲಿ ಜಲಾನಯನ ಪ್ರದೇಶದಲ್ಲಿ ಮಳೆಯಾಗಿ ಜಲಾಶಯಗಳಿಗೆ ನೀರು ಹರಿದುಬಂದು ತಮಿಳು ನಾಡಿಗೆ ನೀರನ್ನು ಬಿಡಲಾಗಿತ್ತು.

ಈ ಹಿನ್ನೆಲೆಯಲ್ಲಿ ಕರ್ನಾಟಕ ಬಂದ್ ಆಚರಣೆ ಬಗ್ಗೆ ಕನ್ನಡಪರ ಸಂಘಟನೆಗಳಲ್ಲಿ ಗೊಂದಲ ಉಂಟಾಗಿದೆ. ಆ.13ರಂದು ನಿಗದಿಯಂತೆ ಬಂದ್ ಆಚರಣೆ ಮಾಡೇ ಮಾಡುತ್ತೇವೆ ಎಂದು ವಾಟಾಳ್ ನಾಗರಾಜ್ ಅವರು ಖಂಡಾತುಂಡವಾಗಿ ಹೇಳಿದ್ದಾರೆ. ಆದರೆ ಕನ್ನಡಪರ ಸಂಘಟನೆಗಳ ಮುಖಂಡರಾದ ಪ್ರವೀಣ್‌ಕುಮಾರ್ ಶೆಟ್ಟಿ, ಶಿವರಾಮೇಗೌಡ, ಸಾ.ರಾ.ಗೋವಿಂದು ಮತ್ತಿತರರು ಸದ್ಯದ ಪರಿಸ್ಥಿತಿಯಲ್ಲಿ ಬಂದ್ ಮಾಡುವುದು ಬೇಡ ಎಂಬ ತೀರ್ಮಾನಕ್ಕೆ ಬಂದಿದ್ದಾರೆ ಎನ್ನಲಾಗಿದೆ. ಈಗಾಗಲೇ ಜಲಾನಯನ ಪ್ರದೇಶದಲ್ಲಿ ಮಳೆಯಾಗಿ ತಮಿಳುನಾಡಿಗೆ ನಾಲ್ಕೂವರೆ ಟಿಎಂಸಿ ನೀರು ಬಿಡಲಾಗಿದೆ. ಜಲಾಶಯಗಳಲ್ಲಿ ಸ್ವಲ್ಪ ಪ್ರಮಾಣದ ನೀರು ಸಂಗ್ರಹವಾಗಿದೆ. ಇಂತಹ ಸಂದರ್ಭದಲ್ಲಿ ನಾವು ಬಂದ್ ಮಾಡುವುದು ಸಮಂಜಸವೇ ಎಂದು ಹೋರಾಟಗಾರರು ಚರ್ಚೆ ನಡೆಸಿದ್ದಾರೆ. ಬಂದ್‌ಗೆ ಬೆಂಬಲ ನೀಡುವಂತೆ ಹೋಟೆಲ್ ಮಾಲೀಕರ ಸಂಘವಾಗಲಿ, ಇನ್ನಿತರ ಸಂಘವಾಗಲಿ ಈವರೆಗೆ ಬಂದ್ ಆಯೋಜಕರು ಪತ್ರ ಬರೆದು ಮನವಿ ಮಾಡಿಲ್ಲ ಎಂದು ತಿಳಿದುಬಂದಿದೆ. ಬಂದ್ ಹಿನ್ನೆಲೆ ಮುಂದಿನ ಹೋರಾಟದ ರೂಪುರೇಷೆ ಹಾಗೂ ಮುಂದಿನ ಕಾರ್ಯಕ್ರಮಗಳ ಬಗ್ಗೆ ಚರ್ಚಿಸಲು ನಾಳೆ ಬೆಳಗ್ಗೆ ಪ್ರವೀಣ್ ಕುಮಾರ್ ಶೆಟ್ಟಿ ನೇತೃತ್ವದ ಕರವೇ ಬಣ ಸಭೆ ಕರೆದಿದೆ. ವಾಟಾಳ್ ನೇತೃತ್ವದಲ್ಲಿ ಈಗಾಗಲೇ ಮೈಸೂರು, ಮಂಡ್ಯ, ಅತ್ತಿಬೆಲೆ ಗಡಿಯಲ್ಲಿ ಪ್ರತಿಭಟನೆಗಳನ್ನು ನಡೆಸಲಾಗಿದ್ದು, ಬಂದ್ ನಡೆಸಲು ತಯಾರಿ ಮಾಡಿಕೊಳ್ಳಲಾಗಿದೆ. ಬಂದ್ ಯಾವ ಸ್ವರೂಪವಿರುತ್ತದೆ? ಹೋರಾಟಗಾರರು ಯಾವ ರೀತಿ ಪ್ರತಿಭಟನೆ ನಡೆಸಲಿದ್ದಾರೆ? ಬಂದ್ ಮಾಡುತ್ತಾರೆಯೇ? ಅಥವಾ ಹಿಂದೆ ಸರಿಯಲಿದ್ದಾರೆಯೇ ಬಂದ್ ಬದಲು ಬೇರೆಯ ರೀತಿಯ ಹೋರಾಟ ಮಾಡಲಿದ್ದಾರೆಯೇ ಎಂಬ ಬಗ್ಗೆ ಕಾದು ನೋಡಬೇಕು.

## ನಮ್ಮ ಮೆಟ್ರೋ ಆಲ್ - ಟೈಮ್ ರೆಕಾರ್ಡ್: ಒಂದೇ ದಿನ ಬರೋಬ್ಬರಿ 11.19 ಲಕ್ಷ ಪ್ರಯಾಣಿಕರ ಸಂಚಾರ

• ಉದಯವಾಹಿನಿ, ಬೆಂಗಳೂರು

ಸಿಲಿಕಾನ್ ಸಿಟಿ ಬೆಂಗಳೂರಿನ ಪ್ರಮುಖ ಸಂಚಾರ ನಾಡಿ ಎನಿಸಿರುವ ನಮ್ಮ ಮೆಟ್ರೋದಲ್ಲಿ ಆಗಸ್ಟ್ 10ರಂದು ದಾಖಲೆ ಸಂಖ್ಯೆಯಲ್ಲಿ ಪ್ರಯಾಣಿಕರು ಸಂಚರಿಸಿದ್ದಾರೆ. ಮೆಟ್ರೋ ವಿಸ್ತೀರ್ಣ 96.1 ಕಿ.ಮೀ ವ್ಯಾಪಿಸಿದ ಬಳಿಕ ಇದೇ ಮೊದಲ ಬಾರಿಗೆ ಒಂದೇ ದಿನ 11.19 ಲಕ್ಷ ಪ್ರಯಾಣಿಕರು ಸಂಚರಿಸಿದ್ದಾರೆ. ಆ ಮೂಲಕ ನಮ್ಮ ಮೆಟ್ರೋ ಬೆಂಗಳೂರಿಗರ ಸಂಚಾರ ನಾಡಿ ಎಂಬುದು ಸಾಬೀತಾಗಿದೆ. ಬೆಂಗಳೂರು ಮೆಟ್ರೋ ರೈಲು ನಿಗಮ ಅಧಿಕಾರಿಗಳ ಅಧಿಕೃತ ಮಾಹಿತಿಯ ಪ್ರಕಾರ, ನಿನ್ನೆ ಒಂದೇ ದಿನ 96.1 ಕಿಲೋಮೀಟರ್ ವ್ಯಾಪ್ತಿಯ ಮೆಟ್ರೋ ಜಾಲದ ಮೂರೂ ಮಾರ್ಗಗಳಲ್ಲಿ ಬರೋಬ್ಬರಿ 11,19, 815 ಮಂದಿ ಪ್ರಯಾಣ ಮಾಡಿದ್ದಾರೆ. ರಾಜಧಾನಿಯಲ್ಲಿ ಮೆಟ್ರೋ ಪ್ರಯಾಣಿಕರ ಸಂಖ್ಯೆ ದ್ವಿಗುಣಗೊಳ್ಳಲು ಆರ್.ವಿ.ರಸ್ತೆ – ಬೊಮ್ಮಸಂದ್ರವರೆಗಿನ 19 ಕಿಲೋ ಮೀಟರ್ ಉದ್ದದ ಹಳದಿ ಮಾರ್ಗದ ಕೊಡುಗೆ ಸಹ ಅಪಾರವಾಗಿದೆ. ಆಗಸ್ಟ್ 10ಕ್ಕೆ ಈ ಮಾರ್ಗ ಉದ್ಘಾಟನೆಯಾಗಿ ಒಂದು ವರ್ಷವಾಗಿದೆ.

## ಕೊನೆಗೂ ಮೌನ ಮುರಿದ ಸಚಿವ ನಾಗೇಂದ್ರ

• ಉದಯವಾಹಿನಿ, ಬೆಂಗಳೂರು

ಕರ್ನಾಟಕ ವಾಲ್ಮೀಕಿ ಅಭಿವೃದ್ಧಿ ನಿಗಮ ಹಗರಣದಲ್ಲಿ ಕೋರ್ಟ್ ಜಾಮೀನು ಷರತ್ತು ಉಲ್ಲಂಘಿಸಿ ಕರ್ನಾಟಕ ಬಿಟ್ಟು ದೆಹಲಿಗೆ ಹೋಗಿದ್ದಾರೆ ಎಂದು ವಿಪಕ್ಷಗಳ ಆರೋಪಕ್ಕೆ ಸಚಿವ ಬಿ ನಾಗೇಂದ್ರ ಕೊನೆಗೂ ಮೌನ ಮುರಿದಿದ್ದು, ರಾಜ್ಯದಿಂದ ಹೊರ ಹೋದಾಗೆಲ್ಲ ಅನುಮತಿ ಪಡೆದು ಹೋಗಿದ್ದೇನೆ. ನಾನು ಯಾವುದೇ ನಿಯಮ ಉಲ್ಲಂಘನೆ ಮಾಡಿಲ್ಲ. ಈ ಕೇಸ್‌ನಲ್ಲಿ ನ್ಯಾ ಯಾಲಯ ಕೂಡ ತಡೆಯಾಜ್ಞೆ ಕೊಟ್ಟಿದೆ ಎಂದು ಸ್ಪಷ್ಟಪಡಿಸಿದ್ದಾರೆ.

ಕೊಪ್ಪಳ ತಾಲ್ಲೂಕಿನ ಮುನಿರಾಬಾದ್‌ನಲ್ಲಿ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದ ಸಚಿವ ನಾಗೇಂದ್ರ, ನಾನು ಏಟು ತಿಂದ ಹುಲಿ. ರಾಜ್ಯದ ಜನರು ಮೆಚ್ಚುವಂತಹ ಕೆಲಸ ಮಾಡ್ತೀನಿ ನೋಡ್ತಿರಿ. ಹಿಂದುಳಿದವರು, ದಲಿತ ಬೆಳೆಯುವುದನ್ನು ಬಿಜೆಪಿಗೆ ಸಹಿಸೋಕೆ ಆಗ್ತಿಲ್ಲ. ಸದನದಲ್ಲಿ ಬಿಜೆಪಿಯವರಿಗೆ ಉತ್ತರ ಕೊಡಲು ನಾವು ತಯಾರಾಗಿದ್ದೇವೆ. ನಮ್ಮ ಮುಖ್ಯಮಂತ್ರಿಯವರು ಇದಕ್ಕೆಲ್ಲ ಈಗಾಗಲೇ ಉತ್ತರ ಕೊಟ್ಟಿದ್ದಾರೆ. ನಮ್ಮನ್ನು ಇಕ್ಕಟ್ಟಿಗೆ ಸಿಲುಕಿಸೋದು ವಿರೋಧ ಪಕ್ಷದವರ ಕೆಲಸ. ಸಚಿವ ಸಂಪುಟದ ಎಲ್ಲರೂ ಉತ್ತರ ಕೊಡುತ್ತೇವೆ. ವಾಲ್ಮೀಕಿ ನಿಗಮದಿಂದ ಹೋಗಿದ್ದ ಹಣ ವಾಪಸ್ ತರುತ್ತಿದ್ದಾರೆ. ನಾನು ಆ ಕೇಸ್‌ನಲ್ಲಿ ಆರೋಪಿ, ಅಪರಾಧಿ ಅಲ್ಲ, ತಪ್ಪಿತಸ್ಥ ಅಲ್ಲ. ಪ್ರಕರಣದಿಂದ ಮುಕ್ತವಾಗಿ ಹೊರಗೆ ಬರ್ತೀನಿ ಅಂತಾ ನಂಬಿಕೆ ಇದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

## ವಿಧಾನ ಪರಿಷತ್ ಸಭಾಪತಿ ಚುನಾವಣೆಗೆ ದಿನಾಂಕ ನಿಗದಿ

• ಉದಯವಾಹಿನಿ, ಬೆಂಗಳೂರು

ವಿಧಾನ ಪರಿಷತ್ ಸಭಾಪತಿ ಚುನಾವಣೆಗೆ ಆಗಸ್ಟ್ 14ರಂದು ದಿನಾಂಕ ನಿಗದಿಪಡಿಸಿ ಇಂದು ಅಧಿಸೂಚನೆ ಹೊರಡಿಸಲಾಗಿದೆ. ಬಸವರಾಜ ಹೊರಟ್ಟಿ ರಾಜೀನಾಮೆಯಿಂದ ತೆರವಾಗಿರುವ ಸಭಾಪತಿ ಸ್ಥಾನಕ್ಕೆ ಚುನಾವಣೆ ನಡೆಯಲಿದೆ.

ಕಾಂಗ್ರೆಸ್ ಈಗಾಗಲೇ ಸಲೀಂ ಅಹಮ್ಮದ್ ಅವರನ್ನು ಸಭಾಪತಿ ಸ್ಥಾನದ ಅಭ್ಯರ್ಥಿಯಾಗಿ ಘೋಷಿಸಿದೆ. ಉಮಾಶ್ರೀ ಉಪಸಭಾಪತಿ ಸ್ಥಾನದ ಅಭ್ಯರ್ಥಿಯಾಗಿದ್ದಾರೆ. ಪುಟ್ಟಣ್ಣರನ್ನು ಹಂಗಾಮಿ ಸಭಾಪತಿಯಾಗಿ ನೇಮಿಸಲಾಗಿದೆ. ಬಸವರಾಜ ಹೊರಟ್ಟಿ ಆ.14ರಂದು ರಾಜೀನಾಮೆ ಕೊಡಲು ತೀರ್ಮಾನಿಸಿದ್ದರು. ಆದರೆ ಸಿಎಂ ಡಿ.ಕೆ.ಶಿವಕುಮಾರ್, ಕೆಪಿಸಿಸಿ ಅಧ್ಯಕ್ಷ ಬಿ.ಕೆ.ಹರಿಪ್ರಸಾದ್ ಸೇರಿ ಕಾಂಗ್ರೆಸ್ ಮುಖಂಡರು ಆ.7ರಂದು ವಿಧಾನಸೌಧದಲ್ಲಿನ ಸಭಾಪತಿ ಚೇಂಬರ್‌ಗೆ ಆಗಮಿಸಿ ರಾಜೀನಾಮೆ ನೀಡುವಂತೆ ಒತ್ತಡ ಹೇರಿದ್ದರು. ಈ ಮಧ್ಯೆ ಹೊರಟ್ಟಿ ಮೇಲೆ ಅವಿಶ್ವಾಸ ನಿರ್ಣಯ ಗೊತ್ತುವಳಿ ಮಂಡಿಸುವ ಚರ್ಚೆಯೂ ನಡೆದಿತ್ತು. ಇತ್ತ ಸರ್ಕಾರ ರಾಜೀನಾಮೆ ನೀಡಲು ಒತ್ತಡ ಹಾಕಿದ ಹಿನ್ನೆಲೆಯಲ್ಲಿ ಹೊರಟ್ಟಿ ಅಂದೇ ಸಭಾಪತಿ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರು.

ರಾಜೀನಾಮೆಯ ಬಳಿಕ ಮಾತನಾಡಿದ್ದ ಹೊರಟ್ಟಿ, ಕೂಡಲೇ ರಾಜೀನಾಮೆ ಕೊಡಿ ಅಂದರು. ಅದಕ್ಕಾಗಿ ಕೊಟ್ಟೆ. ಆ.14ರಂದು ರಾಜೀನಾಮೆ ಕೊಡಬೇಕಿತ್ತು. ಅವಧಿ ಮುಗಿಯುವ ಮುನ್ನವೇ ರಾಜೀನಾಮೆ ಪಡೆದಿರುವುದು ಸ್ವಲ್ಪ ಬೇಸರ ಮೂಡಿಸಿದೆ ಎಂದಿದ್ದರು.

ನೂತನ ಸರ್ಕಾರ ರಚನೆಯಾಗಿ ಎರಡು ತಿಂಗಳು ಕಳೆದ ಬಳಿಕ ಸಂಪುಟ ವಿಸ್ತರಣೆಗೆ ಅವಕಾಶ ಮಾಡಿಕೊಡಲಾಯಿತು. ಪೂರ್ಣ ಪ್ರಮಾಣದ ಸಂಪುಟ ಬದಲಾಗಿ ಮತ್ತು ಒಂದು ಸ್ಥಾನವನ್ನು ಉಳಿಸಿಕೊಳ್ಳಲಾಗಿದೆ. ನೂತನವಾಗಿ ಸಂಪುಟಕ್ಕೆ ಸೇರಿದ ಸಚಿವರಿಗೆ 8 ದಿನ ಕಳೆದರೂ ಖಾತೆ ಹಂಚಿಕೆಯಾಗಿಲ್ಲ. ವಿಧಾನಮಂಡಲ ಅಧಿವೇಶನಕ್ಕೆ ಇನ್ನೂ ಒಂದು ದಿನ ಮಾತ್ರ ಇದೆ. ದೆಹಲಿಗೆ ತೆರಳಿದ ಡಿ.ಕೆ.ಶಿವಕುಮಾರ್ ಹೈಕಮಾಂಡ್ ಜೊತೆ ಸಭೆ ನಡೆಸಿ, ಖಾತೆಗಳ ಹಂಚಿಕೆ ವಿಚಾರವಾಗಿ ಮಾಹಿತಿ ನೀಡಿ ಬಂದಿದ್ದಾರೆ.



# ಹಳಬರಿಗೆ ಹೊರೆ

# ನೂತನ ಸಚಿವರ ಖಾತೆಗೆ ತೆರೆ

### ರಾಜ್ಯ ನಾಯಕರ ಅಸಮಾಧಾನ

### ಸಚಿವ ಸ್ಥಾನ ವಂಚಿತ ಶಾಸಕರಿಂದ ಮಹತ್ವದ ಸಭೆ!



• ಉದಯವಾಹಿನಿ, ಬೆಂಗಳೂರು

ತೀವ್ರ ಕುತೂಹಲ ಮೂಡಿಸಿರುವ ನೂತನ ಸಚಿವರಿಗೆ ಖಾತೆ ಹಂಚಿಕೆ ಸಂಬಂಧ ಸಿಎಂ ಡಿಕೆ ಶಿವಕುಮಾರ್ ಅವರು ಗುಡ್ ನ್ಯೂಸ್ ನೀಡಿದ್ದಾರೆ. ನೂತನ ಸಚಿವರಿಗೆ ಖಾತೆ ಹಂಚಿಕೆ ಮಾಡಿ ಪಟ್ಟಿ ಬಿಡುಗಡೆ ಮಾಡುತ್ತೇನೆ ಎಂದು ಸ್ಪಷ್ಟಪಡಿಸಿದ್ದಾರೆ. ಇದರೊಂದಿಗೆ ಹೊಸ ಸಚಿವರಿಗೆ ಖಾತ ಹಂಚಿಕೆ ಯಾವಾಗ? ಯಾರಿಗೆ ಯಾವ ಖಾತೆ? ಅದು ಬೇರೆ ಮಳೆಗಾಲದ ಅಧಿವೇಶನ ಶುರುವಾಗುತ್ತೆ ಎನ್ನುವ ಬಗ್ಗೆ ಭಾರೀ ಚರ್ಚೆಗಳು ಆಗುತ್ತಿದ್ದವು. ಇದರ ಬೆನ್ನಲ್ಲೇ ಇದೀಗ ಸ್ವತಃ ಸಿಎಂ ಡಿಕೆ ಶಿವಕುಮಾರ್ ಖಾತೆ ಕ್ಯಾತೆ ಬಗ್ಗೆ ಸ್ಪಷ್ಟನೆ ನೀಡಿದ್ದು, ಮಂಗಳವಾರ ಯಾವುದೇ ಸಂದರ್ಭದಲ್ಲಿ ಖಾತೆ ಪಟ್ಟಿ ಬಿಡುಗಡೆಯಾಗಲಿದೆ. ಹೀಗಾಗಿ ಯಾರಿಗೆ ಯಾವ ಖಾತೆ ಸಿಗಲಿದೆ ಎನ್ನುವುದನ್ನು ಕಾದುನೋಡಬೇಕಿದೆ.

ರಾಜ್ಯದಲ್ಲಿ ನೂತನವಾಗಿ ಡಿಕೆ ಶಿವಕುಮಾರ್ ನೇತೃತ್ವದ ಸರ್ಕಾರ ಆಡಳಿತಕ್ಕೆ ಬಂದ ಬಳಿಕ, ಅದರಲ್ಲೂ ಸಚಿವ ಸಂಪುಟ ಪುನಾರಚನೆ ಆದ ಬಳಿಕ ಕಾಂಗ್ರೆಸ್ ಒಳಗೆ ಅಸಮಾಧಾನದ ಹೊಗೆ ಬಹಿರಂಗವಾಗಿ ಭುಗಿಲೇಳುತ್ತಿದೆ. ಸಚಿವ ಸಂಪುಟ ವಿಸ್ತರಣೆಯಾಗಿ ವಾರ ಕಳೆದರೂ ಇನ್ನೂ ಭಿನ್ನಮತ ಶಮನವಾಗುವ ಲಕ್ಷಣ ಕಾಣುತ್ತಿಲ್ಲ. ಈತನ್ಮಧ್ಯೆ, ಸಚಿವ ಸ್ಥಾನ ಸಿಗದೆ ಅತೃಪ್ತಗೊಂಡಿರುವ ಮೂವರು ಹಿರಿಯ ಶಾಸಕರು ಮೈಸೂರಿನಲ್ಲಿ ಮಹತ್ವದ ಸಭೆ ನಡೆಸಿದ್ದಾರೆ. ಮೈಸೂರಿನ ಸರ್ಕಾರಿ ಅತಿಥಿ ಗೃಹದಲ್ಲಿ ಮಾಜಿ ಸಚಿವ, ಹಿರಿಯ ನಾಯಕ ಹೆಚ್.ಸಿ ಮಹದೇವಪ್ಪ, ಕೆ. ವೆಂಕಟೇಶ್ ಮತ್ತು ತನ್ವೀರ್ ಸೇಠ್ ಸಭೆ ನಡೆಸಿದ್ದಾರೆ. ಸಚಿವ ಸಂಪುಟ ವಿಸ್ತರಣೆ ವಿಚಾರದಲ್ಲಿ ಕಾಂಗ್ರೆಸ್‌ನಲ್ಲಿ ಅಸಮಾಧಾನ ಇರುವ ಸಂದರ್ಭದಲ್ಲಿ ಸಚಿವ ಸ್ಥಾನದಿಂದ ವಂಚಿತರಾಗಿರುವ ಈ ಮೂವರು ನಾಯಕರ ಸಭೆ ರಾಜಕೀಯವಾಗಿ ಚರ್ಚೆಗೆ ಗ್ರಾಸವಾಗಿದೆ. ಸಂಪುಟದ ನೂತನ ಸಚಿವರಿಗೆ ಖಾತೆ ಹಂಚಿಕೆಗೆ ಸಂಬಂಧ ಪಟ್ಟಂತೆ ಹೈಕಮಾಂಡ್‌ನ ಅತಿಯಾದ ಹಸ್ತಕ್ಷೇಪ ರಾಜ್ಯ ನಾಯಕರಲ್ಲಿ ಅಸಹನೆಯ ವಾತಾವರಣ ಸೃಷ್ಟಿಸಿದೆ. ಇತ್ತೀಚಿನ ದಿನಗಳಲ್ಲಿ ನಾಯಕತ್ವ ಬದಲಾವಣೆ, ಸಂಪುಟ ವಿಸ್ತರಣೆ ಹಾಗೂ ಖಾತೆ ಹಂಚಿಕೆ ಸೇರಿದಂತೆ ಎಲ್ಲಾ ವಿಚಾರಗಳಲ್ಲಿ ಹೈಕಮಾಂಡ್ ಅಗತ್ಯ ಮೀರಿ ಮೂಗು ತೂರಿಸುತ್ತಿದೆ ಎಂಬ ಆರೋಪಗಳಿವೆ.

ನಾಯಕತ್ವ ಬದಲಾವಣೆ ವಿಚಾರವಾಗಿ ಸಿದ್ದರಾಮಯ್ಯ ಅವರನ್ನು ಸ್ಥಾನ ಪಲ್ಲಟ ಮಾಡಿದ ಹೈಕಮಾಂಡ್ ಡಿ.ಕೆ.ಶಿವಕುಮಾರ್ ಅವರನ್ನು ಮುಖ್ಯಮಂತ್ರಿಯನ್ನಾಗಿ ನಿಯೋಜಿಸಿತ್ತು. ಆ ನಂತರ ಪ್ರತಿ ವಿಚಾರದಲ್ಲೂ ಹೈಕಮಾಂಡ್ ಹಗ್ಗ-ಮೂಗುದಾರಗಳನ್ನು ಬಿಗಿಯಾಗಿ ಹಿಡಿದುಕೊಂಡು ಕುಳಿತಿದೆ. ರಾಜ್ಯ ಸರ್ಕಾರದಲ್ಲಿ ಪ್ರತಿ ಬೆಳವಣಿಗೆಯ ಮೇಲೂ ನಿಯಂತ್ರಣ ಸಾಧಿಸುವ ಹೈಕಮಾಂಡ್‌ನ ಪ್ರಯತ್ನದಿಂದಾಗಿ ಆಡಳಿತ ವ್ಯವಸ್ಥೆ ಹಳ್ಳ ಹಿಡಿಯುತ್ತಿದೆ.



ನಾವು ಯಾರ ಬಗ್ಗೆಯೂ ದೂರಲ್ಲ. ಪಿತೂರಿ ಅಂತಾನೂ ಹೇಳಲ್ಲ, ಯಾಕೆ ನಮಗೆ ಸಚಿವ ಸ್ಥಾನ ಕೈತಪ್ಪಿದೆ ಅಂತ ಸಭೆ ಮಾಡಿದ್ದೇವೆ. ಈ ಹಿಂದೆ ಸಿಎಂ ಇದ್ರೂ, ಜಿಲ್ಲೆಗೆ ಇಬ್ಬರು ಸಚಿವರು ಮಾಡಿದ್ರು, ಈಗ ಯಾಕೆ ಅನ್ಯಾಯ ಆಗಿದೆ, ಯಾರಿಂದ ಆಗಿದೆ ಗೊತ್ತಿಲ್ಲ, ಯತೀಂದ್ರಗೆ ಸಚಿವ ಸ್ಥಾನ ಕೊಟ್ಟಿರೋದಕ್ಕೆ ನಮಗೆ ಯಾರಿಗೂ ತಕರಾರು ಇಲ್ಲ, ಆದ್ರೆ, ಇನ್ನೂ ಯಾರಿಗಾದರೂ ಸಚಿವ ಸ್ಥಾನ ಕೊಡಬಹುದಿತ್ತು.

ಕೆ ವೆಂಕಟೇಶ್ ಶಾಸಕ

### ಅತಿಯಾದ ಕಾಂಗ್ರೆಸ್ ಹೈಕಮಾಂಡ್ ಹಸ್ತಕ್ಷೇಪ : ರಾಜ್ಯ ನಾಯಕರ ಅಸಮಾಧಾನ

### ಕಾಂಗ್ರೆಸ್‌ಗೆ ಕಗ್ಗಂಟ್ಟು

### ಡಿಸಿಎಂ ಸ್ಥಾನಕ್ಕೆ ಬೇಡಿಕೆ ಇಟ್ಟಿಲ್ಲ

ಡಿಸಿಎಂ ಸ್ಥಾನ ನೀಡುತ್ತಾರೆ ಅಂತಾ ಚರ್ಚೆ ಆಗಿದ್ದು ನಿಜ. ಸದ್ಯಕ್ಕೆ ಮಾಡಿಲ್ಲ, ಮುಂದಿನ ದಿನದಲ್ಲಿ ಪಕ್ಷ ಮಾಡಬಹುದು ಎಂದು ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ವಿಶ್ವಾಸ ವ್ಯಕ್ತಪಡಿಸಿದರು. ಮಾಧ್ಯಮಗಳ ಜೊತೆಗೆ ಮಾತನಾಡಿದ ಅವರು, ನಾವು ಬೇಡಿಕೆ ಇಟ್ಟಿರಲಿಲ್ಲ. ಪಕ್ಷದ ಹಿತದೃಷ್ಟಿಯಿಂದ ಚರ್ಚೆ ನಡೆಯುತ್ತಿತ್ತು. ನಾವು ಒತ್ತಡ ಹಾಕಲ್ಲ ಪಕ್ಷ ಗುರುತಿಸಬೇಕಾಗುತ್ತದೆ. ಪಕ್ಷದ ವೇದಿಕೆಯಲ್ಲಿ ಚರ್ಚೆ ಮಾಡುತ್ತೇವೆ. ಹೊರಗಡೆ ಚರ್ಚೆ ಮಾಡುವುದು ಸರಿಯಲ್ಲ ಎಂದರು. ಸತೀಶ್ ಜಾರಕಿಹೊಳಿ ಖಾತೆ ಬದಲಾವಣೆ ಮಾಡುತ್ತಾರೆ ಎಂಬ ಪ್ರಶ್ನೆಗೆ ನಾನು ಯಾವುದೂ ಕೇಳಿಲ್ಲ. ಖಾತೆ ಬದಲಾವಣೆ ಬಗ್ಗೆ ಚರ್ಚೆಯೇ ಆಗಿಲ್ಲ. ಅದು ಪಕ್ಷದ ತೀರ್ಮಾನ, ಯಾರಿಗೆ ಯಾವ ಖಾತೆ ಕೊಡುತ್ತಾರೆ ಎಂಬುದು ಅವರಿಗೆ ಬಿಟ್ಟದ್ದು ಎಂದು ಪ್ರತಿಕ್ರಿಯೆ ನೀಡಿದರು. ಸಂಪುಟದಲ್ಲಿ ಮಹಿಳಾ ಸಚಿವರು ಇಲ್ಲ ಎಂಬ ವಿಚಾರಕ್ಕೆ ಪ್ರತಿಕ್ರಿಯಿಸಿದ ಸತೀಶ ಜಾರಕಿಹೊಳಿ, ಮಹಿಳಾ ಶಾಸಕರಿಗೆ ಕೊಡಲು ಒಂದು ಸ್ಥಾನ ಖಾಲಿ ಇಟ್ಟಿದ್ದೇವೆ.



ಪಕ್ಷದಲ್ಲಿ ಎಲ್ಲವೂ ಸರಿಯಿದೆ ಅಂತಾನೂ ಹೇಳಲ್ಲ, ಸರಿ ಇಲ್ಲ ಅಂತಾನೂ ಹೇಳಲ್ಲ' ಎಂದು ಹೇಳುವ ಮೂಲಕ ಅಡ್ಡಗೋಡೆ ಮೇಲೆ ದೀಪ ಇಟ್ಟರು. ನಮಗೆ ಅನ್ಯಾಯ ಆಗಿರೋದು ನಿಜ ಎಂದು ಒಪ್ಪಿಕೊಂಡ ಅಸಮಾಧಾನಿತ ಶಾಸಕ ತನ್ವೀರ್ ಸೇಠ್, ನಾವು ಮೂವರು ಒಂದಾಗಿದ್ದೇವೆ. ನಮಗೆ ಯಾಕೆ ಅನ್ಯಾಯ ಆಗಿದೆ, ಎಲ್ಲಿ ಅನ್ಯಾಯ ಆಗಿದೆ ಎಂಬ ಬಗ್ಗೆ ಮಾತುಕತೆ ಮಾಡಿದ್ದೇವೆ.

ತನ್ವೀರ್ ಸೇಠ್ ಹಿರಿಯ ಶಾಸಕ



ನಾವು ಮೂವರು ಸಭೆ ಮಾಡಿದ್ದೇವೆ. ಸದ್ಯಕ್ಕೆ ನಾನು ರಾಜಕೀಯದ ಬಗ್ಗೆ ಮಾತನಾಡಲ್ಲ, ಎಲ್ಲಿ ತಪ್ಪಾಗಿದೆ ಎನ್ನುವ ಬಗ್ಗೆ ಚರ್ಚೆ ನಡೆಸಿದ್ದೇವೆ.

ಅದನ್ನು ಬಿಟ್ಟು ಬೇರೇನೂ ಸದ್ಯಕ್ಕೆ ನಾನು ಮಾತನಾಡಲ್ಲ ಎಂದರು. ಎಚ್‌ಸಿ ಮಹಾದೇವಪ್ಪ ದಲಿತ ಸಿಎಂ ಆಗುತ್ತಾರೆ ಎಂಬ ವಿಚಾರದ ಬಗ್ಗೆ ಮಾತನಾಡಿ, ಸಚಿವ ಸ್ಥಾನ ತಪ್ಪಿದ ತಕ್ಷಣ ಮುಂದೆ ಸಿಎಂ ಆಗಲ್ಲ ಅಂತ ಇಲ್ಲ, ಸಾಮರ್ಥ್ಯವಿದೆ ಅಲ್ವಾ, ಮುಂದೆ ನೋಡೋಣ.

ಎಚ್‌ಸಿ ಮಹಾದೇವಪ್ಪ ಮಾಜಿ ಸಚಿವ

### ರಾಜ್ಯ ನಾಯಕರಲ್ಲಿ ಅಸಹನೆಯ ವಾತಾವರಣ

ಸಂಪುಟದ ನೂತನ ಸಚಿವರಿಗೆ ಖಾತೆ ಹಂಚಿಕೆಗೆ ಸಂಬಂಧಪಟ್ಟಂತೆ ಹೈಕಮಾಂಡ್‌ನ ಅತಿಯಾದ ಹಸ್ತಕ್ಷೇಪ ರಾಜ್ಯ ನಾಯಕರಲ್ಲಿ ಅಸಹನೆಯ ವಾತಾವರಣ ಸೃಷ್ಟಿಸಿದೆ.

ಇತ್ತೀಚಿನ ದಿನಗಳಲ್ಲಿ ನಾಯಕತ್ವ ಬದಲಾವಣೆ, ಸಂಪುಟ ವಿಸ್ತರಣೆ ಹಾಗೂ ಖಾತೆ ಹಂಚಿಕೆ ಸೇರಿದಂತೆ ಎಲ್ಲಾ ವಿಚಾರಗಳಲ್ಲಿ ಹೈಕಮಾಂಡ್ ಅಗತ್ಯ ಮೀರಿ ಮೂಗು ತೂರಿಸುತ್ತಿದೆ ಎಂಬ ಆರೋಪಗಳಿವೆ.

ನಾಯಕತ್ವ ಬದಲಾವಣೆ ವಿಚಾರವಾಗಿ ಸಿದ್ದರಾಮಯ್ಯ ಅವರನ್ನು ಸ್ಥಾನ ಪಲ್ಲಟ ಮಾಡಿದ ಹೈಕಮಾಂಡ್ ಡಿ.ಕೆ.ಶಿವಕುಮಾರ್ ಅವರನ್ನು ಮುಖ್ಯಮಂತ್ರಿಯನ್ನಾಗಿ ನಿಯೋಜಿಸಿತ್ತು.

ಆ ನಂತರ ಪ್ರತಿ ವಿಚಾರದಲ್ಲೂ ಹೈಕಮಾಂಡ್ ಹಗ್ಗ-ಮೂಗುದಾರಗಳನ್ನು ಬಿಗಿಯಾಗಿ ಹಿಡಿದುಕೊಂಡು ಕುಳಿತಿದೆ.

ರಾಜ್ಯ ಸರ್ಕಾರದಲ್ಲಿ ಪ್ರತಿ ಬೆಳವಣಿಗೆಯ ಮೇಲೂ ನಿಯಂತ್ರಣ ಸಾಧಿಸುವ ಹೈಕಮಾಂಡ್‌ನ ಪ್ರಯತ್ನದಿಂದಾಗಿ ಆಡಳಿತ ವ್ಯವಸ್ಥೆ ಹಳ್ಳ ಹಿಡಿಯುತ್ತಿದೆ.

### ಪ್ರಯತ್ನ ಹೈಕಮಾಂಡ್

ಅಧಿವೇಶನದ ಹಿಂದಿನ ದಿನ ಸಚಿವರು ಖಾತೆಗಳ ಜವಾಬ್ದಾರಿ ವಹಿಸಿಕೊಳ್ಳುವ ಬೆಳವಣಿಗೆ ರಾಜ್ಯದಲ್ಲಿ ಹೊಸದು. ಹೈಕಮಾಂಡ್ ಉದ್ದೇಶ ಪೂರಕವಾಗಿಯೇ ಪ್ರತಿ ಹಂತದಲ್ಲೂ ಮೂಗು ತುರಿಸುತ್ತಿದೆ ಎಂದು ಹೇಳಲಾಗುತ್ತಿದೆ. ಸಂಪುಟ ವಿಸ್ತರಣೆಗೆ ಅನುಮತಿ ನೀಡಲು 4 ದಿನ ಕಾಯಿಸಿ, ನಂತರ 5ನೇ ದಿನ ಪಟ್ಟಿ ರವಾನಿಸಿತ್ತು. ಸಂಪುಟ ವಿಸ್ತರಣೆಗೆ 8 ದಿನ ಕಳೆದರೂ ವಿಳಂಬ ಮಾಡುವ ಮೂಲಕ ತನ್ನ ಪಾರುಪತ್ಯವನ್ನು ಸಾಬೀತುಪಡಿಸುವ ಪ್ರಯತ್ನ ಹೈಕಮಾಂಡ್ ಮಾಡುವಂತಿದೆ.

### ಅಸಮಾಧಾನಿತ ಶಾಸಕರು ಜೆಡಿಎಸ್‌ಗೆ ಬರುವಂತೆ ಹೆಚ್‌ಡಿಕೆ ಆಫರ್

ಯಾವ ಖಾತೆ ನೀಡಿದರೂ ನಿರೀಕ್ಷೆಯಂತೆ ಕೆಲಸ ಮಾಡುತ್ತೇನೆ ಎಂದು ಸಚಿವ ಟಿ.ರಘುಮೂರ್ತಿ ಹೇಳಿದ್ದಾರೆ. ಸಚಿವ ಸ್ಥಾನ ಕೈತಪ್ಪಿದಕ್ಕೆ ಕೆಲ ಶಾಸಕರ ಅಸಮಾಧಾನ ವಿಚಾರದ ಕುರಿತು ಚಿತ್ರದುರ್ಗದಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ವರಿಷ್ಠರಿಂದ ಅಸಮಾಧಾನ ನೀಗಿಸುವ ಕೆಲಸ ಆಗುತ್ತಿದೆ. ಸಿರಿಗೆರೆ ತರಳಬಾಳು ಶ್ರೀ ದೆಹಲಿಗೆ ತೆರಳಿದ್ದರು. ಭದ್ರಾ ಮೇಲ್ದಂಡೆ ಯೋಜನೆಗೆ ಹೆಚ್ಚಿನ ಅನುದಾನಕ್ಕೆ ಪ್ರಯತ್ನಿಸಿದ್ದರು. ಭರವಸೆಯಿಂದ ಕೇಂದ್ರ 6,200 ಕೋಟಿ ನೀಡಲಿ ಎಂದು ಶ್ರೀಗಳು ಹೇಳಿದ್ದಾರೆ. ಬಿಡದಿ ಟೌನ್‌ಶಿಪ್‌ಗೆ ಮೂಲ ಕಾರಣ ಯಾರೆಂದು ಸಿಎಂ ಹೇಳಿದ್ದಾರೆ.

ಈ ಮೊದಲು ಎಕರೆಗೆ 25 ಲಕ್ಷ ರೂ. ಪರಿಹಾರ ನೀಡಲಾಗುತ್ತಿತ್ತು. ಈಗ ಎಕರೆಗೆ ಮೂರು ಕೋಟಿ ನೀಡಲಾಗುತ್ತಿದೆ ಎಂದರು. ಅಸಮಾಧಾನಿತ ಶಾಸಕರು ಜೆಡಿಎಸ್‌ಗೆ ಬರುವಂತೆ ಹೆಚ್‌ಡಿಕೆ ಆಫರ್ ವಿಚಾರವಾಗಿ ಪ್ರತಿಕ್ರಿಯಿಸಿ, ವಿರೋಧ ಪಕ್ಷದವರು ಏನು ಬೇಕಾದರೂ ಆಫರ್ ಕೊಡಬಹುದು. ಏನಾದರೂ ಆಫರ್ ಕೊಟ್ಟು ಆಮಿಷ ತೋರಿಸಬಹುದು, ಅದೆಲ್ಲಾ ಆಗಲ್ಲ. ನಮ್ಮ ಶಾಸಕರು, ಮಂತ್ರಿಗಳು ಒಂದೇ ಕುಟುಂಬದ ಅಣ್ಣ ತಮ್ಮಂದಿರಿದ್ದಂತೆ. ಕುಟುಂಬದಲ್ಲಿ ಸಣ್ಣಪುಟ್ಟ ವ್ಯತ್ಯಾಸಗಳು ಆದಾಗ ನೋವು ಆಗುವುದು ಸಹಜ. ಮಂತ್ರಿ ಮಂಡಲದ ವಿಚಾರದಲ್ಲಿಯೂ ಅದೇ ಆಗಿರೋದು ಎಂದು ಹೇಳಿದರು.

### ಪುನರ್ ರಚನೆ ಖಾತೆ ಹಂಚಿಕೆ ನೆಪ

ಅಧಿವೇಶನದ ಹಿಂದಿನ ದಿನ ಸಚಿವರು ಖಾತೆಗಳ ಜವಾಬ್ದಾರಿವಹಿಸಿಕೊಳ್ಳುವ ಬೆಳವಣಿಗೆ ರಾಜ್ಯದಲ್ಲಿ ಹೊಸದು. ಹೈಕಮಾಂಡ್ ಉದ್ದೇಶ ಪೂರಕವಾಗಿಯೇ ಪ್ರತಿ ಹಂತದಲ್ಲೂ ಮೂಗು ತುರಿಸುತ್ತಿದೆ ಎಂದು ಹೇಳಲಾಗುತ್ತಿದೆ. ಸಂಪುಟ ವಿಸ್ತರಣೆಗೆ ಅನುಮತಿ ನೀಡಲು 4 ದಿನ ಕಾಯಿಸಿ, ನಂತರ 5ನೇ ದಿನ ಪಟ್ಟಿ ರವಾನಿಸಿತ್ತು. ಸಂಪುಟ ವಿಸ್ತರಣೆಗೆ 8 ದಿನ ಕಳೆದರೂ ವಿಳಂಬ ಮಾಡುವ ಮೂಲಕ ತನ್ನ ಪಾರುಪತ್ಯವನ್ನು ಸಾಬೀತುಪಡಿಸುವ ಪ್ರಯತ್ನ ಹೈಕಮಾಂಡ್ ಮಾಡುವಂತಿದೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಶಾಸಕಾಂಗ ನಾಯಕನ ಆಯ್ಕೆ ಶಾಸಕರ ಹೊಣೆಗಾರಿಕೆ. ನಂತರ ಸಂಪುಟ ವಿಸ್ತರಣೆ, ಪುನರ್ ರಚನೆ, ಖಾತೆ ಹಂಚಿಕೆ ಎಲ್ಲವೂ ಮುಖ್ಯಮಂತ್ರಿಯವರ ಪರಮಾಧಿಕಾರ. ಆದರೆ ಅದು ನೆಪ ಮಾತ್ರಕ್ಕೆ ಎಂಬಂತಾಗಿದೆ. **ವಿಪರೀತ ಹಸ್ತಕ್ಷೇಪ:** ಡಿ.ಕೆ.ಶಿವಕುಮಾರ್ ಅವರು ಎಲ್ಲಾ ವಿಚಾರಗಳಲ್ಲೂ ಹೈಕಮಾಂಡ್ ಮೇಲೆ ತೀವ್ರ ಅವಲಂಬನೆ ಹೊಂದಿರುವುದು ಕಂಡು ಬರುತ್ತಿದೆ. ಸಿದ್ದರಾಮಯ್ಯ ಅವರಿಂದ ಮುಖ್ಯಮಂತ್ರಿ ಸ್ಥಾನ ಬಿಡಿಸಿಕೊಡಲಾಗಿದೆ ಎಂಬ ಮರ್ಜಿಗೆ ಸಿಲುಕಿರುವ ಡಿ.ಕೆ.ಶಿವಕುಮಾರ್, ಮುಖ್ಯಮಂತ್ರಿಗಿರುವ ಎಲ್ಲಾ ಅಧಿಕಾರಗಳನ್ನು ಹೈಕಮಾಂಡ್ ಮುಂದಿಟ್ಟು, ಅಣತಿ ಪಾಲನೆಗಷ್ಟೇ ಸೀಮಿತವಾದಂತೆ ಕಂಡು ಬರುತ್ತಿದೆ. ವರಿಷ್ಠರ ವಿಪರೀತ ಹಸ್ತಕ್ಷೇಪ ರಾಜ್ಯ ಸರ್ಕಾರದ ಆಡಳಿತದ ಮೇಲೂ ಪರಿಣಾಮ ಬೀರುವ ಸಾಧ್ಯತೆಗಳು ಇವೆ ಎಂಬ ಟೀಕೆ ಕೇಳಿ ಬರುತ್ತಿದೆ.

## ರಾಜ್‌ಕುಮಾರ್ ಪುಣ್ಯಭೂಮಿ ಬಳಿ ರಸ್ತೆ ಕಾಮಗಾರಿ ವೇಳೆ ತಡೆಗೋಡೆ ಕುಸಿದು ಇಬ್ಬರ ಸಾವು

• ಉದಯವಾಹಿನಿ, ಬೆಂಗಳೂರು

ಕಂಠೀರವ ಸ್ಟುಡಿಯೋ ಮುಂಭಾಗ ಹಾಗೂ ಡಾ.ರಾಜ್‌ಕುಮಾರ್ ಪುಣ್ಯಭೂಮಿ ಬಳಿ ರಸ್ತೆ ಕಾಮಗಾರಿ ವೇಳೆ ಮಣ್ಣಿನ ತಡೆಗೋಡೆ ಕುಸಿದು ಇಬ್ಬರು ಸಾವನ್ನಪ್ಪಿರುವ ದಾರುಣ ಘಟನೆ ನಡೆದಿದೆ. ಕಾರ್ಮಿಕರಾದ ಸೋನಾರಾಮ್(26) ಪರಿಮಳ್(31) ಮೃತಪಟ್ಟವರು, ಮಣ್ಣಿನಡಿ ಸಿಲುಕಿ ಗಾಯಗೊಂಡು ಅಸ್ವಸ್ಥರಾಗಿರುವ ಸದಾನಂದ್, ಸುನೀಲ್, ಇರ್ಮಿಯಾಜ್ ಸೇರಿ ಮೂವರನ್ನು ಸ್ಥಳೀಯ ಆಸ್ಪತ್ರೆಗೆ ದಾಖಲಿಸಲಾಗಿದೆ.

ಮೃತ ಹಾಗೂ ಗಾಯಳುಗಳು ಜಾರ್ಖಂಡ್ ಹಾಗೂ ಪಶ್ಚಿಮ ಬಂಗಾಳ ಮೂಲದ ಕೂಲಿ ಕಾರ್ಮಿಕರಾಗಿದ್ದಾರೆ, ಉಳಿದ ಕಾರ್ಮಿಕರನ್ನು ರಕ್ಷಿಸಲಾಗಿದೆ. ಮಣ್ಣು ಕುಸಿದ ತಕ್ಷಣವೇ ಹೊರಗೆ ಕೆಲಸ ಮಾಡುತ್ತಿದ್ದ ಮೂವರು ಕಾರ್ಮಿಕರು ಹೆದರಿ ಓಡಿ ಹೋಗಿದ್ದಾರೆ. ಬಿಡಿಎ ವತಿಯಿಂದ ಅಂಡರ್ ಪಾಸ್ ಕಾಮಗಾರಿ ಮಡೆಯುತ್ತಿದ್ದ ವೇಳೆ ಕಾಂಕ್ರೀಟ್ ಹಾಕಲು ಗುಂಡಿಯಲ್ಲಿ ತುಂಬಿದ್ದ ನೀರು ಖಾಲಿ ಮಾಡಿದಾ ಬೃಹತ್ ಗುಂಡಿಯ ಮಣ್ಣಿನ ತಡೆಗೋಡೆ ಇಂದು ಬೆಳಿಗ್ಗೆ 11ರ ವೇಳೆ ಏಕಾಏಕಿ ಕುಸಿದು ಬಿದ್ದು ಇಬ್ಬರು ಕಾರ್ಮಿಕರು ಮೃತಪಟ್ಟಿದ್ದು, ಗಾಯಗೊಂಡ ಮೂವರನ್ನು ರಕ್ಷಿಸಿ ಆಸ್ಪತ್ರೆಗೆ ದಾಖಲಿಸಲಾಗಿದೆ.

ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ಮೂವರು ಸ್ಥಿತಿ ಗಂಭೀರವಾಗಿದೆ. ಐದಾರು ಮಂದಿ ಕಾರ್ಮಿಕರು ಮಣ್ಣಿನಡಿಯಲ್ಲಿ ಸಿಲುಕಿಕೊಂಡಿದ್ದವರನ್ನು ರಕ್ಷಿಸಲಾಗಿದ್ದು, ಸಣ್ಣಪುಟ್ಟ ಗಾಯಗಳೊಂದಿಗೆ ಅವರೆಲ್ಲರೂ ಪಾರಾಗಿದ್ದಾರೆ. ಅಂಡರ್‌ಪಾಸ್ ಕಾಮಗಾರಿಗಾಗಿ ರಸ್ತೆಯಲ್ಲಿ ಸುಮಾರು 20 ಅಡಿ ಆಳದವರೆಗೆ ಮಣ್ಣನ್ನು ತೋಡಲಾಗಿತ್ತು. ಎಂದಿನಂತೆ ಕಾರ್ಮಿಕರು ಕಾಮಗಾರಿಯಲ್ಲಿ ತೊಡಗಿಸಿಕೊಂಡಿದ್ದಾಗ ಮೇಲಿಂದ ಏಕಾಏಕಿ ಮಣ್ಣಿನ ತಡೆಗೋಡೆ ಕುಸಿದುಬಿದ್ದಿದೆ. ಈ ವೇಳೆ ಸ್ಥಳದಲ್ಲಿದ್ದ ಐವರು ಕಾರ್ಮಿಕರು ಮಣ್ಣಿನ ಅಡಿಯಲ್ಲಿ ಸಿಲುಕಿ ಉಸಿರಾಡಲಾಗದೆ ನರಳಾಡಿದ್ದಾರೆ.



'ನಾನು ಶಾಸಕನಾಗುವ ಮುನ್ನವೇ ಪ್ರಾರಂಭವಾಗಿದ್ದ ಈ ಕಾಮಗಾರಿಯು ಅರ್ಧಂಬರ್ಧ ನಿಂತುಹೋಗಿತ್ತು. ಇದಕ್ಕಾಗಿ ಧರಣಿ ಕುಳಿತು 2023ರ ಆರಂಭದಲ್ಲಿ ಅನುಮೋದನೆ ಕೊಡಿಸಿ ಮತ್ತೆ ಕೆಲಸ ಪ್ರಾರಂಭವಾಗುವಂತೆ ಮಾಡಿದೆ. ಆದರೆ ಅಧಿಕಾರಿಗಳು ಸೂಕ್ತ ಯೋಜನೆ ಮತ್ತು ಜಾಗರೂಕತೆ ವಹಿಸದೆ ಕೆಲಸ ಮಾಡಿರುವುದೇ ಈ ಅನಾಹುತಕ್ಕೆ ಕಾರಣ ಎಂದು ಅವರು ಆಕ್ರೋಶ ವ್ಯಕ್ತಪಡಿಸಿದರು.

## ಇಂದಿನಿಂದ ವಿಧಾನಮಂಡಲ ಅಧಿವೇಶನ

• ಉದಯವಾಹಿನಿ, ಬೆಂಗಳೂರು



ವಿಧಾನ ಸಭೆ ಮತ್ತು ವಿಧಾನ ಪರಿಷತ್ ಅಧಿವೇಶನ ಆ.13 ರಿಂದ 27 ರವರೆಗೆ ನಡೆಯಲಿರುವ ಹಿನ್ನಲೆಯಲ್ಲಿ ವಿಧಾನಸೌಧದ ಸುತ್ತಲು 2ಕಿ.ಮೀ ವ್ಯಾಪ್ತಿಯಲ್ಲಿ ನಗರ ಪೊಲೀಸ್ ಆಯುಕ್ತ ಸೀಮಂತ್‌ಕುಮಾರ್ ಸಿಂಗ್ ನಿಷೇಧಾಜ್ಞೆ ಜಾರಿ ಮಾಡಿದ್ದಾರೆ.

ಈ ಸಂದರ್ಭದಲ್ಲಿ ವಿವಿಧ ರಾಜಕೀಯ ಪಕ್ಷಗಳು ಮತ್ತು ವಿವಿಧ ಸಂಘಟನೆಗಳು ತಮ ಬೇಡಿಕೆಗಳಿಗೆ ಒತ್ತಾಯಿಸಿ ಪ್ರತಿಭಟನೆ, ಧರಣಿ, ವಿಧಾನಸೌಧ ಮುತ್ತಿಗೆ ಕಾರ್ಯಕ್ರಮಗಳನ್ನು ಹಮಿಕೊಳ್ಳುವ ಸಾಧ್ಯತೆ ಇರುತ್ತದೆ. ಹಾಗಾಗಿ ಅಧಿವೇಶನ ಕಾರ್ಯ ಕಲಾಪಗಳಿಗೆ ಅಡಚಣೆ ಉಂಟಾಗು ವುದಲ್ಲದೇ ಸಾರ್ವಜನಿಕ ನೆಮದಿಗೆ ಭಂಗ ಹಾಗೂ ಸುಮಗ ಸಂಚಾರಕ್ಕೆ ತೊಂದರೆ ಉಂಟಾಗುವ ಸಾಧ್ಯತೆ ಇರುವುದರಿಂದ ವಿಧಾನಸೌಧದ ಸುತ್ತ ನಿಷೇಧಾಜ್ಞೆ ಹೊರಡಿಸಲಾಗಿದೆ.

ಆ.15 ರಂದು ವಿಧಾನಸೌಧದಲ್ಲಿ ಫ್ರೀಡಂ ಹಬ್ಬದ ಸಂಭ್ರಮಾಚರಣೆ ಕಾರ್ಯಕ್ರಮ ಹೊರತುಪಡಿಸಿ ನಿಷೇಧಾಜ್ಞೆ ವಿಧಿಸಲಾಗಿದೆ ಎಂದು ಅವರು ಪ್ರತಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ನಶೆಮುಕ್ತ ಕರ್ನಾಟಕ ನಿರ್ಮಾಣಕ್ಕೆ ಪೊಲೀಸ್ ಇಲಾಖೆ ಮುಂಚೂಣಿ

• ಉದಯವಾಹಿನಿ, ಬೆಂಗಳೂರು

ಕರ್ನಾಟಕವನ್ನು ನಶೆಮುಕ್ತ ರಾಜ್ಯವನ್ನಾಗಿಸುವ ಮುಖ್ಯಮಂತ್ರಿ ಅವರ ಆಶಯವನ್ನು ಸಾಕಾರಗೊಳಿಸುವ ಜವಾಬ್ದಾರಿ ರಾಜ್ಯದ ಪೊಲೀಸ್ ಇಲಾಖೆಯ ಮೇಲಿದೆ. ಮಾದಕ ವಸ್ತುಗಳ ಮಾರಾಟ ಹಾಗೂ ಬಳಕೆಯನ್ನು ಸಂಪೂರ್ಣವಾಗಿ ನಿಯಂತ್ರಿಸುವ ನಿಟ್ಟನಲ್ಲಿ ಪೊಲೀಸರು ಪರಿಣಾಮಕಾರಿ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಗೃಹ ಸಚಿವ ಪ್ರಿಯಾಂಕ್ ಖರ್ಗೆ ಸೂಚಿಸಿದರು. ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ಮುಖ್ಯಮಂತ್ರಿ ಅವರೊಂದಿಗೆ ನಡೆದ ಸರ್ಕಾರಿ ನೌಕರರ ಸಂವಾದ ಕಾರ್ಯಕ್ರಮದಲ್ಲಿ ಮಾತನಾಡಿದ ಸಚಿವರು, ಮಾದಕ ವಸ್ತುಗಳ ವಿರುದ್ಧ ಕಠಿಣ ಕ್ರಮಗಳ ಜೊತೆಗೆ ಜನರಲ್ಲಿ, ವಿಶೇಷವಾಗಿ ಯುವಜನರಲ್ಲಿ ಜಾಗೃತಿ ಮೂಡಿಸುವ ಕಾರ್ಯಕ್ಕೂ ಆದ್ಯತೆ ನೀಡಬೇಕು ಎಂದು ಹೇಳಿದರು.

ರಾಜ್ಯದಲ್ಲಿ ಹಾಗೂ 'ಬೇಡ ಅಭಿಯಾನಗಳ ಮೂಲಕ ಮಾದಕ ವಸ್ತುಗಳ ದುಷ್ಪರಿಣಾಮಗಳ ಕುರಿತು ಜಾಗೃತಿ ಮೂಡಿಸಲಾಗುತ್ತಿದೆ. ಇದೇ ಮಾದರಿಯಲ್ಲಿ ತಾಲ್ಲೂಕು ಮಟ್ಟದಲ್ಲಿಯೂ ಜಾಗೃತಿ ಕಾರ್ಯಕ್ರಮಗಳನ್ನು ಆಯೋಜಿಸಿ, ಯುವಕರು ಹಾಗೂ ಸಾರ್ವಜನಿಕರಲ್ಲಿ ಮಾದಕ ವಸ್ತುಗಳ ವಿರುದ್ಧ ಅರಿವು ಮೂಡಿಸುವಂತೆ ತಾಲ್ಲೂಕು ಮಟ್ಟದ ಪೊಲೀಸ್ ಅಧಿಕಾರಿಗಳಿಗೆ ನಿರ್ದೇಶನ ನೀಡಲಾಗಿದೆ ಎಂದು ತಿಳಿಸಿದರು. ಬರ ಪರಿಸ್ಥಿತಿಯಿಂದ ಉಂಟಾದ ಕುಡಿಯುವ ನೀರಿನ ಸಮಸ್ಯೆಯನ್ನು ಎದುರಿಸಲು ರೂಪಿಸಿ ಜಾರಿಗೊಳಿಸಲಾಗಿದ್ದ ಪ್ರಮಾಣಿತ ಕಾರ್ಯಾಚರಣಾ ವಿಧಾನ ಮಾದರಿಯನ್ನು ಗಮನದಲ್ಲಿಟ್ಟುಕೊಂಡು, ಪರಿಸ್ಥಿತಿಗೆ ಅನುಗುಣವಾಗಿ ಇಲಾಖೆಗಳು ಪೂರ್ವಸಿದ್ಧತೆ ಹಾಗೂ ಸಮನ್ವಯದಿಂದ ಕಾರ್ಯನಿರ್ವಹಿಸಬೇಕು ಎಂದು ಸಚಿವರು ಅಧಿಕಾರಿಗಳಿಗೆ ಸೂಚಿಸಿದರು.

## ವಂದೇ ಮಾತರಂ ಗೀತೆಯನ್ನು ಅವಮಾನಿಸಿದರೆ ಶಿಕ್ಷೆ ನೀಡುವ ಮಸೂದೆಗೆ ರಾಷ್ಟ್ರಪತಿ ಅಂಕಿತ

• ಉದಯವಾಹಿನಿ, ನವದೆಹಲಿ

ರಾಷ್ಟ್ರೀಯ ಗೀತೆ 'ವಂದೇಮಾತರಂ'ಗೆ ಉದ್ದೇಶಪೂರ್ವಕವಾಗಿ ಅಡ್ಡಿ ಅಥವಾ ಹಾಡು ತಡೆಯುವ ಮತ್ತು ಅಗೌರವ ತೋರಿದರೆ ಶಿಕ್ಷೆ ವಿಧಿಸುವ ಮಸೂದೆಗೆ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಮಂಗಳವಾರ ಒಪ್ಪಿಗೆ ನೀಡಿದ್ದಾರೆ. ಇದರಿಂದ, ರಾಷ್ಟ್ರೀಯ ಗೌರವಕ್ಕೆ ಅವಮಾನಗಳ ತಡೆಗಟ್ಟುವಿಕೆ (ತಿದ್ದುಪಡಿ) ಮಸೂದೆ-2026 ಕಾನೂನಾಗಿ ಮಾರ್ಪಟ್ಟಿದೆ.

ರಾಷ್ಟ್ರಗೀತೆಗೆ ನೀಡಲಾಗಿರುವ ಕಾನೂನು ರಕ್ಷಣೆಯನ್ನು ರಾಷ್ಟ್ರೀಯ ಗೀತೆ ವಂದೇ ಮಾತರಂಗೂ ನೀಡುವ ರಾಷ್ಟ್ರೀಯ ಗೌರವಕ್ಕೆ ಅವಮಾನಗಳ ತಡೆಗಟ್ಟುವಿಕೆ (ತಿದ್ದುಪಡಿ) ಮಸೂದೆಯನ್ನು ಜುಲೈ 30 ರಂದು ಲೋಕಸಭೆಯಲ್ಲಿ ಅಂಗೀಕರಿಸಿದರೆ, ರಾಜ್ಯಸಭೆಯಲ್ಲಿ ಇದಕ್ಕೂ ಒಂದು ದಿನ ಮುಂಚಿತವಾಗಿ ಒಪ್ಪಿಗೆ ಪಡೆಯಲಾಯಿತು.

ರಾಷ್ಟ್ರಗೀತೆ (ಜನಗಣ ಮನ) ಹಾಡಿಗೆ ಅವಮಾನ ಅಥವಾ ಗಾಯನದ ವೇಳೆ ಸಭೆಗೆ ತೊಂದರೆ ಉಂಟುಮಾಡಿದಲ್ಲಿ ಶಿಕ್ಷಾರ್ಹ ಅಪರಾಧ ಎಂದು ರಾಷ್ಟ್ರೀಯ ಗೌರವಕ್ಕೆ ಅವಮಾನ ತಡೆ ಕಾಯ್ದೆಯು ವಿವರಿಸುತ್ತದೆ. ಇದೀಗ, ವಂದೇ ಮಾತರಂ ಕೂಡ ಈ ಪಟ್ಟಿಯಲ್ಲಿ ಬರುತ್ತದೆ.

**ಅವಮಾನಿಸಿದರೆ ಏನು ಶಿಕ್ಷೆ?:** ರಾಷ್ಟ್ರೀಯ ಗೀತೆಯನ್ನು ಅವಮಾನಿಸಿದಲ್ಲಿ 3



ವರ್ಷಗಳವರೆಗೆ ಜೈಲು ಶಿಕ್ಷೆ, ದಂಡ ಅಥವಾ ಎರಡನ್ನೂ ವಿಧಿಸಬಹುದಾಗಿದೆ. ಪುನರಾವರ್ತಿತ ಅಪರಾಧಗಳಿಗೆ ಕನಿಷ್ಠ 1 ವರ್ಷದ ಜೈಲು ಶಿಕ್ಷೆ ವಿಧಿಸಲು ಕಾನೂನಿನಲ್ಲಿ ಅವಕಾಶವಿದೆ.

ಸಂವಿಧಾನ ಸಭೆಯ ಅಧ್ಯಕ್ಷ ಡಾ.ರಾಜೇಂದ್ರ ಪ್ರಸಾದ್ ಅವರು ಜನವರಿ 24, 1950 ರಂದು ಭಾರತೀಯ ಸ್ವಾತಂತ್ರ್ಯ ಹೋರಾಟದಲ್ಲಿ ಐತಿಹಾಸಿಕ ಪಾತ್ರ ವಹಿಸಿದ ಬಂಕಿಮ್ ಚಂದ್ರ ಚಟರ್ಜಿ ಅವರು ರಚಿಸಿದ 'ವಂದೇ ಮಾತರಂ' ಗೀತೆಯನ್ನು ರಾಷ್ಟ್ರಗೀತೆ 'ಜನ ಗಣ ಮನ' ದೊಂದಿಗೆ ಸಮಾನವಾಗಿ ಗೌರವಿಸುವ ಮತ್ತು ಸಮಾನ ಸ್ಥಾನಮಾನ ಹೊಂದಿರುತ್ತದೆ ಎಂದು ಮಸೂದೆಯಲ್ಲಿ ಉಲ್ಲೇಖಿಸಲಾಗಿದೆ. ಇದೇ **ಮೊದಲ ಸಲ ಕೆಂಪು ಕೋಟೆ ಮೇಲೆ ಗಾಯನ:** ಮುಂಬರುವ ಸ್ವಾತಂತ್ರ್ಯ ದಿನಾಚರಣೆ ಸಮಾರಂಭದಲ್ಲಿ ಇದೇ ಮೊದಲ ಬಾರಿಗೆ ಕೆಂಪು ಕೋಟೆಯ ಕೋಟೆ ಮೇಲೆ ವಂದೇಮಾತರಂ ಗೀತೆಯನ್ನು ಹಾಡಲಾಗುವುದು ಎಂದು ಕೇಂದ್ರ ಗೃಹ ಸಚಿವಾಲಯ ತಿಳಿಸಿದೆ.

### 6 ಚರಣ ನುಡಿಸುವುದು ಕಡ್ಡಾಯ

ರಾಷ್ಟ್ರೀಯ ಗೀತೆಯಲ್ಲಿನ 6 ಚರಣಗಳಲ್ಲಿ ಸರ್ಕಾರಿ ಸಭೆ ಸಮಾರಂಭ, ಶಾಲೆಗಳಲ್ಲಿ ನುಡಿಸುವುದು ಕಡ್ಡಾಯ ಎಂದು ಕೇಂದ್ರ ಗೃಹ ಸಚಿವಾಲಯವು ನಿರ್ದೇಶನ ಹೊರಡಿಸಿದೆ. ಜನವರಿ 28 ರಂದು ಹೊರಡಿಸಿದ ಆದೇಶದಲ್ಲಿ, ಹಾಡಿನ ಅವಧಿ 3 ನಿಮಿಷ 10 ಸೆಕೆಂಡುಗಳು. ರಾಷ್ಟ್ರಪತಿಗಳ ಆಗಮನ, ರಾಷ್ಟ್ರಧ್ವಜವನ್ನು ಹಾರಿಸುವುದು ಮತ್ತು ರಾಜ್ಯಪಾಲರ ಭಾಷಣಗಳಂತಹ ಅಧಿಕೃತ ಕಾರ್ಯಕ್ರಮಗಳಲ್ಲಿ ಗೀತೆಯನ್ನು ಹಾಡಬೇಕೆಂದು ಕಡ್ಡಾಯಗೊಳಿಸಲಾಗಿದೆ. ಮೊದಲು ರಾಷ್ಟ್ರಗೀತೆ ಜನ ಗಣ ಮನ ಹಾಡಬೇಕು, ನಂತರ ರಾಷ್ಟ್ರೀಯ ಗೀತೆ ವಂದೇ ಮಾತರಂ ಹಾಡಬೇಕು. ರಾಷ್ಟ್ರಗೀತೆಗೆ ನೀಡುವ ಎಲ್ಲಾ ಸಮಾನ ಗೌರವವನ್ನು ವಂದೇ ಮಾತರಂಗೂ ನೀಡಬೇಕು. ಅಂದರೆ ನುಡಿಸುವ ವೇಳೆ ಎದ್ದು ನಿಂತು ಗೌರವ ಸಲ್ಲಿಸಬೇಕು ಎಂದು ನಿರ್ದೇಶನದಲ್ಲಿ ಸೂಚಿಸಲಾಗಿದೆ.

## ತ್ರಿವರ್ಣ ಧ್ವಜಗಳನ್ನು ಎಲ್ಲೆಂದರಲ್ಲಿ ಎಸೆಯಬೇಡಿ, ಧ್ವಜ ಸಂಹಿತೆ ಕಟ್ಟುನಿಟ್ಟಾಗಿ ಪಾಲಿಸಿ

ಸ್ವಾತಂತ್ರ್ಯ ದಿನಾಚರಣೆಗೆ ದಿನಗಣನೆ ಶುರುವಾಗಿದ್ದು, ಕೇಂದ್ರ ಸರ್ಕಾರ ರಾಜ್ಯ ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೆ ಧ್ವಜ ಸಂಹಿತೆಯನ್ನು ಕಟ್ಟು ನಿಟ್ಟಾಗಿ ಪಾಲಿಸುವಂತೆ ಕೇಂದ್ರ ಗೃಹ ಸಚಿವಾಲಯ ಸೂಚನೆ ಹೊರಡಿಸಿದೆ. ಪ್ರಮುಖ ರಾಷ್ಟ್ರೀಯ, ಸಾಂಸ್ಕೃತಿಕ ಮತ್ತು ಕ್ರೀಡಾ ಕಾರ್ಯಕ್ರಮಗಳ ಸಂದರ್ಭದಲ್ಲಿ ಸಾಮಾನ್ಯ ಜನರು ಕಾಗದದ ಧ್ವಜಗಳನ್ನು ಕಾರ್ಯಕ್ರಮದ ಬಳಿಕ ನೆಲದ ಮೇಲೆ ಅಥವಾ ಎಲ್ಲೆಂದರಲ್ಲಿ ಎಸೆದು ಹೋಗದಂತೆ ಕಟ್ಟುನಿಟ್ಟಿನ ಸೂಚನೆಯನ್ನು ನೀಡಲಾಗಿದೆ. ಕೇಂದ್ರ ಗೃಹ ಸಚಿವಾಲಯದಿಂದ ಎಲ್ಲಾ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳ ಮುಖ್ಯ ಕಾರ್ಯದರ್ಶಿಗಳಿಗೆ ಕಳುಹಿಸಲಾದ ಸಂದೇಶದಲ್ಲಿ, ರಾಷ್ಟ್ರಧ್ವಜ ಪ್ರದರ್ಶನಕ್ಕೆ ಸಂಬಂಧಿಸಿದ ಕಾನೂನುಗಳು, ಕಾರ್ಯವಿಧಾನಗಳು ಮತ್ತು ಸಂಪ್ರದಾಯಗಳ ಬಗ್ಗೆ ಸಾರ್ವಜನಿಕರಲ್ಲಿ ಹಾಗೂ ಸರ್ಕಾರಿ ಸಂಸ್ಥೆಗಳು ಮತ್ತು ಏಜೆನ್ಸಿಗಳಲ್ಲಿ ಅರಿವಿನ ಕೊರತೆ ಕಂಡು ಬಂದಿದೆ. ಈ ನಿಟ್ಟಿನಲ್ಲಿ ಎಲೆಕ್ಟ್ರಾನಿಕ್ ಮತ್ತು ಮುದ್ರಣ ಮಾಧ್ಯಮಗಳಲ್ಲಿನ ಜಾಹೀರಾತುಗಳ ಮೂಲಕ ಅವುಗಳಿಗೆ ವ್ಯಾಪಕ ಪ್ರಚಾರ ನೀಡುವಂತೆ ಸೂಚಿಸಲಾಗಿದೆ. ಭಾರತದ ರಾಷ್ಟ್ರಧ್ವಜವು ನಮ್ಮ ದೇಶದ ಜನರ ಆಶೋತ್ತರಗಳನ್ನು ಪ್ರತಿನಿಧಿಸುತ್ತದೆ. ಅದಕ್ಕೆ ಗೌರವಯುತ ಸ್ಥಾನವನ್ನು ನೀಡಬೇಕು ಎಂದು ಸಂದೇಶದಲ್ಲಿ ಕೇಂದ್ರ ಸರ್ಕಾರದ ಅಧೀನ ಕಾರ್ಯದರ್ಶಿ ಕಮಲೇಶ್ ರಬಿದಾಸ್ ತಿಳಿಸಿದ್ದಾರೆ. ರಾಷ್ಟ್ರಧ್ವಜವು ಕೈಯಿಂದ ನೂಲಲ್ಪಟ್ಟು, ಕೈಮಗ್ಗದಲ್ಲಿ ನೇಯಲ್ಪಟ್ಟರಬೇಕು ಅಥವಾ ಯಂತ್ರದಿಂದ ತಯಾರಿಸಲ್ಪಟ್ಟರಬೇಕು.

**ಈ ದಿನದ ದರ** ಪೆಟ್ರೋಲ್: 111.37 ₹/L ಡೀಸೆಲ್ : 99.56₹/L ಬಂಗಾರ: ₹ 15,382 /Gram 24ct ₹ 14,100/Gram 22ct ಬೆಳ್ಳಿ: ₹255.00/

# ಎಂ-ಸ್ಯಾಂಡ್, ಕಲ್ಲಿನ ಬೆಲೆ ಏರಿಕೆ: ನಿರ್ಮಾಣ ಕಾಮಗಾರಿಗಳು ಸ್ಥಗಿತ, ಜಿಬಿಎ ಯೋಜನೆಗಳಿಗೂ ಹೊಡೆತ

• ಉದಯವಾಹಿನಿ, ಬೆಂಗಳೂರು

ನಗರ ಮತ್ತು ಸುತ್ತಮುತ್ತಲಿನ ಜಿಲ್ಲೆಗಳಲ್ಲಿ ಎಂ-ಸ್ಯಾಂಡ್, ಪಿ-ಸ್ಯಾಂಡ್, ಕಲ್ಲುಗಳ ಬೆಲೆಯಲ್ಲಿ ತೀವ್ರ ಏರಿಕೆಯಿಂದಾಗಿ ಕಟ್ಟಡ ನಿರ್ಮಾಣ ಚಟುವಟಿಕೆಗಳು ಅಸ್ತವ್ಯಸ್ತಗೊಂಡಿವೆ. ಇದರಿಂದ, ಗ್ರೇಟರ್ ಬೆಂಗಳೂರು ಪ್ರಾಧಿಕಾರ(ಜಿಬಿಎ) ವ್ಯಾಪ್ತಿಯಲ್ಲಿನ ಹಲವಾರು ಕಾಮಗಾರಿಗಳನ್ನು ಗುತ್ತಿಗೆದಾರರು ಸ್ಥಗಿತಗೊಳಿಸಿದ್ದಾರೆ. ನಿರ್ಮಾಣ ಸಾಮಗ್ರಿ ಸರಬರಾಜನ್ನು ತಮಿಳುನಾಡು ಇತರ ರಾಜ್ಯಗಳಿಗೆ ನಿರ್ಬಂಧಿಸಲು ಕ್ರಮ ಕೈಗೊಂಡ ನಂತರ ಈ ಸಮಸ್ಯೆ ಉಂಟಾಗಿದೆ. ಹೊಸೂರಿನ ಸುತ್ತಮುತ್ತಲಿನ ಕ್ರಷರ್‌ಗಳು ಈ ಹಿಂದೆ ಎಲೆಕ್ಟ್ರಾನಿಕ್ ಸಿಟಿ, ಆನೇಕಲ್, ಸರ್ಜಾಪುರ, ಎಚ್‌ಎಸ್‌ಆರ್ ಲೇಔಟ್, ಮಾರತಹಳ್ಳಿ, ವರ್ತೂರು, ವೈಟ್ ಫೀಲ್ಡ್, ಬನ್ನೇರುಘಟ್ಟ ಮತ್ತು ಬೆಂಗಳೂರಿನ ಇತರ ಭಾಗಗಳಿಗೆ ಪ್ರತಿದಿನ ಸುಮಾರು 500 ಟ್ರಕ್‌ಲೋಡ್‌ಗಳನ್ನು ಪೂರೈಸುತ್ತಿದ್ದವು. ಈ ಪೂರೈಕೆ ಸ್ಥಗಿತಗೊಂಡಿದ್ದರಿಂದ ಮಾದಪಟ್ಟಣ, ದೊಡ್ಡೇರಿ, ಲಕ್ಷ್ಮಿಪುರ, ಗೊಲ್ಲಹಳ್ಳಿ, ಚಿಕ್ಕನಹಳ್ಳಿ, ಬಿಡದಿ, ರಾಮನಗರ, ಆನೇಕಲ್, ಹಾರೋಹಳ್ಳಿ ಮತ್ತು ನೆಲಮಂಗಲ ಸುತ್ತಮುತ್ತಲಿನ ಕ್ರಷರ್‌ಗಳು ಮಾತ್ರ ಪೂರೈಸುತ್ತಿವೆ. ಹೆಚ್ಚಿನ ಪ್ರಮಾಣದಲ್ಲಿ ಪೂರೈಕೆ ಸಾಧ್ಯವಿಲ್ಲದ ಕಾರಣ ಸಮಸ್ಯೆ ಉಂಟಾಗಿದೆ. ಜುಲೈ 2 ರಂದು ತಾವರೆಕೆರೆ ಹೋಬಳಿಯ ಮಾದಪಟ್ಟಣದಲ್ಲಿರುವ ಕಾವೇರಿ ಕ್ರಷರ್ಸ್ ಕ್ವಾರಿಯಲ್ಲಿ ಸಂಭವಿಸಿದ ಬಂಡೆ ಕುಸಿತ ದುರಂತದಲ್ಲಿ 7 ಕಾರ್ಮಿಕರು ಸಾವನ್ನಪ್ಪಿದ ದುರಂತ ಸಂಭವಿಸಿದ ಬಳಿಕ ಪೂರೈಕೆಯ ಮೇಲೆ ಪರಿಣಾಮ ಬಿದ್ದಿದೆ. ಅಪಘಾತದ ನಂತರ, ಗಣಿ ಮತ್ತು ಭೂವಿಜ್ಞಾನ ಇಲಾಖೆ ಸುರಕ್ಷತಾ ನಿಯಮಗಳನ್ನು ಬಿಗಿಗೊಳಿಸಿತು. ಸುಮಾರು 1 ತಿಂಗಳ ಕಾಲ 53 ರಿಂದ 54 ಕ್ವಾರಿಗಳನ್ನು ಮುಚ್ಚಿತು.

ಹಲವಾರು ಕಾರ್ಮಿಕರು ಭಯದಿಂದ ತಮ್ಮ ಊರುಗಳಿಗೆ ವಾಪಸ್ಸಾದರು. ಜೊತೆಗೆ, ಹತ್ತಿರದ ಗ್ರಾಮಸ್ಥರ ವಿರೋಧವೂ ಕ್ರಷರ್ ಕಾರ್ಯಾಚರಣೆ ನಿಲ್ಲುವಂತೆ ಮಾಡಿದೆ.ಇದಕ್ಕೂ ಮೊದಲು, ಕ್ರಷರ್‌ಗಳು ದಿನವಿಡೀ ಕಾರ್ಯನಿರ್ವಹಿಸುತ್ತಿದ್ದವು. 2,500 ರಿಂದ 3,000 ಟನ್‌ಗಳನ್ನು ಉತ್ಪಾದಿಸುತ್ತಿದ್ದವು. ಉತ್ಪಾದನೆಯು ಈಗ ಸುಮಾರು 1,000 ರಿಂದ 1,500 ಟನ್‌ಗಳಿಗೆ ಇಳಿದಿದೆ. ಇದರ ಪರಿಣಾಮವಾಗಿ ಕ್ರಷರ್ ಘಟಕಗಳ ಹೊರಗೆ ಟ್ರಕ್‌ಗಳ ದೊಡ್ಡ ಸರತಿ ಸಾಲು ಇದೆ.

ಎಂ ಸ್ಯಾಂಡ್ ಮರಳಿನ ಬೆಲೆ ಟನ್‌ಗೆ ಸುಮಾರು 450 ರಿಂದ 800, ಪಿ-ಸ್ಯಾಂಡ್ ಬೆಲೆ 900 ರಿಂದ 1,200, ಸೈಜು ಕಲ್ಲಿನ 400 ರಿಂದ 800 ಕ್ಕೆ ಏರಿವೆ. ಸಾಗಣೆ ವೆಚ್ಚದ ನಂತರ, ಎಂ-ಸ್ಯಾಂಡ್ ಪ್ರತಿ ಟನ್‌ಗೆ 1,000 ರಿಂದ 1,200 ಮತ್ತು ಪಿ-ಸ್ಯಾಂಡ್ ಅನ್ನು 1,600 ರಿಂದ 1,800 ವರೆಗೆ ಮಾರಾಟ ಮಾಡಲಾಗುತ್ತಿದೆ. ಮಾರುಕಟ್ಟೆ ದರಗಳು ಗುಣಮಟ್ಟ ಮತ್ತು ಸ್ಥಳಕ್ಕೆ ಅನುಗುಣವಾಗಿ ಬದಲಾಗುತ್ತವೆ. ಮೊದಲು ಟನ್‌ಗೆ 725 ರಿಂದ 750 ಬೆಲೆಯ ಡಬಲ್-ವಾಶ್ಡ್ ಎಂ-ಸ್ಯಾಂಡ್ ಈಗ 900 ರಿಂದ 1,000 ಬೆಲೆಗೆ ಬಿಕರಿಯಾಗುತ್ತಿದೆ. ಟನ್‌ಗೆ 600-650 ರಿಂದ 750-900 ಕ್ಕೆ ಏರಿವೆ.

# ಕೂದಲೆಳೆ ಅಂತರದಲ್ಲಿ ಸೆಕ್ಯುರಿಟಿ ಪಾರು

• ಉದಯವಾಹಿನಿ, ಬೆಂಗಳೂರು

ಬೆಂಗಳೂರಿನಲ್ಲಿ ಅಪಾರ್ಟ್‌ಮೆಂಟ್‌ನ ಗೇಟ್ ಒಳಗೆ ಕಾರೊಂದು ಏಕಾಏಕಿ ನುಗ್ಗಿದ್ದು, ಅಲ್ಲಿ ಕುಳಿತಿದ್ದ ಭದ್ರತಾ ಸಿಬ್ಬಂದಿಯೊಬ್ಬರು ಕೂದಲೆಳೆಯ ಅಂತರದಲ್ಲಿ ಅಪಾಯದಿಂದ ಪಾರಾದ ಘಟನೆ ನಡೆದಿದೆ. ವೇಗವಾಗಿ ಬಂದ ಕಾರು ಅಪಾರ್ಟ್‌ಮೆಂಟ್‌ನ ಗೇಟ್‌ಗೆ ರಭಸದಿಂದ ಡಿಕ್ಕಿ ಹೊಡೆದಿದ್ದು, ಅಲ್ಲಿದ್ದ ಭದ್ರತಾ ಸಿಬ್ಬಂದಿ ಕಾರಿನ ಡಿಕ್ಕಿಯಿಂದ ಕೂದಲೆಳೆಯ ಅಂತರದಲ್ಲಿ ತಪ್ಪಿಸಿಕೊಂಡಿದ್ದಾರೆ.

ಘಟನೆಯ ದೃಶ್ಯ ಸಿಸಿಟಿವಿ ಕ್ಯಾಮೆರಾದಲ್ಲಿ ಸೆರೆಯಾಗಿದೆ. ವಸತಿ ಸಮುಚ್ಚಯಗಳ ಪ್ರವೇಶ ದ್ವಾರಗಳಲ್ಲಿ ಕರ್ತವ್ಯ ನಿರ್ವಹಿಸುವ ಭದ್ರತಾ ಸಿಬ್ಬಂದಿ ಎದುರಿಸುವ ಅಪಾಯವನ್ನು ಈ ಘಟನೆ ಎತ್ತಿ ತೋರಿಸಿದೆ. ಅಲ್ಲದೆ, ಕಿರಿದಾದ ಪ್ರದೇಶಗಳಲ್ಲಿ ವಾಹನ ಚಲಾಯಿಸುವಾಗ ಹೆಚ್ಚಿನ ಎಚ್ಚರಿಕೆ ವಹಿಸುವ ಅಗತ್ಯವನ್ನೂ ಇದು ಒತ್ತಿಹೇಳಿದೆ.

## ವಿದೇಶ ಪ್ರವಾಸ ಅಲ್ಲ, ಇದು ಅಂಚೆ ಪಯಣ; ವಿಶಿಷ್ಟ ಪಾಸ್‌ಪೋರ್ಟ್ ಯೋಜನೆ!



ಉದಯವಾಹಿನಿ ಚಿತ್ರ

• ಉದಯವಾಹಿನಿ, ಬೆಂಗಳೂರು

ಪಾಸ್‌ಪೋರ್ಟ್ ಎಂದರೆ ವಿದೇಶಗಳಿಗೆ ಪ್ರಯಾಣಿಸುವಾಗ ವ್ಯಕ್ತಿಯ ಗುರುತು ಮತ್ತು ರಾಷ್ಟ್ರೀಯತೆಯನ್ನು ದೃಢೀಕರಿಸುವ ಅಧಿಕೃತ ಸರ್ಕಾರಿ ದಾಖಲೆಯಾಗಿದ್ದು, ಇದನ್ನು ಕೇಂದ್ರ ಸರ್ಕಾರ ಮಾತ್ರವೇ ಕೊಡುತ್ತೆ! ಆದ್ರೆ, ಇತ್ತೀಚೆಗೆ ನಮ್ಮ ಕರ್ನಾಟಕದಲ್ಲಿ ಭಾರತೀಯ ಅಂಚೆ ಇಲಾಖೆ ವಿಶಿಷ್ಟವಾದ ಪಾಸ್‌ಪೋರ್ಟ್ ಬಿಡುಗಡೆ ಮಾಡಿದ್ದು, ಇದನ್ನ ಖರೀದಿಸಲು ಜನರು ಕ್ಯೂ ನಿಲ್ಲುತ್ತಿದ್ದಾರೆ. ಫಿಲಾಟೆಲಿ ಪಾಸ್‌ಪೋರ್ಟ್ ಎಂಬುದು ಇಂಡಿಯಾ ಪೋಸ್ಟ್ (ಭಾರತೀಯ ಅಂಚೆ ಇಲಾಖೆ) ಪ್ರವಾಸಿಗರು ಮತ್ತು ಸ್ಟಾಂಪ್ ಸಂಗ್ರಾಹಕರಿಗಾಗಿ ಪರಿಚಯಿಸಿರುವ ಒಂದು ವಿಶೇಷ ಸ್ಮರಣಿಕೆ ಬುಕ್‌ಲೆಟ್ ಆಗಿದೆ. ಇತ್ತೀಚೆಗೆ ಕರ್ನಾಟಕ ಅಂಚೆ ವೃತ್ತವು ಇದರ ಹೊಸ ಆವೃತ್ತಿಯನ್ನು ಬಿಡುಗಡೆ ಮಾಡಿದಾಗ, ಬೆಂಗಳೂರಿನ ಜಿಪಿಒ ಸೇರಿದಂತೆ ರಾಜ್ಯದ ಪ್ರಮುಖ ಅಂಚೆ ಕಚೇರಿಗಳಲ್ಲಿ ಇದನ್ನು ಖರೀದಿಸಲು ಜನ ನೂರಾರು ಮೀಟರ್ ಉದ್ದದ ಕ್ಯೂ ನಿಂತಿದ್ದರು.

ಇದು ನೋಡಲು ಅಸಲಿ ಪಾಸ್‌ಪೋರ್ಟ್‌ನಂತೆಯೇ ಇರುವ ನೀಲಿ ಬಣ್ಣದ ಚಿಕ್ಕ ಪುಸ್ತಕವಾಗಿದೆ. ಇದರಲ್ಲಿ, ನೀವು ಕರ್ನಾಟಕದ ವಿವಿಧ ಪ್ರವಾಸಿ ತಾಣಗಳು ಅಥವಾ ಪರಂಪರೆ ಸ್ಥಳಗಳಿಗೆ ಭೇಟಿ ನೀಡಿದಾಗ, ಆ ನೆನಪನ್ನು ಡಿಜಿಟಲ್ ಫೋಟೋಗಳ ಬದಲಿಗೆ ಭೌತಿಕವಾಗಿ ದಾಖಲಿಸಲು ಇರುವ ವಿಶಿಷ್ಟ ವಿಧಾನವಿದು. ಅಂದ್ರೆ, ಈ ಫಿಲಟೇಲಿ ಪಾಸ್‌ಪೋರ್ಟ್ ಪುಟಗಳಲ್ಲಿ ಕರ್ನಾಟಕದ ಐತಿಹಾಸಿಕ ಸ್ಥಳಗಳ ಹತ್ತಿರದ ಅಂಚೆ ಕಚೇರಿಗಳ ವಿಶೇಷ ಮುದ್ರೆ ಮತ್ತು ಅಂಚೆ ಚೀಟಿಗಳನ್ನು ಸಂಗ್ರಹಿಸಬಹುದಾಗಿದೆ.

## ವರ್ಷ ಮೀರಿದ ಮಾಂಸಾಹಾರ ಉತ್ಪನ್ನ ಪತ್ತೆ, ಗಂಭೀರ ಉಲ್ಲಂಘನೆ ಆರೋಪ

ಉದಯವಾಹಿನಿ ಚಿತ್ರ



• ಉದಯವಾಹಿನಿ, ಬೆಂಗಳೂರು

ಬೆಂಗಳೂರಿನಲ್ಲಿ ಆಹಾರ ಸುರಕ್ಷತಾ ಇಲಾಖೆ ನಡೆಸಿದ ಮೂರು ದಿನಗಳ ವಿಶೇಷ ಕಾರ್ಯಾಚರಣೆಯಲ್ಲಿ ಬರೋಬ್ಬರಿ 60 ತ್ರೀ ಸ್ಟಾರ್ ಹಾಗೂ ಫೈವ್ ಸ್ಟಾರ್ ಹೋಟೆಲ್‌ಗಳನ್ನು ತಪಾಸಣೆ ನಡೆಸಲಾಗಿದೆ. ತಪಾಸಣೆ ವೇಳೆ ಕೊಳೆತ ಮಾಂಸ, ಅವಧಿ ಮೀರಿದ ಆಹಾರ ಪದಾರ್ಥಗಳು, ಕೊಳೆತ ತರಕಾರಿಗಳು, ಹಲವು ಬಾರಿ ಬಳಸಿದ ಅಡುಗೆ ಎಣ್ಣೆ ಸೇರಿದಂತೆ ಹಲವು ಆಹಾರ ಸುರಕ್ಷತಾ ನಿಯಮ ಉಲ್ಲಂಘನೆಗಳು ಪತ್ತೆಯಾಗಿವೆ. ಅಚ್ಚರಿ ಎಂದರೆ, ಒಂದು ವರ್ಷಕ್ಕೂ ಹೆಚ್ಚು ಅವಧಿ ಮೀರಿರುವ ಮಾಂಸಾಹಾರ ಉತ್ಪನ್ನಗಳೂ ಪತ್ತೆಯಾಗಿವೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಕಾರ್ಯಾಚರಣೆಯ ವೇಳೆ ಬೆಂಗಳೂರು ನಗರ ಜಿಲ್ಲೆಯಲ್ಲಿ ಒಟ್ಟು 60 ತ್ರೀ-ಸ್ಟಾರ್ ಮತ್ತು ಫೈವ್-ಸ್ಟಾರ್ ಹೋಟೆಲ್‌ಗಳನ್ನು ತಪಾಸಣೆ ನಡೆಸಲಾಗಿದೆ.

ಒಟ್ಟು 77 ಆಹಾರ ಮಾದರಿಗಳನ್ನು ಸಂಗ್ರಹಿಸಿ, ಗುಣಮಟ್ಟ ಹಾಗೂ ಆಹಾರ ಸುರಕ್ಷತಾ ಮಾನದಂಡಗಳ ಪಾಲನೆಯನ್ನು ಪರಿಶೀಲಿಸಲು ಆಹಾರ ಪ್ರಯೋಗಾಲಯಗಳಿಗೆ ಕಳುಹಿಸಲಾಗಿದೆ. ವಿವಿಧ ಹೋಟೆಲ್‌ಗಳು ಮತ್ತು ಆಹಾರ ಮಳಿಗೆಗಳಿಂದ ಚಿಕನ್, ಮಾಂಸ, ಮೀನು, ಬ್ರೆಡ್, ಮೇಯನೇಸ್, ಅಡುಗೆ ಎಣ್ಣೆ, ಹೊಸ ಎಣ್ಣೆ, ಮೊಸರು, ಬೇಳೆ, ಕಡಲೆ/ಚಣ, ಕೊತ್ತಂಬರಿ, ಚಟ್ನಿ ಹಾಗೂ ಮ್ಯಾರಿನೇಟ್ ಮಾಡಲಾದ ಆಹಾರ ಉತ್ಪನ್ನಗಳ ಮಾದರಿಗಳನ್ನು ಸಂಗ್ರಹಿಸಿ ವಿಶ್ಲೇಷಣೆಗಾಗಿ ಪ್ರಯೋಗಾಲಯಗಳಿಗೆ ಕಳುಹಿಸಲಾಗಿದೆ.

ಬೆಂಗಳೂರಿನ ಸ್ಟಾರ್ ಹೋಟೆಲ್‌ಗಳ ವಿರುದ್ಧ ಕ್ರಮ ತಪಾಸಣೆ ವೇಳೆ ನಿಯಮಗಳಿಗೆ ಅನುಗುಣವಾಗಿರದ ಲೇಬಲಿಂಗ್, ತಪ್ಪು ಬ್ರ್ಯಾಂಡಿಂಗ್, ಅವಧಿ ಮೀರಿದ ಆಹಾರ ಉತ್ಪನ್ನಗಳ ಸಂಗ್ರಹ, ಮಾಂಸಮೀನುಕೋಳಿ ಮಾಂಸದ ಅಸಮರ್ಪಕ ಸಂಗ್ರಹಣೆ, ಅಸ್ವಚ್ಛ ಆಹಾರ ನಿರ್ವಹಣಾ ಪರಿಸ್ಥಿತಿ, ತರಕಾರಿಗಳಲ್ಲಿ ಶಿಲೀಂಧ್ರ ಬೆಳವಣಿಗೆ ಹಾಗೂ ಸಸ್ಯಾಹಾರಿ ಮತ್ತು ಮಾಂಸಾಹಾರಿ ಆಹಾರ ಪದಾರ್ಥಗಳ ಅಸಮರ್ಪಕ ಪ್ರತ್ಯೇಕ ಸಂಗ್ರಹಣೆ ಸೇರಿದಂತೆ ಹಲವು ಉಲ್ಲಂಘನೆಗಳು ಕಂಡುಬಂದಿವೆ.

> ಉಲ್ಲಂಘನೆಗಳ ಹಿನ್ನೆಲೆಯಲ್ಲಿ ಸಂಬಂಧಪಟ್ಟ ಹೋಟೆಲ್‌ಗಳಿಗೆ ನೋಟಿಸ್ ಜಾರಿ ಮಾಡಲಾಗಿದೆ. ಅಲ್ಲದೆ, ಕಾನೂನು ಪ್ರಕಾರ ಮುಂದಿನ ಕ್ರಮಕ್ಕಾಗಿ ಸಂಬಂಧಪಟ್ಟ ತೀರ್ಪು ನೀಡುವ ಅಧಿಕಾರಿಗಳ ಮುಂದೆ ಪ್ರಕರಣ ದಾಖಲಿಸುವಂತೆ ಶಿಫಾರಸು ಮಾಡಲಾಗಿದೆ.

## ಎಸ್‌ಐಆರ್ ವಿರುದ್ಧ ನಟ ಆಕ್ರೋಶ, ನನ್ನ ಮತದಾನದ ಹಕ್ಕು ಕಿತ್ತುಕೊಂಡಿದ್ದಾರೆಂದು ಆಕ್ರೋಶ..!

• ಉದಯವಾಹಿನಿ, ಬೆಂಗಳೂರು

ಖ್ಯಾತ ನಟ ಪ್ರಕಾಶ್ ರಾಜ್ ಅವರಿಗೆ ಚುನಾವಣಾ ಆಯೋಗ ದೊಡ್ಡ ಶಾಕ್ ನೀಡಿದೆ. ಬೆಂಗಳೂರಿನ ಮತದಾರರ ಪಟ್ಟಿಯಿಂದ ಅವರ ಹೆಸರನ್ನು ಕೈಬಿಡಲಾಗಿದ್ದು, ಈ ಕುರಿತು ನಟ ಸೋಶಿಯಲ್ ಮೀಡಿಯಾದಲ್ಲಿ ವಿಡಿಯೋ ಹಂಚಿಕೊಳ್ಳುವ ಮೂಲಕ ತೀವ್ರ ಆಕ್ರೋಶ ಹೊರಹಾಕಿದ್ದಾರೆ. ಈ ಕುರಿತು ಅವರು ಸಾಮಾಜಿಕ ಜಾಲತಾಣದಲ್ಲಿ ವಿಡಿಯೋವೊಂದನ್ನು ಹಂಚಿಕೊಂಡಿರುವ ಅವರು, 'ಎಸ್‌ಐಆರ್ ಬಳಿಕ ಬೆಂಗಳೂರಿನ ಮತದಾರರ ಪಟ್ಟಿಯಿಂದ ನನ್ನ ಹೆಸರು ಅಳಿಸಲಾಗಿದೆ. ನನ್ನ ಮತದಾನದ ಹಕ್ಕನ್ನು ಮರಳಿ ಪಡೆಯಲು ಮುಂದಿನ ಪ್ರಕ್ರಿಯೆ ಏನು ಎಂಬುದನ್ನು ನೋಡುತ್ತೇನೆ ಎಂದು ಹೇಳಿದ್ದಾರೆ. ''ಸ್ನೇಹಿತರೇ, ನಿಮಗೆ ಒಂದು ಜೋಕ್ ಹೇಳಬೇಕು. ಎಸ್‌ಐಆರ್ ಬಳಿಕ ಬೆಂಗಳೂರಿನ ಮತದಾರರ ಪಟ್ಟಿಯಿಂದ ಮತದಾನದ ಹಕ್ಕು ಕಳೆದುಕೊಂಡಿರುವ 65 ಲಕ್ಷ ಮತದಾರರಲ್ಲಿ ನಾನೂ ಒಬ್ಬನಾಗಿದ್ದೇನೆ. ಚೆನ್ನಾಗಿದೆ ಅಲ್ಲವೇ?... ನಾನು ಈ ಕ್ಷೇತ್ರದಲ್ಲೇ ಹುಟ್ಟಿದ್ದೇನೆ. ಇಲ್ಲೇ ವಾಸಿಸಿದ್ದೇನೆ. ಇಲ್ಲಿಯೇ ಶಾಲೆ, ಕಾಲೇಜು ಹಾಗೂ ರಂಗಭೂಮಿಯಲ್ಲಿ ನಡೆಸಿದ್ದೇನೆ. ನಿಮ್ಮ ಮಾಹಿತಿಗಾಗಿ ಹೇಳುವುದಾದರೆ, ಇದೇ ಕ್ಷೇತ್ರದಿಂದ ನಾನು ಲೋಕಸಭೆ ಅಭ್ಯರ್ಥಿಯೂ ಆಗಿದ್ದೆ.

## ಸ್ವಾತಂತ್ರ್ಯೋತ್ಸವ ಸಂಭ್ರಮಕ್ಕೆ ಬೆಂಗಳೂರು ಸಜ್ಜು

• ಉದಯವಾಹಿನಿ, ಬೆಂಗಳೂರು

ಸ್ವಾತಂತ್ರ್ಯೋತ್ಸವ ಸಂಭ್ರಮಾಚರಣೆಗೆ ಸಿಲಿಕಾನ್ ಸಿಟಿ ಸಜ್ಜಾಗುತ್ತಿದ್ದು, ಸಿದ್ಧತೆಗಳು ಭರದಿಂದ ಸಾಗುತ್ತಿವೆ. ಈ ಹಿನ್ನೆಲೆಯಲ್ಲಿ ಬೆಂಗಳೂರು ಕೇಂದ್ರ ನಗರ ಪಾಲಿಕೆ (ಬಿಸಿಸಿ) ಆಯುಕ್ತ ಜಗದೀಶ್ ಜಿ ಅವರು ಸೋಮವಾರ ಫೀಲ್ಡ್ ಮಾರ್ಷಲ್ ಮಾಣೆಕ್‌ಶಾ ಪರೇಡ್ ಮೈದಾನಕ್ಕೆ ಭೇಟಿ ನೀಡಿ ಸಿದ್ಧತೆಗಳನ್ನು ಪರಿಶೀಲಿಸಿದರು. ನಿಗದಿತ ಸಮಯದೊಳಗೆ ಎಲ್ಲಾ ವ್ಯವಸ್ಥೆಗಳನ್ನು ಪೂರ್ಣಗೊಳಿಸುವಂತೆ ವಿವಿಧ ಇಲಾಖೆಗಳ ಅಧಿಕಾರಿಗಳಿಗೆ ಸೂಚನೆ ನೀಡಿದರು. ಮಾಣೆಕ್‌ಶಾ ಪರೇಡ್ ಮೈದಾನವನ್ನು ಪರಿಶೀಲಿಸಿದ ಆಯುಕ್ತರು, ವಿವಿಧ ಸರ್ಕಾರಿ ಇಲಾಖೆಗಳು ಕೈಗೊಂಡಿರುವ ಕಾಮಗಾರಿಗಳ ಪ್ರಗತಿಯನ್ನು ಅವಲೋಕಿಸಿದರು. ಲೋಕೋಪಯೋಗಿ ಇಲಾಖೆಯೊಂದಿಗೆ ಸಮನ್ವಯ ಸಾಧಿಸಿ ಮೈದಾನದ ಸ್ವಚ್ಛತೆ, ಸಮತಟ್ಟು ಮಾಡುವ ಕಾಮಗಾರಿ ಸೇರಿದಂತೆ ಅಗತ್ಯ ವ್ಯವಸ್ಥೆಗಳನ್ನು ಪೂರ್ಣಗೊಳಿಸುವಂತೆ ನಿರ್ದೇಶನ ನೀಡಿದರು. ಗಣ್ಯರು ಹಾಗೂ ಅತಿಥಿಗಳ ಪ್ರವೇಶ ದ್ವಾರಗಳು ಮತ್ತು ವಾಹನಗಳ ನಿಲುಗಡೆ ವ್ಯವಸ್ಥೆಯಲ್ಲಿ ಯಾವುದೇ ಲೋಪವಾಗದಂತೆ ಎಚ್ಚರಿಕೆ ವಹಿಸುವಂತೆ ಸೂಚಿಸಿದರು.

# ಬಿಡದಿ ಟೌನ್‌ಶಿಪ್ ಮಾದರಿ ಪರಿಹಾರ ನಮಗೂ ಕೊಡಿ

## ತುರ್ತು ಅಗತ್ಯ'' ಸೇರಿದಂತೆ ವಿವಿಧ ಮಾನದಂಡಗಳನ್ನು ಅವಲಂಬಿಸಿರುತ್ತದೆ ಎಂದು ಸರ್ಕಾರಿ ಅಧಿಕಾರಿಗಳು ತಿಳಿಸಿದ್ದಾರೆ.

• ಉದಯವಾಹಿನಿ, ಬೆಂಗಳೂರು

ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಪ್ರಸ್ತಾವಿತ ಬಿಡದಿ ಟೌನ್‌ಶಿಪ್ ಯೋಜನೆಗೆ ಭೂಸ್ವಾಧೀನ ಮಾಡಿಕೊಳ್ಳುವ ರೈತರಿಗೆ ಎಕರೆಗೆ 3 ಕೋಟಿ ರೂಪಾಯಿ ಪರಿಹಾರ ನೀಡುವುದಾಗಿ ಘೋಷಿಸಿರುವ ಬೆನ್ನಲ್ಲೇ, ರಾಜ್ಯದ ಇತರೆ ಭಾಗಗಳ ರೈತರು ಭವಿಷ್ಯದ ಎಲ್ಲಾ ಮೂಲಸೌಕರ್ಯ ಯೋಜನೆಗಳಿಗಾಗಿ ಭೂಸ್ವಾಧೀನ ಮಾಡುವಾಗಲೂ ಇದೇ ಮಾನದಂಡವನ್ನು ಅನುಸರಿಸಬೇಕೆಂದು ಆಗ್ರಹಿಸಿದ್ದಾರೆ.

ಆದರೆ, ಭೂಸ್ವಾಧೀನಕ್ಕೆ ನೀಡುವ ಪರಿಹಾರವು ಭೂಮಿಯ ಸ್ಥಳ, ಅಭಿವೃದ್ಧಿ ಯೋಜನೆಯ ಅನುಷ್ಠಾನದ ''ತುರ್ತು ಅಗತ್ಯ'' ಸೇರಿದಂತೆ ವಿವಿಧ ಮಾನದಂಡಗಳನ್ನು ಅವಲಂಬಿಸಿರುತ್ತದೆ ಎಂದು ಸರ್ಕಾರಿ ಅಧಿಕಾರಿಗಳು ತಿಳಿಸಿದ್ದಾರೆ.

ಮುಖ್ಯಮಂತ್ರಿ ಡಿ ಕೆ ಶಿವಕುಮಾರ್ ಅವರು ಸೋಷಿಯಲ್ ಮೀಡಿಯಾದಲ್ಲಿ, ಹಿಂದಿನ ಸರ್ಕಾರ ಎಕರೆಗೆ 25 ಲಕ್ಷ ರೂಪಾಯಿ ಪರಿಹಾರ ನೀಡಲು ಮುಂದಾಗಿತ್ತು. ಆದರೆ ನಮ್ಮ ಸರ್ಕಾರ ಎಕರೆಗೆ 3 ಕೋಟಿ ರೂಪಾಯಿ ನೀಡಲು ನಿರ್ಧರಿಸಿದೆ. ಈ ಪರಿಹಾರಕ್ಕೆ ಒಪ್ಪದವರಿಗೆ ಅಭಿವೃದ್ಧಿಪಡಿಸಿದ ಭೂಮಿಯಲ್ಲಿ ಶೇ.50ರಷ್ಟು ಪಾಲು ನೀಡಲಾಗುವುದು ಎಂದು ತಿಳಿಸಿದ್ದಾರೆ.

ಆದರೆ, ಪ್ರಸ್ತಾವಿತ ಎಐ ಸಿಟಿ ಯೋಜನೆಗಾಗಿ ಬಿಡದಿಯ ಫಲವತ್ತಾದ ಕೃಷಿ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳುವ ರಾಜ್ಯ ಸರ್ಕಾರದ ನಿರ್ಧಾರದಿಂದ ರೈತರು ಅಸಮಾಧಾನಗೊಂಡಿದ್ದಾರೆ. ರೈತ ಮುಖಂಡ ಕುರುಬೂರು ಶಾಂತಕುಮಾರ್, ಮೂಲಸೌಕರ್ಯ ಯೋಜನೆಗಳಿಗಾಗಿ ಫಲವತ್ತಾದ ಅಥವಾ ಕೃಷಿ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಬಾರದು ಎಂದು ರಾಜ್ಯ ಸರ್ಕಾರ ಈ ಹಿಂದೆ ಹೇಳಿತ್ತು. ಆದರೆ, ಇದೀಗ ಬಿಡದಿಯ ಫಲವತ್ತಾದ ಕೃಷಿ ಭೂಮಿಯಲ್ಲಿ ಟೌನ್‌ಶಿಪ್ ಯೋಜನೆ ಜಾರಿಗೊಳಿಸುವ ಮೂಲಕ ಸರ್ಕಾರ ತನ್ನದೇ ನಿರ್ಧಾರಕ್ಕೆ ವಿರುದ್ಧವಾಗಿ ನಡೆದುಕೊಳ್ಳುತ್ತಿದೆ ಎಂದು ಆರೋಪಿಸಿದರು.ಭವಿಷ್ಯದಲ್ಲಿ ರಾಜ್ಯದಾದ್ಯಂತ, ತುಮಕೂರು, ಆನೇಕಲ್, ಪಾವಗಡ ಮತ್ತು ಬಳ್ಳಾರಿ ಸೇರಿದಂತೆ ವಿವಿಧ ಅಭಿವೃದ್ಧಿ ಯೋಜನೆಗಳಿಗೆ ಭೂಸ್ವಾಧೀನ ಮಾಡುವಾಗ ಬಿಡದಿ ಮಾದರಿಯ ಪರಿಹಾರವನ್ನು ಸರ್ಕಾರ ನೀಡಬೇಕು ಎಂದು ಅವರು ಒತ್ತಾಯಿಸಿದರು. ಆದರೆ, ಕಂದಾಯ, ಕೈಗಾರಿಕೆ ಮತ್ತು ವಸತಿ ಇಲಾಖೆಯ ಅಧಿಕಾರಿಗಳು ರಾಜ್ಯದಾದ್ಯಂತ ಇದೇ ಮಾನದಂಡವನ್ನು ಅನ್ವಯಿಸಲು ಸಾಧ್ಯವಿಲ್ಲ ಎಂದು ಹೇಳಿದ್ದಾರೆ. ಈ ಹಿಂದೆ ಭೂಸ್ವಾಧೀನ ಪರಿಹಾರದ ಮೊತ್ತವನ್ನು 1984ರ ಭೂಸ್ವಾಧೀನ ಕಾಯ್ದೆ ಆಧರಿಸಿ ಲೆಕ್ಕ ಹಾಕಲಾಗುತ್ತಿತ್ತು. ಇದೀಗ 2013ರ ಭೂಸ್ವಾಧೀನ ಕಾಯ್ದೆ ಅನುಸರಿಸಲಾಗುತ್ತಿದೆ. 2013ರ ಕಾಯ್ದೆಯಡಿ ಹೊರ ವರ್ತುಲ ರಸ್ತೆ ಯೋಜನೆಗಾಗಿ ಭೂಮಿ ಕಳೆದುಕೊಂಡವರಿಗೆ ಅವರ ಭೂಮಿಯ ಮಾರ್ಗಸೂಚಿ ಮೌಲ್ಯದ ಮೂರು ಪಟ್ಟು ಪರಿಹಾರ ನೀಡಲಾಗಿತ್ತು. ಆದರೆ ಬಿಡದಿ ವಿಚಾರದಲ್ಲಿ ಇದಕ್ಕೆ ಹೆಚ್ಚುವರಿಯಾಗಿ 'ಸಮ್ಮತಿ ಪರಿಹಾರ' ಎಂಬ ಅಂಶವನ್ನು ಸೇರಿಸಲಾಗಿದೆ. ಇದರಡಿ ಎರಡೂ ಪಕ್ಷಗಳು ತಮಗೆ ಬೇಕಾದ ಪರಿಹಾರದ ಮೊತ್ತವನ್ನು ಪ್ರಸ್ತಾಪಿಸುತ್ತವೆ. ಬಳಿಕ ಎರಡೂ ಕಡೆಯ ಒಪ್ಪಿಗೆಯ ಮೇರೆಗೆ ಅಂತಿಮ ಮೊತ್ತ ನಿಗದಿಪಡಿಸಲಾಗುತ್ತದೆ.ಬಿಡದಿ ಬೆಂಗಳೂರಿಗೆ ಪ್ರಮುಖ ಯೋಜನೆಯಾಗಿರುವುದರಿಂದ ಈ ಪರಿಹಾರ ನೀಡಲಾಗುತ್ತಿದೆ. ಇದೇ ರೀತಿಯ ಪರಿಹಾರವನ್ನು ಮೇಕೆದಾಟು ಮತ್ತು ಎರಡನೇ ವಿಮಾನ ನಿಲ್ದಾಣ ಯೋಜನೆಗಳಿಗೂ ನೀಡಬಹುದು. ಆದರೆ, ಅದು ಯೋಜನೆ ಅನುಷ್ಠಾನಗೊಳಿಸುವ ಸಂಸ್ಥೆ ಹಾಗೂ ಅಂತಿಮ ಸರ್ಕಾರದ ಆದೇಶವನ್ನೂ ಅವಲಂಬಿಸಿರುತ್ತದೆ ಎಂದು ಅಧಿಕಾರಿ ವಿವರಿಸಿದರು.

### ರೆಡ್ ಜೋನ್ ಕಷ್ಟ ವಿವರಿಸಿದ ರೈತರು

ರೆಡ್ ಜೋನ್ ಕಷ್ಟ ವಿವರಿಸಿದ ರೈತರು ರೆಡ್ ಜೋನ್ ನಿಂದ ತಮಗಾಗಿರುವ ಕಷ್ಟ ವಿವರಿಸಿದರು. ತಕ್ಷಣವೇ ಅದನ್ನು ತೆಗೆದು ಹಾಕಿ ಎಂದು ಒತ್ತಾಯಿಸಿದರು. ಯಾರದೋ ರಾಜಕೀಯ ಆಟಕ್ಕೆ ನಾವು ಬಲಿ ಆಗುತ್ತಿದ್ದೇವೆ. ನಾವು ಜಮೀನು ಕೊಡಲು ಸಿದ್ಧ. ತಕ್ಷಣವೇ ಪರಿಹಾರ ನೀಡುವಂತೆ ಮನವಿ ಮಾಡಿದರು. ಮಾಜಿ ಸಿಎಂ ಕುಮಾರಸ್ವಾಮಿ ಅವರಿಗೆ ಹಲವು ಬಾರಿ ಮನವಿ ಮಾಡಿದ್ದರೂ ಅವರು ಸ್ಪಂದಿಸಲಿಲ್ಲ. ನೀವಾದರೂ ನಮ್ಮ ಕಷ್ಟ ಬಗೆಹರಿಸಿ ಎಂದು ಆಗ್ರಹಿಸಿದ್ದಾರೆ. ಈ ಮೂಲಕ ಯೋಜನೆಗೆ ಮಹತ್ವದ ಟ್ವಿಸ್ಟ್ ಸಿಕ್ಕಂತಾಗಿದೆ. ಇದೇ ರೀತಿ ಇನ್ನಷ್ಟು ಗ್ರಾಮಗಳ ರೈತರು ಭೂಮಿ ನೀಡಲು ಒಪ್ಪಲಿದ್ದಾರೆ ಎಂಬ ನಿರೀಕ್ಷೆ ಸರ್ಕಾರಕ್ಕೆ ಇದ್ದಂತಿದೆ. ಬೈರಮಂಗಲ ಗ್ರಾಮದ ಸುನೀಲ್ ಎಂಬುವವರು ಮಾತನಾಡಿ, ಕಳೆದ 20 ವರ್ಷಗಳಿಂದ ನಾವು 'ರೆಡ್ ಜೋನ್' ನಿಂದ ಸಂಕಷ್ಟ ಅನುಭವಿಸಿದ್ದೇವೆ. ಅಲ್ಲಿ ವೃಷಭಾವತಿ ಕೊಳಚೆ ನೀರಿನಿಂದ ವ್ಯವಸಾಯ ಕಷ್ಟವಾಗಿದೆ.


ಉದಯವಾಹಿನಿ ಚಿತ್ರ



**1** 3 ಕೋಟಿ ರೂ ನೀಡಲು ನಿರ್ಧರಿಸಿದೆ

**2** 25 ಲಕ್ಷ ರೂಪಾಯಿ ಪರಿಹಾರ ನೀಡಲು

**3** ಶೇ.50ರಷ್ಟು ಪಾಲು ನೀಡಲಾಗುವುದು

### ಇತರೆ ಭಾಗದ ರೈತರ ಆಗ್ರಹ

### ಸರ್ಕಾರ ಎಷ್ಟು ಮೊತ್ತಕ್ಕೆ ಒಪ್ಪುತ್ತದೆ

ಇತರ ಜಿಲ್ಲೆಗಳಲ್ಲಿ ಇದೇ ರೀತಿಯ ಪರಿಹಾರ ನೀಡುವುದು ಕಷ್ಟ. ಏಕೆಂದರೆ ಅಲ್ಲಿನ ಭೂಮಿಯ ಮೌಲ್ಯ ಹಾಗೂ ಮಾರ್ಗಸೂಚಿ ಮೌಲ್ಯ ಹೆಚ್ಚಿಲ್ಲ. ರೈತರು ಎಷ್ಟು ಪರಿಹಾರ ಕೇಳುತ್ತಾರೆ ಮತ್ತು ಸರ್ಕಾರ ಎಷ್ಟು ಮೊತ್ತಕ್ಕೆ ಒಪ್ಪುತ್ತದೆ ಎಂಬುದೂ ಇದರಲ್ಲಿ ಪ್ರಮುಖ ಪಾತ್ರವಹಿಸುತ್ತದೆ ಎಂದು ಹೇಳಿದರು.

> ಬಿಡದಿ ರೈತರು ಯಾವುದೇ ಮೊತ್ತವನ್ನು ಪ್ರಸ್ತಾಪಿಸಿಲ್ಲ ಹಾಗೂ ತಮ್ಮ ಭೂಮಿಯನ್ನು ಹಸ್ತಾಂತರಿಸಲು ಆಸಕ್ತಿ ಹೊಂದಿಲ್ಲ ಎಂದು ತಿಳಿಸಿದ್ದರೂ, ಸರ್ಕಾರ ಎಕರೆಗೆ 3 ಕೋಟಿ ಪರಿಹಾರ ಘೋಷಿಸಿದೆ ಎಂದು ಹೇಳಿದರು. -ಶಾಂತಕುಮಾರ್

> ಬಿಡದಿ ವಿಚಾರದಲ್ಲಿ ಯೋಜನೆಯನ್ನು ತ್ವರಿತವಾಗಿ ಅನುಷ್ಠಾನಗೊಳಿಸುವ ಅಗತ್ಯ, ಬೆಂಗಳೂರಿಗೆ ಅದರ ಸಮೀಪತೆ ಹಾಗೂ ನಗರಕ್ಕೆ ದೊರೆಯುವ ಹಲವು ಪ್ರಯೋಜನಗಳನ್ನು ಪರಿಗಣಿಸಿ ಪರಿಹಾರದ ಮೊತ್ತ ನಿಗದಿಪಡಿಸಲಾಗಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

> ಬಹಳ ವರ್ಷಗಳಿಂದ ನೆನೆಗುದಿಗೆ ಬಿದ್ದಿದ್ದ ಬಿಡದಿ ಟೌನ್‌ಶಿಪ್ ಯೋಜನೆಗೆ ಮರುಜೀವ ನೀಡಲಾಗುತ್ತಿದ್ದು, ಇದನ್ನು ವಿಶ್ವದರ್ಜೆಯ ರಸ್ತೆಗಳು, ಮೆಟ್ರೋ ಸಂಪರ್ಕ, ಅತ್ಯಾಧುನಿಕ ಕ್ರೀಡಾಂಗಣ, ಉದ್ಯಾನವನ ಹಾಗೂ ಸುಸಜ್ಜಿತ ವಸತಿ ಒಳಗೊಂಡ ಅತ್ಯಾಧುನಿಕ ಎಐ ಸಿಟಿಯಾಗಿ ಅಭಿವೃದ್ಧಿಪಡಿಸಲಾಗುತ್ತಿದೆ.
> ಡಿಕೆಶಿ ಸಿಎಂ

# ಕರ್ನಾಟಕಕ್ಕೆ ಮತ್ತೆ ಬಿಗ್ ಶಾಕ್; ತಮಿಳುನಾಡಿಗೆ ನಿತ್ಯ 12 ಸಾವಿರ ಕ್ಯೂಸೆಕ್ ನೀರು ಬಿಡುವಂತೆ ಆದೇಶ!

• ಉದಯವಾಹಿನಿ, ಬೆಂಗಳೂರು

ಕಾವೇರಿ ನದಿ ನೀರು ಹಂಚಿಕೆ ವಿವಾದಕ್ಕೆ ಸಂಬಂಧಿಸಿದಂತೆ ಕರ್ನಾಟಕಕ್ಕೆ ಮತ್ತೆ ತೀವ್ರ ಹಿನ್ನಡೆಯಾಗಿದ್ದು, ನೆರೆ ರಾಜ್ಯ ತಮಿಳುನಾಡಿಗೆ ಮುಂದಿನ 15 ದಿನಗಳ ಕಾಲ ಪ್ರತಿದಿನ 12,000 ಕ್ಯೂಸೆಕ್ ನೀರು ಹರಿಸುವಂತೆ ಕಾವೇರಿ ನೀರು ನಿಯಂತ್ರಣ ಸಮಿತಿ ಮಂಗಳವಾರ ಕರ್ನಾಟಕ ಸರ್ಕಾರಕ್ಕೆ ಸೂಚಿಸಿದೆ. ದೆಹಲಿಯಲ್ಲಿ ಸಿಡಬ್ಲ್ಯುಆರ್‌ಸಿ ಮುಖ್ಯಸ್ಥ ವಿನೀತ್ ಗುಪ್ತಾ ಅವರ ನೇತೃತ್ವದಲ್ಲಿ ನಡೆದ 140ನೇ ಸಭೆಯಲ್ಲಿ ಈ ತೀರ್ಮಾನ ಕೈಗೊಳ್ಳಲಾಗಿದೆ. ಈ ಆದೇಶದಿಂದಾಗಿ ಕರ್ನಾಟಕವು ಮುಂದಿನ 15 ದಿನಗಳ ಕಾಲ ತಮಿಳುನಾಡಿಗೆ ಅಂದಾಜು ಬರೋಬ್ಬರಿ 16 ಟಿಎಂಸಿ ನೀರನ್ನು ಹರಿಸಬೇಕಾಗಿದೆ. ಸಿಡಬ್ಲ್ಯುಆರ್‌ಸಿ ಆದೇಶದ ಕುರಿತು ಇಂದು ಮಧ್ಯಾಹ್ನ 3 ಗಂಟೆಗೆ ನಡೆಯಲಿರುವ ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರದ ಸಭೆಯಲ್ಲಿ ಅಂತಿಮ ನಿರ್ಧಾರ ಹೊರಬೀಳಲಿದೆ.

ವಿನೀತ್ ಗುಪ್ತಾ ಅವರ ನೇತೃತ್ವದಲ್ಲಿ ಬೆಳಗ್ಗೆ ನಡೆದ ಸಭೆಯಲ್ಲಿ ಕರ್ನಾಟಕದ ಪರವಾಗಿ ಕಾವೇರಿ ನೀರಾವರಿ ನಿಗಮದ ವ್ಯವಸ್ಥಾಪಕ ನಿರ್ದೇಶಕ ಮಹೇಶ್ ಅವರು ಖುದ್ದಾಗಿ ಹಾಜರಿದ್ದು ರಾಜ್ಯದಲ್ಲಿನ ಜಲಾಶಯಗಳ ನೀರಿನ ಮಟ್ಟ ಹಾಗೂ ವಸ್ತುಸ್ಥಿತಿಯನ್ನು ಪ್ರಾಧಿಕಾರದ ಮುಂದಿಟ್ಟಿದ್ದರು. ಆಗಸ್ಟ್ 10 ವರದಿಯಂತೆ ತಮಿಳುನಾಡು ಗಡಿಯಾದ ಬಿಳಿಗುಂಡ್ಲು ಮಾಪನ ಕೇಂದ್ರದಲ್ಲಿ ಈಗಾಗಲೇ 9 ಟಿಎಂಸಿ ನೀರು ಹರಿದು ಹೋಗಿರುವುದು ದಾಖಲಾಗಿದೆ. ಹೊಸ ಶಿಫಾರಸಿನಂತೆ ಮುಂದಿನ 15 ದಿನಗಳ ಕಾಲ ದಿನಕ್ಕೆ 12,000 ಕ್ಯೂಸೆಕ್‌ನಂತೆ ನೀರು ಹರಿಸಿದರೆ ತಮಿಳುನಾಡಿಗೆ ಹರಿಯುವ ಒಟ್ಟು ನೀರಿನ ಪ್ರಮಾಣ 16 ಟಿಎಂಸಿಗೆ ತಲುಪಲಿದೆ

> ಇನ್ನು ತಮಿಳುನಾಡು ರಾಜ್ಯದ ಹಿರಿಯ ಅಧಿಕಾರಿಗಳು ವಿಡಿಯೋ ಕಾನ್ಫರೆನ್ಸ್ ಮೂಲಕ ಸಭೆಯಲ್ಲಿ ಭಾಗವಹಿಸಿದ್ದರು. ಸುಮಾರು ಒಂದೂವರೆ ಗಂಟೆಗಳ ಕಾಲ ನಡೆದ ಸಭೆಯಲ್ಲಿ ಭವಿಷ್ಯದ ಮಳೆ, ಈಗ ಜಲಾಶಯದಲ್ಲಿರುವ ನೀರಿನ ಸಂಗ್ರಹ ಎಲ್ಲವನ್ನು ಗಮನದಲ್ಲಿಟ್ಟುಕೊಂಡು ಶಿಫಾರಸು ಮಾಡಿದೆ.

ಉದಯವಾಹಿನಿ ಚಿತ್ರ



## ಮದುವೆಯಾದ ಮೊದಲ ದಿನವೇ ಪತ್ನಿಗೆ ಶಾಕ್ ಕೊಟ್ಟ ಪತಿ; ಪ್ರಭಾವಿ ಸಚಿವರಿಂದಲೇ ದೋಖಾ?

• ಉದಯವಾಹಿನಿ, ಬೆಂಗಳೂರು

ರಾಜಧಾನಿ ಬೆಂಗಳೂರಿನಲ್ಲಿ ಯುವಕನೊಬ್ಬ ಮದುವೆಯಾದ ಮೊದಲ ದಿನವೇ, ನೀ ನನಗೆ ಇಷ್ಟ ಇಲ್ಲ ಎಂದು ಪತ್ನಿಗೆ ಹೇಳುವ ಮೂಲಕ ಬಿಗ್ ಶಾಕ್ ನೀಡಿದ್ದು, ತಲಾಕ್ ಬ್ಯಾನ್ ಆಗಿದ್ರು ತಲಾಕ್ ನೀಡಿ ಪತ್ನಿಯಿಂದ ದೂರವಾಗಿದ್ದಾನೆ. ಈ ಸಂಬಂಧ ನವ ವಿವಾಹಿತೆ ಪೊಲೀಸರಿಗೆ ದೂರು ನೀಡಿದ್ದು, ತನ್ನ ಪತಿ ಮತ್ತು ಕುಟುಂಬಸ್ಥರು ಹಿಂಸೆ ನೀಡುತ್ತಿದ್ದಾರೆ ಎಂದು ಆರೋಪಿಸಿದ್ದಾರೆ. ಆದರೆ ದೂರು ನೀಡಿ 8 ತಿಂಗಳಾದರೂ ಪೊಲೀಸರು ಯಾವುದೇ ಕ್ರಮ ಕೈಗೊಂಡಿಲ್ಲ ಎಂಬ ಆರೋಪವೂ ಕೇಳಿಬಂದಿದೆ.

ನಾನು ಪೊಲೀಸರಿಗೆ ದೂರು ನೀಡಿದ್ದಕ್ಕೆ ಮತ್ತು ಪರಿಹಾರ ಕೇಳಿದ್ದಕ್ಕೆ ಪತಿ ಕಡೆಯಿಂದ ನನಗೆ ಜೀವ ಬೆದರಿಕೆ ಹಾಕಲಾಗುತ್ತಿದೆ ಎಂದು ಯುವತಿ ಗಂಭೀರ ಆರೋಪ ಮಾಡಿದ್ದಾಳೆ. ಬೆಂಗಳೂರಿನ ಶೇಕ್ ಅಫ್ರಾನ್ ಎಂಬ ಯುವಕನ ವಿರುದ್ಧ ಪತ್ನಿ ದೂರು ನೀಡಿದ್ದು, 2025ರ ಜೂನ್‌ನಲ್ಲಿ ನಮ್ಮ ಮದುವೆ ಆಗಿದ್ದು, ಮದುವೆಯಾದ ಮೊದಲ ದಿನವೇ, ನೀ ನನಗೆ ಇಷ್ಟ ಇಲ್ಲ ಎಂದು ಪತಿ ಹೇಳಿದರು. ಆದರೆ ವಿವಾಹದ ವೇಳೆ ಕಾರು ಸೇರಿದಂತೆ ಸಾಕಷ್ಟು ವರದಕ್ಷಿಣೆಯನ್ನು ನೀಡಲಾಗಿದೆ. ಹೀಗಿದ್ದರೂ ಬೇರೆ ಯುವತಿ ಜೊತೆಗೆ ಆತ ಸಂಬಂಧ ಹೊಂದಿದ್ದ. ಇದೇ ಕಾರಣಕ್ಕೆ ಯುವತಿಗೆ ಹಿಂಸೆ ನೀಡುತ್ತಿದ್ದ. ಅಲ್ಲದೆ ಆತನ ಜೊತೆಗೆ ಕುಟುಂಬಸ್ಥರೂ ಮಸಾಜ್ ಮಾಡುವಂತೆ ಕಿರುಕುಳ ನೀಡುತ್ತಿದ್ದರು. ಕೈ ಮೇಲೆ ಬಿಸಿನೀರು ಸುರಿದು ಚಿತ್ರಹಿಂಸೆ ಕೊಟ್ಟಿದ್ದರು. ನಿನ್ನನ್ನು ಮದುವೆ ಮಾಡಿಸಿ ಮನೆಗೆ ಕರೆತಂದಿದ್ದು, ಮನೆ ಕೆಲಸ ಮಾಡಲು. ಇಲ್ಲದಿದ್ದರೆ ಮನೆ ಬಿಟ್ಟು ಹೋಗು ಎಂದು ಬೆದರಿಸಿರೋದಾಗಿ ಆರೋಪಿಸಿ ನವೆಂಬರ್‌ನಲ್ಲಿ ಯುವತಿ ಕುಟುಂಬಸ್ಥರು ಪೊಲೀಸರಿಗೆ ದೂರು ನೀಡಿದ್ದಾರೆ.

# ಅವಕಾಶವಿಲ್ಲ: ಸಾಮ್ರಾಟ್ ಹೋಟೇಲ್ ಬೋರ್ಡ್‌ನಲ್ಲಿ ನೋಟೀಸ್

• ಉದಯವಾಹಿನಿ, ಬೆಂಗಳೂರು

ವಿಧಾನಸೌಧದ ಸಮೀಪದ ಹೋಟೇಲ್ ಚಾಲುಕ್ಯದಲ್ಲಿದ್ದ ಬೆಂಗಳೂರಿನ ಪ್ರಸಿದ್ಧ ಸಮ್ರಾಟ್ ರೆಸ್ಟೋರೆಂಟ್, ರಾಜಕಾರಣಿಗಳು, ಅಧಿಕಾರಿಗಳು ಹಾಗೂ ವಕೀಲರ ನೆಚ್ಚಿನ ಅನೌಪಚಾರಿಕ ತಾಣವಾಗಿ ಹಲವು ದಶಕಗಳಿಂದ ಗುರುತಿಸಿಕೊಂಡಿತ್ತು. ಹಲವು ದಶಕಗಳಿಂದ ವಿವಿಧ ಪಕ್ಷಗಳ ಪ್ರಮುಖ ರಾಜಕೀಯ ನಾಯಕರು ಸಾಮ್ರಾಟ್ ರೆಸ್ಟೋರೆಂಟ್‌ಗೆ ಭೇಟಿ

ಉದಯವಾಹಿನಿ ಚಿತ್ರ



ನೀಡುತ್ತಿದ್ದರು. ಎಚ್.ಡಿ. ದೇವೇಗೌಡ, ಸಿದ್ದರಾಮಯ್ಯ, ಬಿ.ಎಸ್. ಯಡಿಯೂರಪ್ಪ ಸೇರಿದಂತೆ ಹಲವು ಪ್ರಮುಖ ನಾಯಕರು ಇಲ್ಲಿ ಮಸಾಲೆ ದೋಸೆ, ಬಾದಾಮಿ ಹಲ್ವಾ ಸೇರಿದಂತೆ ದಕ್ಷಿಣ ಭಾರತೀಯ ಖಾದ್ಯಗಳನ್ನು ಸವಿಯುತ್ತಾ ರಾಜಕೀಯ ವಿಷಯಗಳನ್ನು ಚರ್ಚಿಸುತ್ತಿದ್ದರು. ರಾಜ್ಯದ ಆಡಳಿತ ಕೇಂದ್ರವಾದ ವಿಧಾನಸೌಧದಿಂದ ಕೆಲವೇ ನಿಮಿಷಗಳ ನಡಿಗೆಯ ದೂರದಲ್ಲಿದ್ದ ಸಾಮ್ರಾಟ್, ರಾಜಕೀಯ ಪಕ್ಷಭೇದ ಮರೆತು ನಾಯಕರು, ಸಚಿವರು, ಶಾಸಕರು ಹಾಗೂ ಸ್ಥಳೀಯ ಪಕ್ಷದ ಮುಖಂಡರು ಫಿಲ್ಟರ್ ಕಾಫಿ ಸವಿಯುತ್ತಾ ಅನೌಪಚಾರಿಕ ಮಾತುಕತೆ ನಡೆಸುತ್ತಿದ್ದ ತಾಣವಾಗಿತ್ತು.

ಮೂಲ ರೇಸ್‌ಕೋರ್ಸ್ ರಸ್ತೆಯಲ್ಲಿದ್ದ ಸಾಮ್ರಾಟ್ ರೆಸ್ಟೋರೆಂಟ್‌ನ ಗುತ್ತಿಗೆ ಅವಧಿ ಮುಗಿದ ಹಿನ್ನೆಲೆಯಲ್ಲಿ 2022ರ ಸೆಪ್ಟೆಂಬರ್‌ನಲ್ಲಿ ಅದು ಮುಚ್ಚಿತ್ತು.

# ಬಾರ್ ಕ್ಯಾಷಿಯರ್‌ಗೆ ಬೆದರಿಕೆ; ಇಬ್ಬರು ಉದ್ಯಮಿಗಳು, ಪ್ರಭಾವಿ ಮಹಿಳೆ ಮೇಲೆ ಕಣ್ಣಿಟ್ಟ ಪೊಲೀಸರು!

## ಬಾರ್ ಕ್ಯಾಷಿಯರ್ ಸಂದೀಪ್ ಅವರನ್ನು ಬಲವಂತವಾಗಿ ಕಾರಿನಲ್ಲಿ ಕರೆದೊಯ್ದು ಬೆದರಿಕೆ ಹಾಕಲಾಗಿದೆ ಎಂದು ಆರೋಪಿಸಲಾಗಿದೆ.

• ಉದಯವಾಹಿನಿ, ಬೆಂಗಳೂರು

ರೇಣುಕಸ್ವಾಮಿ ಕೊಲೆ ಪ್ರಕರಣದ ಸಾಕ್ಷಿ ಸಂದೀಪ್ ಅವರ ಅಪಹರಣ ಮತ್ತು ಅವರಿಗೆ ಜೀವ ಬೆದರಿಕೆ ಹಾಕಿದ ಆರೋಪದ ಕುರಿತು ತನಿಖೆ ನಡೆಸುತ್ತಿರುವ ಪೊಲೀಸರು, ಪ್ರಕರಣದಲ್ಲಿ ಪ್ರಮುಖ ಪಾತ್ರ ವಹಿಸಿದ್ದಾರೆನ್ನಲಾದ ಇಬ್ಬರು ಉದ್ಯಮಿಗಳನ್ನು ಪತ್ತೆಹಚ್ಚಿದ್ದಾರೆ.

ಕಿರಣ್ ಮತ್ತು ಗೌರವ್ ಶೆಟ್ಟಿ ಎಂಬ ಉದ್ಯಮಿಗಳ ಪಾತ್ರದ ಬಗ್ಗೆ ಪೊಲೀಸರು ಮಂಗಳವಾರ ಮಾಹಿತಿ ನೀಡಿದ್ದಾರೆ. ಅಲ್ಲದೆ, ಈ ಪ್ರಕರಣದಲ್ಲಿ ಪ್ರಭಾವಿ ಮಹಿಳೆಯೊಬ್ಬರ ಪಾತ್ರದ ಕುರಿತಾಗಿಯೂ ತನಿಖಾಧಿಕಾರಿಗಳು ಪರಿಶೀಲನೆ ನಡೆಸುತ್ತಿದ್ದಾರೆ ಎನ್ನಲಾಗಿದೆ. ಪೊಲೀಸ್ ಮೂಲಗಳ ಪ್ರಕಾರ, ಕರೆ ದಾಖಲೆಗಳ ವಿಧಿವಿಜ್ಞಾನ ವಿಶ್ಲೇಷಣೆಯಿಂದ ಸಂದೀಪ್‌ಗೆ ಬೆದರಿಕೆ ಹಾಕಲಾದ ಸಮಯದಲ್ಲಿ ಕಿರಣ್ ಮತ್ತು ಗೌರವ್ ಶೆಟ್ಟಿ ಕಾನ್ಫರೆನ್ಸ್ ಕರೆಯಲ್ಲಿದ್ದರು ಎಂದು ತಿಳಿದುಬಂದಿದೆ. ಅಲ್ಲದೆ, ಸಂದೀಪ್‌ಗೆ ಬೆದರಿಕೆ ಹಾಕಲು ಮತ್ತು ಬ್ಲ್ಯಾಕ್‌ಮೇಲ್ ಮಾಡಲು ಈ ಜೋಡಿಯು ಆರೋಪಿ ಪುನೀತ್‌ನನ್ನು ಬಳಸಿಕೊಂಡಿರಬಹುದು ಎಂದು ತನಿಖಾಧಿಕಾರಿಗಳು ಶಂಕಿಸಿದ್ದಾರೆ.

ನಟ ದರ್ಶನ್ ಅಭಿಮಾನಿಯಾಗಿದ್ದ ರೇಣುಕಸ್ವಾಮಿ ಕೊಲೆ ಪ್ರಕರಣದಲ್ಲಿ 49ನೇ ಸಾಕ್ಷಿಯಾಗಿರುವ, ಬಾರ್ ಕ್ಯಾಷಿಯರ್ ಸಂದೀಪ್ ಅವರನ್ನು ಬಲವಂತವಾಗಿ ಕಾರಿನಲ್ಲಿ


ಉದಯವಾಹಿನಿ ಚಿತ್ರ

ಕರೆದೊಯ್ದು, ಗಂಭೀರ ಪರಿಣಾಮಗಳನ್ನು ಎದುರಿಸಬೇಕಾದೀತೆಂದು ಬೆದರಿಕೆ ಹಾಕಲಾಗಿದೆ ಎಂದು ಆರೋಪಿಸಲಾಗಿದೆ. ಈ ಘಟನೆಗೆ ಸಂಬಂಧಿಸಿದಂತೆ ಕಾಮಾಕ್ಷಿಪಾಳ್ಯ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ಆರಂಭಿಸಿದ್ದಾರೆ.

ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಪೊಲೀಸರು ಈ ಹಿಂದೆ ಪುನೀತ್, ಸುಹಾಸ್ ಮತ್ತು ವೇಣು ಎಂಬ ಮೂವರು ಆರೋಪಿಗಳನ್ನು ಬಂಧಿಸಿದ್ದರು. ತನಿಖೆಯ ವೇಳೆ, ಪೊಲೀಸರು ಪುನೀತ್‌ನ ಮೊಬೈಲ್ ಫೋನ್ ಅನ್ನು ವಶಪಡಿಸಿಕೊಂಡು ಅದರಿಂದ ವಾಟ್ಸಾಪ್ ಮಾಹಿತಿಯನ್ನು ಪಡೆದುಕೊಂಡರು. ನಂತರ, ಆ ಮಾಹಿತಿಯನ್ನು ವಿಶ್ಲೇಷಣೆಗಾಗಿ ವಿಧಿವಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿಸಲಾಯಿತು. ಈ ಪ್ರಕರಣದಲ್ಲಿ ಪ್ರಭಾವಿ ಮಹಿಳೆಯೊಬ್ಬರ ಪಾತ್ರದ ಕುರಿತೂ ತನಿಖಾಧಿಕಾರಿಗಳು ಪರಿಶೀಲನೆ ನಡೆಸುತ್ತಿದ್ದಾರೆ. ಪೊಲೀಸ್ ಮೂಲಗಳ ಪ್ರಕಾರ, ಕಿರಣ್ ಮತ್ತು ಗೌರವ್ ಶೆಟ್ಟಿ ಸಂಪರ್ಕಿಸುವ ಮುನ್ನವೇ ಆ ಮಹಿಳೆ ಪುನೀತ್ ಅವರನ್ನು ಸಂಪರ್ಕಿಸಿದ್ದರು; ಅಲ್ಲದೆ, ಆ ಇಬ್ಬರು ಉದ್ಯಮಿಗಳು ನೀಡುವ ಸೂಚನೆಗಳನ್ನು ಪಾಲಿಸುವಂತೆ ಅವರಿಗೆ ತಿಳಿಸಿದ್ದರು ಎಂದು ಹೇಳಲಾಗಿದೆ.ಸಂದೀಪ್ ಅವರನ್ನು ಭಯಭೀತಗೊಳಿಸುವ ಹಾಗೂ ಕೊಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ಮಾಹಿತಿ ಅಥವಾ ಸಾಕ್ಷ್ಯ ನೀಡುವುದನ್ನು ತಡೆಯುವ ಪ್ರಯತ್ನದ ಭಾಗವಾಗಿ ಬೆದರಿಕೆಯೊಡ್ಡಿರಬಹುದು ಎಂದು ಪೊಲೀಸರು ಶಂಕಿಸಿದ್ದಾರೆ.ಪುನೀತ್ ಅವರ ಮೊಬೈಲ್ ಫೋನ್‌ನಿಂದ ಡಿಜಿಟಲ್ ಸಾಕ್ಷ್ಯಗಳನ್ನು ವಶಪಡಿಸಿಕೊಂಡು ವಿಶ್ಲೇಷಿಸಿದ ನಂತರ ತನಿಖೆಯು ವೇಗ ಪಡೆದುಕೊಂಡಿತು.

### ಪೊಲೀಸರ ಶಂಕೆ

ಆರೋಪಿ ಹಾಗೂ ಇಬ್ಬರು ಉದ್ಯಮಿಗಳ ನಡುವಿನ ಸಂವಹನವನ್ನು ಖಚಿತಪಡಿಸಿಕೊಳ್ಳಲು ಎಫ್‌ಎಸ್‌ಎಲ್ ವರದಿಯ ಅಂಶಗಳು ತನಿಖಾಧಿಕಾರಿಗಳಿಗೆ ನೆರವಾಗಿವೆ. ಸಂದೀಪ್‌ಗೆ ಬೆದರಿಕೆಯೊಡ್ಡಿದ ಸಮಯದಲ್ಲಿ ಪುನೀತ್ ಅವರೊಂದಿಗೆ ಕಿರಣ್ ಮತ್ತು ಗೌರವ್ ಕಾನ್ಫರೆನ್ಸ್ ಕರೆಯಲ್ಲಿದ್ದರು ಎಂದು ಪೊಲೀಸರು ಶಂಕಿಸಿದ್ದಾರೆ.

### ಶಂಕಿತರ ವಿರುದ್ಧ ಮುಂದಿನ ಕ್ರಮ

ಪ್ರಕರಣದಲ್ಲಿ ಭಾಗಿಯಾಗಿರುವ ಶಂಕಿತರ ವಿರುದ್ಧ ಮುಂದಿನ ಕ್ರಮ ಕೈಗೊಳ್ಳುವ ಕುರಿತು ನಿರ್ಧರಿಸುವ ಮೊದಲು, ಪೊಲೀಸರು ಈಗ ಹೆಚ್ಚಿನ ತಾಂತ್ರಿಕ ಮತ್ತು ವಿಧಿವಿಜ್ಞಾನ ವರದಿಗಳಿಗಾಗಿ ಕಾಯುತ್ತಿದ್ದಾರೆ. ರೇಣುಕಸ್ವಾಮಿ ಕೊಲೆ ಪ್ರಕರಣದಲ್ಲಿ ಸಂದೀಪ್ ಅವರನ್ನು 49ನೇ ಸಾಕ್ಷಿಯನ್ನಾಗಿ ಪಟ್ಟಿ ಮಾಡಲಾಗಿದೆ.

# ಗುಬ್ಬಿ, ಕುಣಿಗಲ್ ಬರಪೀಡಿತ ಪ್ರದೇಶಕ್ಕೆ ಡಿಸಿಎಂ ಪರಮೇಶ್ವರ್ ಭೇಟಿ

• **ಉದಯವಾಹಿನಿ, ತುಮಕೂರು**

ಮಾನ್ಯ ಉಪಮುಖ್ಯಮಂತ್ರಿಗಳು ಹಾಗೂ ಕಂದಾಯ ಸಚಿವರಾದ ಡಾ. ಜಿ.ಪರಮೇಶ್ವರ್ ಅವರು ಇಂದು ಗುಬ್ಬಿ ತಾಲ್ಲೂಕಿನ ಸಿ.ಎಸ್.ಪುರ ಹೋಬಳಿಯ ಯಡುವನಹಳ್ಳಿಗೆ ಭೇಟಿ ನೀಡಿ, ತುರ್ತು ಕ್ರಿಯಾ ಯೋಜನೆ ಅನುದಾನದಡಿ ಕೊರೆಸಲಾದ ಕುಡಿಯುವ ನೀರಿನ ಕೊಳವೆಬಾವಿಯನ್ನು ಪರಿಶೀಲಿಸಿದರು. ಸಿಎಪಿ ಅನುದಾನದಡಿ ಕೊರೆದಿರುವ ಕುಡಿಯುವ ನೀರಿನ ಬೋರ್‌ವೆಲ್‌ನ್ನು ವೀಕ್ಷಿಸಿ, ಬೋರ್‌ವೆಲ್‌ನ ಪ್ರಸ್ತುತ ಸ್ಥಿತಿಗತಿ ಹಾಗೂ ನೀರಿನ ಲಭ್ಯತೆ ಕುರಿತು ಅಧಿಕಾರಿಗಳಿಂದ ಮಾಹಿತಿ ಪಡೆದುಕೊಂಡರು. ಗ್ರಾಮಸ್ಥರಿಗೆ ಕುಡಿಯುವ ನೀರು ಪೂರೈಸಲು ಕೈಗೊಂಡಿರುವ ವ್ಯವಸ್ಥೆಯ ಬಗ್ಗೆ ಪರಿಶೀಲನೆ ನಡೆಸಿದರು.

ಬರ ಪರಿಸ್ಥಿತಿಯ ಹಿನ್ನೆಲೆಯಲ್ಲಿ ಗ್ರಾಮೀಣ ಪ್ರದೇಶಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಉಂಟಾಗದಂತೆ ಮುನ್ನೆಚ್ಚರಿಕಾ ಕ್ರಮಗಳನ್ನು ಕೈಗೊಳ್ಳುವುದು ಸರ್ಕಾರದ ಪ್ರಮುಖ ಆದ್ಯತೆಯಾಗಿದೆ. ಜನರಿಗೆ ಅಗತ್ಯ ಪ್ರಮಾಣದಲ್ಲಿ ಕುಡಿಯುವ ನೀರು ಲಭ್ಯವಾಗುವಂತೆ ಅಧಿಕಾರಿಗಳು ನಿರಂತರವಾಗಿ ಪರಿಸ್ಥಿತಿಯನ್ನು ಮೇಲ್ವಿಚಾರಣೆ ಮಾಡುವಂತೆ ಪರಮೇಶ್ವರ್ ಸೂಚಿಸಿದರು. ಈ ವೇಳೆ ಗ್ರಾಮಸ್ಥರು, ಕಸ ವಿಲೇವಾರಿ, ಆಸ್ಪತ್ರೆ ಸಮಸ್ಯೆ ಕುರಿತು ಹಾಗೂ ಸ್ಮಶಾನ ಭೂಮಿ ಮಂಜೂರು ಮಾಡುವಂತೆ ಕೋರಿ ಡಿಸಿಎಂ ಅವರಿಗೆ ಮನವಿ ಸಲ್ಲಿಸಿದರು. ಶೀಘ್ರವಾಗಿ ಪರಿಶೀಲಿಸಿ ಪರಿಹಾರ ಕ್ರಮ ಕೈಗೊಳ್ಳುವಂತೆ ಡಿಸಿ ಅವರಿಗೆ ಸೂಚಿಸಿದರು. ಇನ್ನು ಕುಣಿಗಲ್ ತಾಲ್ಲೂಕಿನ ನಾಗನಹಳ್ಳಿ, ಮಂಡನಪಾಳ್ಯ ಗ್ರಾಮದ ಬರಪೀಡಿತ ಪ್ರದೇಶಗಳಿಗೆ ಭೇಟಿ ನೀಡಿ, ಬರ ಪರಿಸ್ಥಿತಿಯನ್ನು ಪರಿಶೀಲಿಸಿದರು. ಅಡಿಕೆ ತೋಟಗಳಿಗೆ ಭೇಟಿ ನೀಡಿದ ಅವರು, ಫಲವತ್ತಾದ ಮಣ್ಣಿನಲ್ಲಿ ಬೆಳೆದಿದ್ದ ಅಡಿಕೆ


ಉದಯವಾಹಿನಿ ಚಿತ್ರ

ಬೆಳೆ, ನೀರಿನ ಕೊರತೆಯಿಂದ ಒಣಗುತ್ತಿರುವುದನ್ನು ಖುದ್ದು ವೀಕ್ಷಿಸಿದರು. ಬರದಿಂದ ರೈತರು ಎದುರಿಸುತ್ತಿರುವ ಸಮಸ್ಯೆಗಳ ಕುರಿತು ಮಾಹಿತಿ ಪಡೆದರು.

ಈ ಸಂದರ್ಭದಲ್ಲಿ ರೈತರು ಬರ ಪರಿಹಾರ ಒದಗಿಸುವಂತೆ ಹಾಗೂ ಹೇಮಾವತಿ ಎಕ್ಸ್‌ಪ್ರೆಸ್ ಲಿಂಕ್ ಕೆನಾಲ್ ಮೂಲಕ ಕುಣಿಗಲ್ ತಾಲ್ಲೂಕಿಗೆ ನೀರು ಹರಿಸುವಂತೆ ಉಪಮುಖ್ಯಮಂತ್ರಿಗಳಿಗೆ ಮನವಿ ಮಾಡಿದರು. ಹೇಮಾವತಿ ಎಕ್ಸ್‌ಪ್ರೆಸ್ ಲಿಂಕ್ ಕೆನಾಲ್ ಯೋಜನೆಗೆ ಸರ್ಕಾರ ಈಗಾಗಲೇ 1,000 ಕೋಟಿ ರೂ. ಅನುದಾನ ಮೀಸಲಿಟ್ಟು ಕಾಮಗಾರಿಗೆ ಅನುಮೋದನೆ ನೀಡಿದೆ. ಈ ಪೈಕಿ 450 ಕೋಟಿ ಹಣವನ್ನು ಈಗಾಗಲೇ ಬಿಡುಗಡೆ ಮಾಡಲಾಗಿದೆ ಎಂದು ಡಿಸಿಎಂ ತಿಳಿಸಿದರು.

ಆದರೆ ತುರುವೇಕೆರೆ ಹಾಗೂ ಚಿಕ್ಕನಾಯಕನಹಳ್ಳಿ ಭಾಗದ ರೈತರು ಯೋಜನೆಗೆ ವಿರೋಧ ವ್ಯಕ್ತಪಡಿಸುತ್ತಿರುವ ಹಿನ್ನೆಲೆಯಲ್ಲಿ ಸಮಸ್ಯೆ ಉಂಟಾಗಿದೆ. ಈ ವಿಚಾರವನ್ನು ಮಾತುಕತೆಯ ಮೂಲಕ ಬಗೆಹರಿಸಲಾಗುವುದು ಎಂದು ಡಾ. ಜಿ.ಪರಮೇಶ್ವರ ಅವರು ರೈತರಿಗೆ ಭರವಸೆ ನೀಡಿದರು.

# 7ನೇ ಗ್ಯಾರಂಟಿ ಮೂಲಕ ಕೋಲಾರ, ಚಿಕ್ಕಬಳ್ಳಾಪುರಕ್ಕೆ ಎತ್ತಿನಹೊಳೆ ನೀರು

## ರೈತರಿಗೆ ನೀರು ತಲುಪಬೇಕು. ಹೀಗಾಗಿ ಆಗಸ್ಟ್ 15ರಂದು ನಮ್ಮ ಸರ್ಕಾರ ಹಮ್ಮಿಕೊಂಡಿರುವ ಯೋಜನೆಗಳನ್ನು ಪ್ರಕಟಿಸಲಿದ್ದೇವೆ

• **ಉದಯವಾಹಿನಿ, ಕೋಲಾರ**

ಕಾಂಗ್ರೆಸ್ ಸರ್ಕಾರ ಐದು ಗ್ಯಾರಂಟಿ ಯೋಜನೆಗಳ ಜತೆಗೆ ಆರನೇ ಗ್ಯಾರಂಟಿಯಾಗಿ ಭೂ ಗ್ಯಾರಂಟಿ ಹಾಗೂ ಏಳನೇ ಗ್ಯಾರಂಟಿಯಾಗಿ ನೀರಿನ ಗ್ಯಾರಂಟಿ ನೀಡುತ್ತಿದೆ. ಇದರ ಮೂಲಕ 2027ರ ಅಂತ್ಯದ ವೇಳೆಗೆ ಕೋಲಾರ ಹಾಗೂ ಚಿಕ್ಕಬಳ್ಳಾಪುರಕ್ಕೆ ಎತ್ತಿನಹೊಳೆ ನೀರು ಹರಿಸಲು ಸರ್ಕಾರ ಸಂಕಲ್ಪ ಮಾಡಿದೆ ಎಂದು ಸಿಎಂ ಡಿ.ಕೆ. ಶಿವಕುಮಾರ್ ತಿಳಿಸಿದರು.

ಎತ್ತಿನಹೊಳೆ ಯೋಜನೆ ಸಾಧ್ಯವಿಲ್ಲ ಎಂದು ಜೆಡಿಎಸ್ ರಾಜ್ಯಾಧ್ಯಕ್ಷರು ಲೇವಡಿ ಮಾಡುತ್ತಿದ್ದಾರೆ. ಯಾವುದೂ ಸುಲಭವಾಗಿ ಸಿಗುವುದಿಲ್ಲ. ಈ ಯೋಜನೆ ಕಷ್ಟವಾಗಿದೆ. ಆದರೆ ಪ್ರಯತ್ನ ಮಾಡಬೇಕಲ್ಲವೇ? ಪಶ್ಚಿಮ ಘಟ್ಟದಿಂದ ಹಾಸನದ ಮೂಲಕ ಕೋಲಾರ, ಚಿಕ್ಕಬಳ್ಳಾಪುರ ಕೆರೆಗಳನ್ನು ತುಂಬಿಸಲಾಗುವುದು. ತುಮಕೂರುವರೆಗೂ ನೀರು ತರುವ ಪ್ರಯತ್ನ ಮಾಡಲಾಗಿದೆ. ಈಗಾಗಲೇ ನಾವು ಕೆಸಿ ವ್ಯಾಲಿ ಯೋಜನೆ ಮೂಲಕ 104 ಕೆರೆಗಳಿಗೆ ನೀರು ತುಂಬಿಸಲಾಗಿದೆ. ಹೆಚ್.ಎನ್.ವ್ಯಾಲಿ 65 ಕೆರೆ ತುಂಬಿಸುವ ಕೆಲಸ ನಡೆಯುತ್ತಿದೆ. 700ಕ್ಕೂ ಹೆಚ್ಚು ಕೆರೆಗಳಲ್ಲಿ ಸಂಸ್ಕರಿಸಿದ ನೀರನ್ನು ತುಂಬಿಸಲು ಮುಂದಾಗಿದ್ದೇವೆ ಎಂದರು. ನಂಜೇಗೌಡರು ರಾಜ್ಯಕ್ಕೆ ಆದರ್ಶ ಶಾಸಕರು. ಕೋವಿಡ್ ಸಮಯದಲ್ಲಿ ರೈತರ ಬೆಳೆಗೆ ಮಾರುಕಟ್ಟೆ ಇಲ್ಲದೇ ಇರುವಾಗ ನಾವು ಇಲ್ಲಿ ತರಕಾರಿ ಖರೀದಿ ಮಾಡಿ ಬೆಂಗಳೂರಿನಲ್ಲಿ ಜನರಿಗೆ ಉಚಿತವಾಗಿ ಹಂಚಿದ್ದೇವೆ. ನಂಜೇಗೌಡರು ನಿಮಗೆ ಮಾತು ಕೊಟ್ಟಿದ್ದಾರೆ. ಕೊಟ್ಟ ಮಾತನ್ನು ಉಳಿಸಿಕೊಳ್ಳುವುದು ಮುಖ್ಯ. ನಂಜೇಗೌಡರು ಕೊಟ್ಟ ಮಾತು ಉಳಿಸಿಕೊಂಡಿದ್ದಾರೆ. ಅದಕ್ಕೆ ಈ ಕಾರ್ಯಕ್ರಮ ಉದಾಹರಣೆ. ಅವರು


ಉದಯವಾಹಿನಿ ಚಿತ್ರ

> ನಾವು ಅಧಿಕಾರವನ್ನು ಸಿಂಹಾಸನವೆಂದು ತಿಳಿದಿಲ್ಲ, ಜನಸೇವೆಗೆ ಸಿಕ್ಕಿರುವ ಅವಕಾಶ ಎಂದು ಭಾವಿಸಿದ್ದೇವೆ. ಮೂರ್ತಿಗೆ ಬೆಲೆ ಕಟ್ಟಬಹುದು, ದೇವರಿಗೆ ಬೆಲೆ ಕಟ್ಟಲು ಸಾಧ್ಯವಿಲ್ಲ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಜನರೇ ದೇವರು. ನಮಗೆ ಆಶೀರ್ವಾದ ಮಾಡಿ ನಿಮ್ಮ ಸೇವೆಗೆ ಅವಕಾಶ ಮಾಡಿಕೊಟ್ಟಿದ್ದೀರಿ, ನಿಮಗೆ ಧನ್ಯವಾದಗಳು ಎಂದು ತಿಳಿಸಿದರು. -ಸಿಎಂ ಡಿ.ಕೆ.ಶಿವಕುಮಾರ್

ತಮಗೆ ಸಿಕ್ಕ ಅವಕಾಶದಲ್ಲಿ ಇಂತಹ ಯೋಜನೆಗಳ ಮೂಲಕ ಸಾಕ್ಷಿಗುಡ್ಡೆ ಬಿಟ್ಟಿದ್ದಾರೆ. ವಿರೋಧ ಪಕ್ಷದವರು ಟೀಕೆ ಮಾಡಲಿ, ನಮ್ಮ ತಪ್ಪು ಕಂಡು ಹಿಡಿದರೆ ತಿದ್ದುಕೊಳ್ಳೋಣ. ಆದರೆ ಕಳೆದ ಮೂರು ವರ್ಷಗಳಲ್ಲಿ ವಿರೋಧ ಪಕ್ಷಗಳ ಟೀಕಗಳು ಸತ್ತಿವೆ, ನಮ್ಮ ಸಾಧನೆಗಳು ಶಾಶ್ವತವಾಗಿ ಉಳಿದಿವೆ ಎಂದು ತಿಳಿಸಿದರು.

**ಕೋಲಾರ ಭಾಗದ ರೈತರು ರಾಜ್ಯಕ್ಕೆ ಮಾದರಿ:** ಈ ಜಿಲ್ಲೆಯ ರೈತರನ್ನು ರಾಜ್ಯದ ಜನತೆ ಸ್ಮರಿಸಬೇಕು. ಇಲ್ಲಿ ಅಂತರ್ಜಲ ನೀರಿನ ಮಟ್ಟ 2 ಸಾವಿರ ಅಡಿಗೆ ಕುಸಿದಾಗ ರೈತರು ಆತ್ಮಹತ್ಯೆ ಮಾಡಿಕೊಳ್ಳದೇ ಬೆಂಗಳೂರಿಗೆ ಹಾಲು, ತರಕಾರಿ, ರೇಷ್ಮೆ, ಹೂ ಬೆಳೆದು ತಮ್ಮ ಸ್ವಾಭಿಮಾನ ಮೆರೆದಿದ್ದಾರೆ. ಹೋರಾಟವಿಲ್ಲದೆ ಪ್ರಗತಿ ಸಾಧ್ಯವಿಲ್ಲ. ಬದಲಾವಣೆಗಳು ಅವಕಾಶ ಸೃಷ್ಟಿಸುತ್ತವೆ. ಒಳ್ಳೆಯದನ್ನು ಉಳಿಸಿಕೊಳ್ಳಲು ಕೆಟ್ಟವರ ಜೊತೆ ಹೋರಾಟ ಮಾಡಬೇಕು. ರೈತರ ಕಣ್ಣೀರು ಒರೆಸುವ ಸರ್ಕಾರ ನಿಮ್ಮ ಮುಂದೆ ನಿಂತಿದೆ. ಕೃಷಿ ನಿಮ್ಮೆಲ್ಲರ ಸಂಸ್ಕೃತಿ, ರೈತರು ನಮ್ಮೆಲ್ಲರ ಆಸ್ತಿ ಎಂದು ಬಣ್ಣಿಸಿದರು. ನನ್ನದು ಹೊಸ ಸರ್ಕಾರ ಅಲ್ಲ. ಸಿದ್ದರಾಮಯ್ಯ ನೇತೃತ್ವದಲ್ಲಿ 3 ವರ್ಷ ನಡೆದ ಸರ್ಕಾರದ ಮುಂದುವರಿದ ಭಾಗ. ರಾಜ್ಯದಲ್ಲಿ ಎಸ್‌ಐಆರ್ ನಡೆಯುತ್ತಿದೆ.

**ಜಲ ಜೀವಕ್ಕೆ ನೆಮ್ಮದಿ,** ಅಂತರ್ಜಲ ಹೆಚ್ಚಿಸಬೇಕು, ಕೆರೆಗಳಿಗೆ ಹಾಗೂ ರೈತರಿಗೆ ನೀರು ತಲುಪಬೇಕು. ಆ. 15ರಂದು ನಮ್ಮ ಸರ್ಕಾರ ಹಮ್ಮಿಕೊಂಡಿರುವ ಯೋಜನೆಗಳನ್ನು ಪ್ರಕಟಿಸಲಿದ್ದೇವೆ. ಜಲ ಜೀವಕ್ಕೆ ನೆಮ್ಮದಿ, ನೀರಿಲ್ಲದೆ ಬದುಕಿಲ್ಲ. ಕೋಲಾರ ,ಚಿಕ್ಕಬಳ್ಳಾಪುರ ಜನರ ನೀರಿನ ಸಮಸ್ಯೆಗೆ ವಿವಿಧ ರೀತಿಯ ಕಾರ್ಯಕ್ರಮ ರೂಪಿಸಲಾಗಿದೆ ಎಂದು ತಿಳಿಸಿದರು.

# ರೈತರ ಕ್ಷಮೆಯಾಚಿಸದಿದ್ದರೆ ಧ್ವಜಾರೋಹಣಕ್ಕೆ ಅವಕಾಶವಿಲ್ಲ: ಷಣ್ಮುಗಸ್ವಾಮಿ

• **ಉದಯವಾಹಿನಿ, ಗುಂಡ್ಲುಪೇಟೆ**

ರೈತರ ಬಗ್ಗೆ ಅವಹೇಳನಕಾರಿ ಹೇಳಿಕೆ ನೀಡಿರುವ ಶಾಸಕ ಗಣೇಶ್ ಪ್ರಸಾದ್ ಅವರು ಕೂಡಲೇ ರೈತರ ಕ್ಷಮೆಯಾಚಿಸಬೇಕು ಇಲ್ಲವಾದಲ್ಲಿ ಆ.15ರ ಸ್ವಾತಂತ್ರ್ಯ ದಿನಾಚರಣೆಯಲ್ಲಿ ಧ್ವಜಾರೋಹಣಕ್ಕೆ ಅವಕಾಶ ನೀಡುವುದಿಲ್ಲ ಎಂದು ರೈತ ಮುಖಂಡ ಷಣ್ಮುಗಸ್ವಾಮಿ ಎಚ್ಚರಿಸಿದರು. ಪಟ್ಟಣದ ಪ್ರವಾಸಿ ಮಂದಿರದಲ್ಲಿ ಕರೆಯಲಾಗಿದ್ದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು ರೈತರು ರೈತರೇ ಅಲ್ಲ ಎಂಬ ಶಾಸಕರ ಹೇಳಿಕೆ ಖಂಡನೀಯ. ದೇಶಕ್ಕೆ ಅನ್ನ ನೀಡುವ ರೈತರ ಬಗ್ಗೆ ಜನಪ್ರತಿನಿಧಿಯೊಬ್ಬರು ಇಂತಹ ಹೇಳಿಕೆ ನೀಡುವುದು ಸರಿಯಲ್ಲ ಎಂದರು.

ತಾಲ್ಲೂಕುನಲ್ಲಿ ಬರ ಪರಿಸ್ಥಿತಿ ತೀವ್ರವಾಗಿದ್ದರೂ ಬರಪೀಡಿತ ತಾಲ್ಲೂಕು ಎಂದು ಘೋಷಿಸಲು ಸಾಧ್ಯವಾಗಿಲ್ಲ. ಕೆರೆಗಳಿಗೆ ನೀರು ತುಂಬಿಸುವುದು ಸೇರಿದಂತೆ ರೈತರ ಹಲವು ಸಮಸ್ಯೆಗಳಿಗೆ ಪರಿಹಾರ ದೊರೆತಿಲ್ಲ. ಸಫಾರಿ ಬಂದ್ ಸೇರಿದಂತೆ ವಿವಿಧ ಸಮಸ್ಯೆಗಳಿಂದ ರೈತರು ಹಾಗೂ ಸಾರ್ವಜನಿಕರು ತೊಂದರೆ ಅನುಭವಿಸುತ್ತಿದ್ದರೂ ಶಾಸಕರು ಸ್ಪಂದಿಸುತ್ತಿಲ್ಲ ಎಂದು ಆರೋಪಿಸಿದರು. ರೈತರ ಬಗ್ಗೆ ಗೌರವವಿದ್ದರೆ ಕೂಡಲೇ ಕ್ಷಮೆಯಾಚಿಸಿ, ರೈತರ ಸಭೆ ಕರೆದು ಸಮಸ್ಯೆಗಳನ್ನ ಆಲಿಸಿ ಪರಿಹಾರ ಕಲ್ಪಿಸಬೇಕು. ರೈತರ ಹೋರಾಟಕ್ಕೆ ರಾಜಕೀಯ ಬಣ್ಣ ನೀಡಬಾರದು.


ಉದಯವಾಹಿನಿ ಚಿತ್ರ

ಹೋರಾಟಗಾರರನ್ನ ಬಿಜೆಪಿ ಏಜೆಂಟ್‌ಗಳು ಎಂದು ಕರೆಯುವುದು ಸರಿಯಲ್ಲ. ಕ್ಷಮೆಯಾಚಿಸದಿದ್ದರೆ ಆ.15 ರಂದು ಕಪ್ಪುಪಟ್ಟಿ ಪ್ರದರ್ಶಿಸಿ ಪ್ರತಿಭಟನೆ ನಡೆಸಲಾಗುವುದು ಎಂದು ಷಣ್ಮುಗಸ್ವಾಮಿ ತಿಳಿಸಿದರು.

ಬರಗಿ ಮಹೇಶ್ ಮಾತನಾಡಿ, ತಾಲ್ಲೂಕಿನ ಹಲವು ಗ್ರಾಮಗಳಲ್ಲಿ ಮೂಲಸೌಕರ್ಯಗಳ ಕೊರತೆ ಮುಂದುವರಿದಿದೆ. ರೈತರ ಸಭೆ ಕರೆದು ಸಮಸ್ಯೆ ಆಲಿಸುವ ಕೆಲಸವಾಗುತ್ತಿಲ್ಲ. ರಾಜಕೀಯ ಲಾಭಕ್ಕಾಗಿ ರೈತರ ಬಗ್ಗೆ ಅವಹೇಳನಕಾರಿ ಹೇಳಿಕೆ ನೀಡಬಾರದು ಎಂದು ಒತ್ತಾಯಿಸಿದರು. ಸುದ್ದಿಗೋಷ್ಠಿಯಲ್ಲಿ ಪಾಪಣ್ಣ, ಮಹದೇವಪ್ರಸಾದ್, ರಾಜು ಭೀಮನಬೀಡು, ವಿನೋದ್, ಹರೀಶ್, ಸ್ವಾಮಿ, ಪ್ರವೀಣ್, ರಮೇಶ್, ಸಿದ್ದಪ್ಪ ದೇವರಹಳ್ಳಿ, ಸೋಮೇಶ್ ಸೇರಿದಂತೆ ಹಲವರು ಉಪಸ್ಥಿತರಿದ್ದರು.

# ಕಿಕ್ಕೇರಿ ಹೋಬಳಿ ನಾಡಕಚೇರಿಯಲ್ಲಿ ಸರ್ವರ್ ಸಮಸ್ಯೆಗೆ ಬೇಸತ್ತ ಜನ

• **ಉದಯವಾಹಿನಿ, ಕಿಕ್ಕೇರಿ**

ಐವತ್ತು ಹೆಚ್ಚು ಹಳ್ಳಿಗಳನ್ನು ಹೊಂದಿರುವ ಕಿಕ್ಕೇರಿ ಹೋಬಳಿ ಕೇಂದ್ರದ ನಾಡಕಚೇರಿಯಲ್ಲಿನ ಕಂಪ್ಯೂಟರ್ ಕೇಂದ್ರದಲ್ಲಿ ಪಹಣಿ, ಭೂ ಹಿಡುವಳಿ, ವಂಶವೃಕ್ಷ ಮತ್ತಿತರ ಅಗತ್ಯ ಪ್ರಮಾಣೀಕೃತ ಪ್ರಮಾಣ ಪತ್ರ ಪಡೆಯಲು ನಿತ್ಯ ನಾಗರಿಕರು ಪರದಾಡಬೇಕಿದೆ.

ಕಳೆದ ಒಂದೆರಡು ತಿಂಗಳಿನಿಂದ ಸರ್ವರ್ ಸಮಸ್ಯೆ ಆಗುತ್ತಿದ್ದು, ಇದಕ್ಕೆ ಪರಿಹಾರಕ್ಕೆ ಸಂಬಂಧಪಟ್ಟ ಅಧಿಕಾರಿಗಳು ಮುಂದಾಗಬೇಕಿದೆ ಎಂದು ಜನರು ಒತ್ತಾಯಿಸಿದ್ದಾರೆ. ಮಾದಾಪುರ, ಗಾಣದಹಳ್ಳಿ, ಗೊಂದಿಹಳ್ಳಿಯಂತಹ ದೂರದ ಹತ್ತಾರು ಹಳ್ಳಿಗಳಿಂದ ವಿವಿಧ ದಾಖಲೆ ಪಡೆಯಲು ಮುಂಜಾನೆಯಿಂದಲೇ ಸರತಿ ಸಾಲಿನಲ್ಲಿ ಊಟ ಬಿಟ್ಟು ಕಾದು ಕುಳಿತುಕೊಳ್ಳಬೇಕಿದೆ. ಭೂ ಹಿಡುವಳಿ, ಇಸಿ, ಆದಾಯ ಪ್ರಮಾಣ ಪತ್ರ, ಬೆಳೆ ದೃಢೀಕರಣ, ವಂಶವೃಕ್ಷ ಮತ್ತಿತರ ದಾಖಲೆ ಪಡೆಯಲು ಮೂರಾಲ್ಕು ಬಾರಿ ಒಟಿಪಿ ಕೊಡಬೇಕಿದೆ. ಒಂದು ಬಾರಿ ನೀಡಿ ಮತ್ತೊಂದು ತಿಳಿಸುವ ಮುನ್ನವೇ ಸರ್ವರ್ ತೊಂದರೆಯಾಗುತ್ತಿದೆ. ಕಳೆದ ನಾಲ್ಕೈದು ತಿಂಗಳಿಂದ ಹಲವು ಹಿರಿಯ ನಾಗರಿಕರಿಗೆ ಮಾಸಾಶನ ಬರುತ್ತಿಲ್ಲ. ಸೂಕ್ತ ದಾಖಲೆಯೊಂದಿಗೆ ಮರು


ಉದಯವಾಹಿನಿ ಚಿತ್ರ

ಅರ್ಜಿ ಸಲ್ಲಿಸಲು ಆದಾಯ ಪ್ರಮಾಣ ಪತ್ರ ಪಡೆಯಲು ಹಿರಿಯ ನಾಗರಿಕರು ಪರದಾಡುವಂತಾಗಿದೆ.

ನಾಲ್ಕೈದು ತಿಂಗಳಿನಿಂದ ಮಾಶಾಸನ ನಿಂತು ಹೋಗಿದೆ. ಪಾರ್ಶ್ವವಾಯು ಪೀಡಿತನಾಗಿದ್ದು ಮಾತ್ರೆ ತೆಗೆದುಕೊಳ್ಳಲು ಕೂಡ ಹಣ ಇಲ್ಲದಾಗಿದೆ.

ಹಲವು ಪ್ರಮಾಣ ಪತ್ರ ಪಡೆದು ಮರು ಅರ್ಜಿ ಸಲ್ಲಿಸಲು ದೊಡ್ಡ ಸಮಸ್ಯೆಯಾಗಿದೆ ಎಂದು ವಯೋವೃದ್ಧ ಕಿಕ್ಕೇರಿಗೌಡ ಅಳಲನ್ನು ತೋಡಿಕೊಂಡಿದ್ದಾರೆ. ಜನಸಾಮಾನ್ಯರ, ರೈತರ ಸಮಸ್ಯೆ ತಮಗೆ ಅರ್ಥವಾಗಿದೆ. ಸರ್ವರ್ ಸಮಸ್ಯೆ ಬಲುದೊಡ್ಡದಾಗಿ ಕಾಡುತ್ತಿದೆ. ತುರ್ತು ಸಮಸ್ಯೆ ಪರಿಹರಿಸಿಕೊಡಲು ಸಂಬಂಧಪಟ್ಟ ಅಧಿಕಾರಿಗಳಿಗೆ ಮನವಿ ಮಾಡಲಾಗಿದೆ ಎನ್ನುತ್ತಾರೆ ನಾಡಕಚೇರಿಯ ಉಪತಹಸೀಲ್ದಾರ್ ಕೆ.ಎಂ. ವೀಣಾ.

# ಅನೈತಿಕ ಚಟುವಟಿಕೆ ತಾಣವಾದ ಶಾಲಾ ಕಟ್ಟಡ

• **ಉದಯವಾಹಿನಿ, ಮಾಗಡಿ**

ಹೊಸ ನೀರು ಬಂದಾಗ ಹಳೆ ನೀರು ಕೊಚ್ಚಿ ಹೋದಂತೆ ಎಂಬ ಗಾದೆ ಮಾತಿನ ಅರ್ಥದ ರೀತಿ ಕೆಪಿಎಸ್ ಹೊಸ ಕಟ್ಟಡ ಸಿದ್ದಗೊಂಡ ಬಳಿಕ ಶಿಕ್ಷಣ ಇಲಾಖೆಯು ಹಳೆಯ ಶಾಲಾ ಕಟ್ಟಡವನ್ನು ಮರೆಯುತ್ತಿದೆ ಎಂಬಂತೆ ಕಂಡುಬರುತ್ತಿದೆ. ಹೌದು, ಪಟ್ಟಣದಲ್ಲಿ ಹೊಸ ಕೆಪಿಎಸ್ ಶಾಲೆಯನ್ನು ತೆರೆಯಲಾಗಿದೆ. ಇದರಿಂದಾಗಿ ಹಳೆಯ ಸರ್ಕಾರಿ ಪ್ರಾಥಮಿಕ ಶಾಲಾ ಕಟ್ಟಡವು ಅನಾಥವಾಗಿ ಬಿದ್ದಿದೆ. ಹಳೆಯ ಶಾಲೆಯಲ್ಲಿನ 23 ಕೊಠಡಿಗಳು ಅನೈತಿಕ ಚಟುವಟಿಕೆಗಳ ತಾಣವಾಗಿ ಮಾರ್ಪಟ್ಟಿದೆ. ಶಾಲಾ ಕೊಠಡಿಗಳ ಕಿಟಕಿ, ಬಾಗಿಲು ಮತ್ತು ಬೆಂಚುಗಳು ಮುರಿದಿದ್ದು, ಶಾಲಾ ಕೊಠಡಿಗಳು ಪಾಳು ಬಿದ್ದಿರುವ ಸ್ಥಿತಿಯಲ್ಲಿವೆ ಎಂದು ಹಳೆಯ ವಿದ್ಯಾರ್ಥಿಗಳು ಮತ್ತು ನಿವೃತ್ತ ಶಿಕ್ಷಕರು ಬೇಸರ ವ್ಯಕ್ತಪಡಿಸಿದರು.

ಪಾಳು ಬಿದ್ದ ಸ್ಥಿತಿಯಲ್ಲಿರುವ ಕುದೂರು ಪಟ್ಟಣದ ಸರ್ಕಾರಿ ಶಾಲೆಯು 105 ವರ್ಷಗಳ ಇತಿಹಾಸ ಹೊಂದಿದೆ. ಶೈಕ್ಷಣಿಕ ಚಟುವಟಿಕೆಗಳಿಗೆ ಈ ಕೊಠಡಿಗಳನ್ನು ಬಳಕೆ ಮಾಡಬೇಕು. ಈ ಮೂಲಕ ಶಾಲೆಯನ್ನು ಮತ್ತೆ ಸುಸ್ಥಿತಿಗೆ ತರಬೇಕು ಎಂದು ಹಳೆಯ ವಿದ್ಯಾರ್ಥಿಗಳು, ಶಿಕ್ಷಣ ಇಲಾಖೆಯನ್ನು ಒತ್ತಾಯಿಸಿದರು. ಹಳೆಯ ಕಟ್ಟಡವನ್ನು ಬಳಕೆ ಮಾಡದೆ ಹಾಗೆಯೇ ಬಿಟ್ಟಿರುವುದರಿಂದ ಕೊಠಡಿಗಳು ಕಸದ ಅಂಗಡಿಗಳಂತೆ ಭಾಸವಾಗುತ್ತಿದೆ. ದಾಖಲೆಗಳ ಹಾಳೆಗಳು, ಒಡೆದ ವಸ್ತುಗಳು ಚೆಲ್ಲಾಪಿಲ್ಲಿಯಾಗಿ ಬಿದ್ದಿವೆ. ಕಿಟಕಿ-ಬಾಗಿಲುಗಳು ಮುರಿದುಹೋಗಿವೆ. ಕಟ್ಟಡದಲ್ಲಿ ಅನೈತಿಕ ಚಟುವಟಿಕೆಗಳು ನಡೆಯುತ್ತಿವೆ. ಈ ಹಿನ್ನೆಲೆಯಲ್ಲಿ ರಾತ್ರಿ ಪಾಳಿಯಲ್ಲಿ ಕಾವಲುಗಾರರನ್ನು ನೇಮಿಸಬೇಕು. ಜೊತೆಗೆ ಸಿಸಿಟಿವಿ ಕಣ್ಗಾವಲು ವ್ಯವಸ್ಥೆ ಮಾಡಬೇಕು ಎಂದು ಸ್ಥಳೀಯರು ಸರ್ಕಾರಕ್ಕೆ ಒತ್ತಾಯಿಸಿದರು. ಶತಮಾನದ ಶಾಲೆಯನ್ನು ಉಳಿಸಿ ಶೈಕ್ಷಣಿಕ ಚಟುವಟಿಕೆಗೆ ಮರುಬಳಕೆ ಮಾಡಬೇಕು ಎಂದು ಹಳೆ ವಿದ್ಯಾರ್ಥಿಗಳು, ನಿವೃತ್ತ ಶಿಕ್ಷಕರು, ಪೋಷಕರು ಹಾಗೂ ಎಸ್‌ಡಿಎಂಸಿ ಸದಸ್ಯರು ಒತ್ತಾಯಿಸಿದ್ದಾರೆ. ಪಾಳುಬಿದ್ದಿರುವ ಕೊಠಡಿಗಳನ್ನು ದುರಸ್ತಿಗೊಳಿಸಿ ಗ್ರಂಥಾಲಯ, ತರಬೇತಿ ಕೇಂದ್ರ, ಅಥವಾ ಡಿಜಿಟಲ್ ಕಲಿಯುವ ಕೇಂದ್ರವಾಗಿ ಪರಿವರ್ತಿಸಬೇಕು ಎಂಬ ಅಗ್ರಹ ಕೇಳಿ ಬಂದಿದೆ.

> ಸರ್ಕಾರಿ ಶಾಲೆಯ ಹಳೆ ಕಟ್ಟಡ ಪಾಳು ಬಿದ್ದ ಸ್ಥಿತಿಯಲ್ಲಿದೆ. ಈ ಶಾಲಾ ಕಟ್ಟಡವನ್ನು ಸುಸ್ಥಿತಿಗೆ ತರುವ ನಿಟ್ಟಿನಲ್ಲಿ ಎಸ್‌ಡಿಎಂಸಿ ಸಭೆ ನಡೆಸಿ ಕ್ರಮ ಕೈಗೊಳ್ಳುವಂತೆ ಒತ್ತಾಯಿಸಲಾಗುವುದು.
> ಕೆ.ಎಚ್.ನಾಗೇಶ್ ಎಸ್‌ಡಿಎಂಸಿ ಉಪಾಧ್ಯಕ್ಷ ಕುದೂರು


ಉದಯವಾಹಿನಿ ಚಿತ್ರ

# ಗೌಡಗೆರೆ ಚಾಮುಂಡಿ ಕ್ಷೇತ್ರದಲ್ಲಿ ಆ.12ರಂದು ಭೀಮನ ಅಮವಾಸ್ಯೆ, ಚಾಮುಂಡೇಶ್ವರಿ ಮಹಾರಥೋತ್ಸವ


ಉದಯವಾಹಿನಿ ಚಿತ್ರ

• **ಉದಯವಾಹಿನಿ, ರಾಮನಗರ**

ಇಲ್ಲಿನ ಪ್ರಸಿದ್ಧ ಗೌಡಗೆರೆ ಚಾಮುಂಡಿ ಕ್ಷೇತ್ರದಲ್ಲಿ ಆಗಸ್ಟ್ 12ರಂದು ಪ್ರತಿ ವರ್ಷದಂತೆ ಭೀಮನ ಅಮವಾಸ್ಯೆ ಹಾಗೂ ಚಾಮುಂಡೇಶ್ವರಿ ಅಮ್ಮನವರ ಮಹಾ ರಥೋತ್ಸವ, ವಿಶೇಷ ಪೂಜಾ ಕೈಂಕರ್ಯಗಳನ್ನು ಹಮ್ಮಿಕೊಳ್ಳಲಾಗಿದೆ ಎಂದು ದೇವಸ್ಥಾನದ ಧರ್ಮದರ್ಶಿ ಡಾ. ಶ್ರೀ ಮಲ್ಲೇಶ್ ಗುರೂಜಿ ತಿಳಿಸಿದ್ದಾರೆ.

ಬೊಂಬೆನಗರಿ ಚನ್ನಪಟ್ಟಣ ತಾಲ್ಲೂಕಿನ ಗೌಡಗೆರೆಯ ಶ್ರೀಕ್ಷೇತ್ರದ ಆವರಣದಲ್ಲಿ ಅದ್ದೂರಿಯಾಗಿ ಭೀಮನ ಅಮವಾಸ್ಯೆಯನ್ನು ಹಮ್ಮಿಕೊಳ್ಳಲಾಗಿದೆ. ನಾಡಿನೆಲ್ಲೆಡೆಯಿಂದ ಸಾವಿರಾರು ಸಂಖ್ಯೆಯಲ್ಲಿ ಭಕ್ತರು ಆಗಮಿಸುವ ನಿರೀಕ್ಷೆ ಇದೆ. ಭಕ್ತಾಧಿಗಳಿಗೆ ಯಾವುದೇ ತೊಂದರೆ ಆಗದಂತೆ ಮೂಲಭೂತ ಸೌಲಭ್ಯಗಳೊಂದಿಗೆ ಸಕಲ ಸಿದ್ಧತೆ ಮಾಡಿಕೊಳ್ಳಲಾಗಿದೆ ಎಂದರು. ಭೀಮನ ಅಮಾವಾಸ್ಯೆ ಪ್ರಯುಕ್ತ ಬುಧವಾರ ಮೂರು ಮಹಾಮಂಗಳಾರತಿ ಇರಲಿದೆ. ಬೆಳಗಿನ ಜಾವ 4.28, 7.28 ಹಾಗೂ ಮಧ್ಯಾಹ್ನ 12.28 ಗಂಟೆಗೆ ಮಹಾಮಂಗಳಾರತಿ ನಡೆಸಲಾಗುವುದು. ಬೆಳಗಿನ ಜಾವ ಸುಮಾರು 2 ಗಂಟೆಯಿಂದ ಅಮ್ಮನವರಿಗೆ ರುದ್ರಾಭಿಷೇಕ, ಶ್ರೀ ಚಕ್ರಕ್ಕೆ ಚಕ್ರಾಭಿಷೇಕ, ಶ್ರೀ ಪಂಚಾಮೃತ ಅಭಿಷೇಕ, ತೀರ್ಥ ಪ್ರಸಾದ ವಿನಿಯೋಗ, ಶ್ರೀ ಚಾಮುಂಡೇಶ್ವರಿ ಅಮ್ಮನವರ ಮಹಾ ರಥೋತ್ಸವ ಧಾರ್ಮಿಕ ವಿಧಿ ವಿಧಾನಗಳೊಂದಿಗೆ ನಡೆಯಲಿದೆ. ಬನ್ನಿಮಂಟಪದಿಂದ ವಿವಿಧ ಜಾನಪದ ಕಲಾಮೇಳಗಳೊಂದಿಗೆ ಶ್ರೀ ಕ್ಷೇತ್ರದ ಕ್ಷೇತ್ರಪಾಲಕ ಪವಾಡ ಶ್ರೀ ಬಸಪ್ಪನವರಿಗೆ ಕ್ಷೀರಾಭಿಷೇಕ ಮಾಡಲಾಗುವುದು. ಮಧ್ಯಾಹ್ನ 12.30ಕ್ಕೆ ಮಹಾ ರಥೋತ್ಸವಕ್ಕೆ ಚಾಲನೆ ನೀಡಲಾಗುವುದು ಎಂದು ತಿಳಿಸಿದರು.

ಕ್ಷೇತ್ರದಲ್ಲಿ ಭಕ್ತರೇ ನೇರವಾಗಿ ಯಾವುದೇ ಜಾತಿ ಬೇಧವಿಲ್ಲದೇ ಅಮ್ಮನವರ ಗರ್ಭಗುಡಿಯೊಳಗೆ ಪ್ರವೇಶಿಸಿ, ಶ್ರೀಚಕ್ರ ಮತ್ತು ಅಮ್ಮನವರಿಗೆ ಹಾಲಿನ ಅಭಿಷೇಕ ಮಾಡಬಹುದು. ಆ ಮೂಲಕ ತಮ್ಮ ಸಂಕಷ್ಟ ನಿವಾರಣೆಗಾಗಿ ದೇವರಲ್ಲಿ ಆಶೀರ್ವಾದ ಬಯಸಬಹುದು.

ಕ್ಷೇತ್ರದಲ್ಲಿ ದಂಪತಿ ಸಮೇತ ನೇರವಾಗಿ ಹಾಲಿನ ಅಭಿಷೇಕ ಮಾಡುವವರಿಗೆ ಶ್ರೀಚಕ್ರದ ನೈವೇದ್ಯವನ್ನು ಪ್ರಸಾದ ರೂಪದಲ್ಲಿ ನೀಡಲಾಗುವುದು ಎಂದು ಶ್ರೀಗಳು ಹೇಳಿದರು. ಯಾವುದೇ ತೊಂದರೆ ಆಗದಂತೆ ಮೂಲಭೂತ ಭಕ್ತರಿಗೆ ಯಾವುದೇ ತೊಂದರೆ ಅಗದಂತೆ ಅಗತ್ಯ ಕೊಠಡಿ, ಪ್ರಸಾದ ವಿನಿಯೋಗ, ಕುಡಿಯುವ ನೀರು, ಆರೋಗ್ಯ ಸೇವೆ, ವಿಶ್ರಾಂತಿ ವ್ಯವಸ್ಥೆ, ಶೌಚಾಲಯ, ಭದ್ರತೆ, ಪಾರ್ಕಿಂಗ್ ವ್ಯವಸ್ಥೆ ಸೇರಿದಂತೆ ಮೂಲಸೌಕರ್ಯ ಒದಗಿಸಲು ಅಗತ್ಯ ಕ್ರಮ ತೆಗೆದುಕೊಳ್ಳಲಾಗಿದೆ.

# ಮಿನಿ ನ್ಯೂಸ್

## ತುಮಕೂರು ಹೈವೇಯಲ್ಲಿ ಅಪಘಾತ

• **ಉದಯವಾಹಿನಿ, ತುಮಕೂರು**

ಲಾರಿಗೆ ಹಿಂಬದಿಯಿಂದ ಬೊಲೆರೋ ಗೂಡ್ಸ್ ವಾಹನ ಡಿಕ್ಕಿ ಹೊಡೆದ ಪರಿಣಾಮ ಇಬ್ಬರು ಸ್ಥಳದಲ್ಲೇ ಸಾವನ್ನಪ್ಪಿದ ಘಟನೆ ತುಮಕೂರು ತಾಲ್ಲೂಕಿನ ಸೋರೆಕುಂಟೆ ಬಳಿ ನಡೆದಿದೆ. ಮೃತರ ಪೈಕಿ ಓರ್ವನನ್ನು ಷಣ್ಮುಗ (50) ಎಂದು ಗುರುತಿಸಲಾಗಿದ್ದು, ಆತನ ಜೊತೆಯಲ್ಲಿದ್ದ ಮತ್ತೊಬ್ಬ ವ್ಯಕ್ತಿಯ ಗುರುತು ಪತ್ತೆ ಹಚ್ಚುವ ಕಾರ್ಯ ಪ್ರಗತಿಯಲ್ಲಿದೆ. ಬೆಂಗಳೂರಿನಿಂದ ಚಿತ್ರದುರ್ಗದತ್ತ ಟ್ರ್ಯಾಕ್ಟರ್‌ಗಳನ್ನು ಹೇರಿಕೊಂಡು ಲಾರಿಯೊಂದು ತೆರಳುತ್ತಿತ್ತು. ಈ ವೇಳೆ ಅದೇ ಮಾರ್ಗದಲ್ಲಿ ವೇಗವಾಗಿ ಬಂದ ಬೊಲೆರೋ ಗೂಡ್ಸ್ ವಾಹನವು ಸೋರೆಕುಂಟೆ ಬಳಿ ಚಾಲಕನ ನಿಯಂತ್ರಣ ತಪ್ಪಿ ಲಾರಿಯ ಹಿಂಭಾಗಕ್ಕೆ ಬಲವಾಗಿ ಡಿಕ್ಕಿ ಹೊಡೆದಿದೆ. ಡಿಕ್ಕಿಯ ರಭಸಕ್ಕೆ ಬೊಲೇರೊ ಗೂಡ್ಸ್ ವಾಹನ ಸಂಪೂರ್ಣವಾಗಿ ನಜ್ಜುಗುಜ್ಜಾಗಿದ್ದು, ವಾಹನದಲ್ಲಿದ್ದ ಇಬ್ಬರೂ ತೀವ್ರ ರಕ್ತಸ್ರಾವದಿಂದ ಸ್ಥಳದಲ್ಲೇ ಉಸಿರುಚೆಲ್ಲಿದ್ದಾರೆ.

ಘಟನೆ ನಡೆದ ವಿಷಯ ತಿಳಿಯುತ್ತಿದ್ದಂತೆ ಕೋರಾ ಪೊಲೀಸ್ ಠಾಣೆಯ ಸಿಬ್ಬಂದಿ ಸ್ಥಳಕ್ಕೆ ದೌಡಾಯಿಸಿ ಪರಿಶೀಲನೆ ನಡೆಸಿದ್ದಾರೆ. ಮೃತದೇಹಗಳನ್ನು ಮರಣೋತ್ತರ ಪರೀಕ್ಷೆಗಾಗಿ ತುಮಕೂರು ಜಿಲ್ಲಾಸ್ಪತ್ರೆಗೆ ರವಾನಿಸಲಾಗಿದೆ.

## ಭ್ರಷ್ಟಾಚಾರ ಆರೋಪ : ಕೆಆರ್‌ಐಡಿಎಲ್ ಇಇ ಅಧಿಕಾರಿ ಕೆ. ಶೋಭಾ ವಿರುದ್ಧ ಪ್ರತಿಭಟನೆ


ಉದಯವಾಹಿನಿ ಚಿತ್ರ

• **ಉದಯವಾಹಿನಿ, ಮೈಸೂರು**

ಕೆಆರ್‌ಐಡಿಎಲ್ ಕಾರ್ಯಪಾಲಕ ಅಭಿಯಂತರರಾದ ಕೆ.ಶೋಭ ಅವರು, ತಮ್ಮ ಸ್ವಂತ ಇಲಾಖೆ ಸೇರಿದಂತೆ ವಿವಿಧ ಕಡೆ ನಡೆಸಿರುವ ಕಾಮ ಗಾರಿಗಳಲ್ಲಿ ಸುಮಾರು 60 ಲಕ್ಷ ರೂ ಭ್ರಷ್ಟಾಚಾರ ನಡೆಸಿದ್ದಾರೆಂದು ಆರೋಪಿಸಿ ಕರ್ನಾಟಕ ರಕ್ಷಣಾ ವೇದಿಕೆ ಸ್ವಾಭಿಮಾನಿ ಬಳಗದಿಂದ ಸೋಮವಾರ ಪ್ರತಿಭಟನೆ ನಡೆಯಿತು.

ಸೋಮವಾರ ಬೆಳಗ್ಗೆ ಆಲನಹಳ್ಳಿ ಬಡಾವ ಣೆಯಲ್ಲಿರುವ ಕೆಆರ್‌ಐಡಿಎಲ್ ಕಚೇರಿ ಎದುರು ಕರವೇ ಸ್ವಾಭಿಮಾನಿ ಬಳಗದ ರಾಜ್ಯಾಧ್ಯಕ್ಷರಾದ ಡಾ.ಎಂ. ಲಿಂಗರಾಜು ನೇತೃತ್ವದಲ್ಲಿ ಜಮಾಯಿಸಿದ ಕಾರ್ಯಕರ್ತರು ಕೆಆರ್‌ಐಡಿಎಲ್ ಇಇ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ಡಾ.ಎಂ.ಲಿಂಗರಾಜು ಮಾತನಾಡಿ ಕೆ.ಆರ್.ಐ.ಡಿ.ಎಲ್ ಮೈಸೂರು ಕಚೇರಿ ರಿಪೇರಿ ಕೆಲಸಕ್ಕೆ ಬಿಡುಗಡೆ ಆಗಿದ್ದ ಸರ್ಕಾರಿ ಹಣವನ್ನು ಎಇಇ ಕೆ.ಶೋಭಾ ದುರ್ಬಳಕೆ ಮಾಡಿಕೊಂಡಿದ್ದಾರೆ.

ಕೂಡಲೇ ಅವರನ್ನು ಸೇವೆಯಿಂದ ವಜಾ ಮಾಡಬೇಕು, ಅವರ ವಿರುದ್ಧ ತನಿಖೆ ಕೈಗೊಂಡು ದುರುಪಯೋಗ ಆಗಿರುವ ಹಣವನ್ನು ವಸೂಲಿ ಮಾಡಬೇಕೆಂದು ಆಗ್ರಹಿಸಿದರು.

ಸಂಘಟನೆಯ ರಾಜ್ಯ ಉಪಾಧ್ಯಕ್ಷ ಮಲ್ಲೇಶ್, ಪ್ರಧಾನ ಕಾರ್ಯದರ್ಶಿ ಚರಣ್ ರಾಜ್, ಖಜಾಂಚಿ ಮಹದೇವಸ್ವಾಮಿ, ಸಂಚಾಲಕರಾದ ಕರಿಯಪ್ಪ, ಮಹದೇವ್, ಪ್ರಕಾಶ್, ಮಹೇಶ್, ರವಿ ಪ್ರಕಾಶ್, ರವಿ ಕುಮಾರ್, ರವಿ ಕಿರಣ್, ಸೋಮಣ್ಣ, ಶಿವಣ್ಣ, ಗುರುಸ್ವಾಮಿ, ಗಗನ, ಪುಟ್ಟತಾಯಮ್ಮ ಉಷಾ, ಬಸವರಾಜು ಇದ್ದರು.

## ಸುಸಜ್ಜಿತ ಸಮುದಾಯ ಭವನ ನಿರ್ಮಾಣ : ಕೆ.ಶೇಷಾದ್ರಿ


ಉದಯವಾಹಿನಿ ಚಿತ್ರ

• **ಉದಯವಾಹಿನಿ, ರಾಮನಗರ**

ನಗರದ ಮೇದರ ಬೀದಿಯ ಜನರ ಬಹು ದಿನದ ಬೇಡಿಕೆಗೆ ಸ್ಪಂದಿಸುವ ಜತೆಗೆ ನಗರಸಭೆಯಿಂದ ಉತ್ತಮ ಸುಸಜ್ಜಿತ ಸಮುದಾಯ ಭವನ ನಿರ್ಮಾಣ ಆಗಲಿದೆ ಎಂದು ನಗರಸಭೆ ಅಧ್ಯಕ್ಷ ಕೆ.ಶೇಷಾದ್ರಿ (ಶಶಿ) ತಿಳಿಸಿದರು.

ನಗರದ ಮೇದರ ಬೀದಿಯಲ್ಲಿ ಸಮುದಾಯ ಭವನ ನಿರ್ಮಾಣಕ್ಕೆ ಗುದ್ದಲಿಪೂಜೆ ನೆರವೇರಿಸಿ ಅವರು ಮಾತನಾಡಿದರು. ನಗರಸಭೆ ವತಿಯಿಂದ ನಾವು ತಳ ಸಮುದಾಯಗಳಿಗೆ ಸಾಮಾಜಿಕ ಶಕ್ತಿಯನ್ನ ನೀಡುವ ಸಂಬಂಧ ಘೋಷಣೆ ಮಾಡಲಾಗಿತ್ತು. 2026-27ನೇ ಸಾಲಿನ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ಅನುದಾನ ಬಳಸಿಕೊಂಡು 14-30 ಅಳತೆಯ ನಿವೇಶನದಲ್ಲಿ ಸುಮಾರು ಹನ್ನೊಂದುವರೆ ಲಕ್ಷ ರೂ. ವೆಚ್ಚದಲ್ಲಿ ಸುಸಜ್ಜಿತ ಸಮುದಾಯ ಭವನ ನಿರ್ಮಾಣ ಕಾಮಗಾರಿ ಇಂದು ಕೈಗೆತ್ತಿಕೊಳ್ಳಲಾಗಿದೆ ಎಂದರು. ಮೇದರ ಜನಾಂಗದ ಕುಟುಂಬಗಳು ಕಳೆದ 50 ವರ್ಷಗಳಿಂದಲೂ ಬಿದಿರಿನ ಬುಟ್ಟಿ, ಏಣ , ಮಂಕರಿ, ರೇಷ್ಮೆ ಚಂದ್ರಿಕೆ,ತಟ್ಟೆ ಮತ್ತಿತರ ಬಿದಿರು ಪದಾರ್ಥ ಮಾಡಿಕೊಂಡು ಇಲ್ಲಿ ಜೀವನ ಸಾಗಿಸುತ್ತಿವೆ. ಸುಸಜ್ಜಿತ ಸಮುದಾಯ ಭವನ ನಿರ್ಮಾಣ ಮಾಡಿಕೊಡಬೇಕು ಎಂಬುದು ಇಲ್ಲಿನ ಜನರ ಬಹುದಿನಗಳ ಬೇಡಿಕೆಯಾಗಿತ್ತು. ಇದೀಗ ಭವನ ನಿರ್ಮಾಣ ಕಾಮಗಾರಿಗೆ ಚಾಲನೆ ನೀಡಲಾಗಿದ್ದು,ಗುಣಮಟ್ಟದ ಕಟ್ಟಡ ನಿರ್ಮಾಣ ಮಾಡಲು ಗುತ್ತಿಗೆದಾರರಿಗೆ ಸೂಚನೆ ನೀಡಲಾಗಿದೆ ಎಂದು ಹೇಳಿದರು. ನಗರಸಭೆ ಸದಸ್ಯರಾದ ಸೋಮಶೇಖರ್ ಮಣಿ, ಗೋವಿಂದರಾಜು, ಅಧಿಕಾರಿಗಳಾದ ವಿಶ್ವನಾಥ್, ಪಲ್ಲವಿ, ನಿರ್ಮಲ, ಪವಿತ್ರ, ನಾಗರಾಜು, ಪುಟ್ಟಸ್ವಾಮಿ ಮುಂತಾದವರಿದ್ದರು.

## ಹೇಮಾವತಿ ಎಡದಂಡೆ ನಾಲೆಗೆ ನೀರು ಹರಿಸಲು ಶಾಸಕ ಎಚ್.ಟಿ.ಮಂಜು ಒತ್ತಾಯ

• **ಉದಯವಾಹಿನಿ, ಕೆ.ಆರ್.ಪೇಟೆ**


ಉದಯವಾಹಿನಿ ಚಿತ್ರ

ಹೇಮಾವತಿ ನೀರಾವರಿ ಸಲಹಾ ಸಮಿತಿಯ ಸಭೆಯನ್ನು ಶೀಘ್ರವಾಗಿ ಕರೆದು, ಹೇಮಾವತಿ ಜಲಾಶಯದ ಎಡದಂಡೆ ನಾಲೆಗೆ ನೀರು ಹರಿಸಿ ನಾಲಾ ವ್ಯಾಪ್ತಿಯ ಕೆರೆ ಕಟ್ಟೆಗಳನ್ನು ತುಂಬಿಸಬೇಕೆಂದು ಶಾಸಕ ಎಚ್.ಟಿ.ಮಂಜು ಸರ್ಕಾರವನ್ನು ಒತ್ತಾಯಿಸಿದ್ದಾರೆ. ಈ ಸಂಬಂದ ಹೇಳಿಕೆ ನೀಡಿರುವ ಅವರು, ಪ್ರಸ್ತುತ ಹೇಮಾವತಿ ಜಲಾಶಯದಲ್ಲಿ 29 ಟಿಎಂಸಿ ಅಡಿಗೂ ಅಧಿಕ ನೀರಿದೆ.

ಹೇಮಾವತಿ ನದಿಯ ಒಳಹರಿವಿನಲ್ಲಿಯೂ ಹೆಚ್ಚಳವಾಗಿದ್ದು ಪ್ರಸ್ತುತ 6 ಸಾವಿರಕ್ಕೂ ಅಧಿಕ ಕ್ಯುಸೆಕ್ ನೀರು ಜಲಾಶಯಕ್ಕೆ ಹರಿದು ಬರುತ್ತಿದೆ. ಕೇವಲ 3 ಸಾವಿರ ಕ್ಯುಸೆಕ್ ನೀರು ಹರಿಸಿದರೆ ಎಲ್ಲಾ ಕೆರೆ ಕಟ್ಟೆಗಳನ್ನು ತುಂಬಿಸಬಹುದು. ಈ ಬಗ್ಗೆ ಜಲಸಂಪನ್ಮೂಲ ಸಚಿವರಾದ ರಾಮಲಿಂಗಾರೆಡ್ಡಿ, ಹಾಸನ ಮತ್ತು ಮಂಡ್ಯ ಜಿಲ್ಲಾ ಉಸ್ತುವಾರಿ ಮಂತ್ರಿಗಳೊಂದಿಗೆ ಮಾತನಾಡಿದ್ದು ಶೀಘ್ರವಾಗಿ ಕ್ರಮ ಕೈಗೊಳ್ಳುವ ಭರವಸೆ ನೀಡಿದ್ದಾರೆ. ಮಂದಗೆರೆ ಎಡ ಮತ್ತು ಬಲದಂಡೆ ನಾಲೆ ಹಾಗೂ ಹೇಮಗಿರಿ ನದಿ ಅಣೆಕಟ್ಟೆ ನಾಲೆಗಳು ಶತಮಾನದ ಹಿಂದೆ ನಿರ್ಮಾಣವಾಗಿದ್ದು ಇವು ನದಿಯ ಒಳಹರಿವನ್ನು ಅಧರಿಸಿರುವ ನಾಲೆಗಳು. ಸದರಿ ನಾಲೆಗಳಿಗೆ ನೀರು ಹರಿಸಲು ನೀರಾವರಿ ಸಲಹಾ ಸಮಿತಿಯ ಸಭೆಯ ಅಗತ್ಯವಿಲ್ಲದಿರುವದರಿಂದ ಅಧಿಕಾರಿಗಳು ನದಿ ಅಣೆಕಟ್ಟೆ ನಾಲೆಗಳಿಗೆ ಒಂದು ಬೆಳೆಗೆ ಸಂಪೂರ್ಣ ನೀರು ಬಿಡಲು ಕ್ರಮವಹಿಸಬೇಕು ಎಂದು ಒತ್ತಾಯಿಸಿದ್ದಾರೆ.

ಕೆರೆ ಕಟ್ಟೆಗಳನ್ನು ತುಂಬಿಸಲು ಕ್ರಮವಹಿಸದಿದ್ದರೆ ತಾಲ್ಲೂಕಿನ ರೈತರ ಜೊತೆಗೂಡಿ ಬೀದಿ ಹೋರಾಟಕ್ಕಿಳಿಯಬೇಕಾಗುತ್ತದೆಂದು ಅವರು ಎಚ್ಚರಿಕೆ ನೀಡಿದ್ದಾರೆ.

# ಬೆಂಗಳೂರಿನಲ್ಲಿ ಸ್ಟಾರ್ ಹೋಟೇಲ್‌ಗಳ ಮೇಲೆ ದಾಳಿ

## ಕರ್ನಾಟಕದಲ್ಲಿ ನಗರ ಪ್ರದೇಶವನ್ನು ಬಿಟ್ಟರೆ ಗ್ರಾಮೀಣ ಭಾಗದಲ್ಲಿ ಜನರ ಆರೋಗ್ಯದ ಕಾಳಜಿ ಮಾಡುತ್ತಿರುವುದು ಸರ್ಕಾರಿ ಆಸ್ಪತ್ರೆಗಳೇ

• **ಉದಯವಾಹಿನಿ, ಮೈಸೂರು**

1 ಸಭಾಪತಿ ವಿಚಾರದಲ್ಲಿ ರಾಜಕೀಯ
2 ಖಾತೆ ಹಂಚಿಕೆಯಲ್ಲಿ ಗೊಂದಲ
3 ತನ್ವೀರ್ ಸೇಠ್‌ಗೆ ಒಳ್ಳೆಯ ಕಾಲ

ಬೆಂಗಳೂರಿನ ಸ್ಟಾರ್ ಹೋಟೆಲ್‌ಗಳ ಮೇಲೆ ಆಹಾರ ಇಲಾಖೆ ಅಧಿಕಾರಿಗಳ ದಾಳಿಯು ಕೇವಲ ಕ್ರಮ ತೆಗೆದುಕೊಳ್ಳುವುದಕ್ಕೆ ಅಲ್ಲ, ಈ ಬಗ್ಗೆ ಜಾಗೃತಿ ಮೂಡಿಸುವುದು ಹಾಗು ಕೈಮೀರಿದರೆ ಕ್ರಮ ತೆಗೆದುಕೊಳ್ಳುವುದಾಗಿದೆ ಎಂದು ಆರೋಗ್ಯ ಸಚಿವ ಯು.ಟಿ.ಖಾದರ್ ಹೇಳಿದ್ದಾರೆ.

ಮೈಸೂರಿನ ಕಾಂಗ್ರೆಸ್ ಭವನದ ಬಳಿ ಇಂದು ಮಾಧ್ಯಮಗಳ ಜೊತೆ ಮಾತನಾಡಿದ ಅವರು, ಈ ಬಗ್ಗೆ ಜನರಿಗೂ ಗೊತ್ತಾಗಬೇಕು. ಹೊಟೇಲ್ ಮಾಲೀಕರಿಗೂ ಗೊತ್ತಾಗಬೇಕು. ನಮ್ಮ ಉದ್ದೇಶ ಕ್ರಮ ತೆಗೆದುಕೊಳ್ಳುವುದಲ್ಲ, ಕೇಳಿದಷ್ಟು ಹಣ ಕೊಡುವ ಜನರಿಗೆ ಒಳ್ಳೆಯ ಆಹಾರ ಕೊಡುವುದು. ಆ ಮೂಲಕ ಆರೋಗ್ಯ ಕಾಪಾಡುವುದಾಗಿದೆ ಎಂದು ತಿಳಿಸಿದರು. ರಾಜ್ಯದಲ್ಲಿ ಸರ್ಕಾರಿ ಆರೋಗ್ಯ ಕೇಂದ್ರಗಳಲ್ಲಿ ಸುಧಾರಣೆ ತರುವ ಕೆಲಸ ಮಾಡುತ್ತೇವೆ. ಈಗಲೂ ಸಹ ಕರ್ನಾಟಕದಲ್ಲಿ ನಗರ ಪ್ರದೇಶವನ್ನು ಬಿಟ್ಟರೆ ಗ್ರಾಮೀಣ ಭಾಗದಲ್ಲಿ ಜನರ ಆರೋಗ್ಯದ ಕಾಳಜಿ ಮಾಡುತ್ತಿರುವುದು ಸರ್ಕಾರಿ ಆಸ್ಪತ್ರೆಗಳೇ. ಇವುಗಳ ಸುಧಾರಣೆಗಳ ಬಗ್ಗೆ ಮುಂದಿನ ದಿನಗಳಲ್ಲಿ ಕ್ರಮ ತೆಗೆದುಕೊಳ್ಳುವುದಾಗಿ



ಉದಯವಾಹಿನಿ ಚಿತ್ರ

ಆರೋಗ್ಯ ಸಚಿವರು ಹೇಳಿದರು. **ಸಭಾಪತಿ ವಿಚಾರದಲ್ಲಿ ರಾಜಕೀಯ ಬೇಡ:** ಸಭಾಪತಿಯಂತಹ ಗೌರವದ ಹುದ್ದೆಯ ಬಗ್ಗೆ ವಿರೋಧ ಪಕ್ಷಗಳು ಕೀಳು ರಾಜಕೀಯ ಮಾಡಬಾರದು. ಕಳೆದ ಮೂರು ವರ್ಷಗಳಿಂದ ಒಂದು ವೋಟಿಗಾಗಿ ವಿಧಾನ ಪರಿಷತ್‌ನ ಸಭಾಪತಿ ಬದಲಾವಣೆ ಮಾಡಿರಲಿಲ್ಲ. ನಂತರ ರಾಜೀನಾಮೆ ಕೊಟ್ಟಿದ್ದಾರೆ ಎಂದು ತಿಳಿಸಿದರು. ಈ ವಿಚಾರದಲ್ಲಿ ಬಿಜೆಪಿಯವರು ರಾಜಕಾರಣ ಮಾಡುತ್ತಿದ್ದಾರೆ. ಆದರೆ ಸಭಾಪತಿ ಎನ್ನುವುದು ಸಾಂವಿಧಾನಿಕ ಹುದ್ದೆ. ಅದನ್ನು ಮುಂದಿಟ್ಟುಕೊಂಡು ರಾಜಕಾರಣ ಮಾಡಬಾರದು. ಅದು ರಾಜ್ಯಕ್ಕೆ ಕಪ್ಪು ಚುಕ್ಕೆ. ಈಗ ಸಭಾಪತಿ ಎನ್ನುವ ಗೌರವಾನ್ವಿತ ಹುದ್ದೆಯ ಬಗ್ಗೆ ಬಿಜೆಪಿಯವರು ಮಾತನಾಡುತ್ತಿರುವುದು ಸರಿಯಲ್ಲ. ಅವರು ಮಾತನಾಡಲು ಬೇರೆ ವಿಷಯಗಳಿವೆ. ಆ ವಿಷಯಗಳ ಬಗ್ಗೆ ಮಾತನಾಡಲಿ ಎಂದರು.

> ಹೋಟೆಲ್‌ಗಳು ಮುಂಭಾಗದ ಡಿಸೈನ್ ಹಾಗೂ ಆಹಾರದ ಬಗ್ಗೆ ಮಾತ್ರ ತೋರಿಸುತ್ತಾರೆ. ಆದರೆ ಜನರಿಗೆ ಹೋಟೆಲ್‌ನವರು ಕಿಚನ್ ಕೂಡಾ ತೋರಿಸಬೇಕು. ಮೊದಲು ಜನರಿಗೆ ಜಾಗೃತಿ ಮೂಡಿಸುವ ಕೆಲಸ ಮಾಡುತ್ತೇವೆ. ಜೊತೆಗೆ ಕ್ರಮವನ್ನೂ ತೆಗೆದುಕೊಳ್ಳುತ್ತೇವೆ ಎಂದರು.
> -ಆರೋಗ್ಯ ಸಚಿವ ಯು.ಟಿ.ಖಾದರ್

**ಮುಂದೆ ಒಳ್ಳೆಯ ಕಾಲ** ತನ್ವೀರ್ ಸೇಠ್‌ಗೆ ಒಳ್ಳೆಯ ಕಾಲ ಬರುತ್ತದೆ ಈಗಾಗಲೇ ಅಲ್ಪಸಂಖ್ಯಾತ ಸಮುದಾಯಕ್ಕೆ ನಾಲ್ಕು ಸಚಿವ ಸ್ಥಾನ ಕೊಟ್ಟಿದ್ದಾರೆ. ಆದರೆ ತನ್ವೀರ್ ಸೇಠ್ ಹಿರಿಯ ರಾಜಕಾರಣಿಗಳು. ಅವರಿಗೂ ಸಚಿವರಾಗುವ ಅರ್ಹತೆ ಇದೆ. ಆದರೆ ಈಗಿನ ಪರಿಸ್ಥಿತಿ ಹಾಗಿಲ್ಲ. ಮುಂದೆ ಒಳ್ಳೆಯ ಕಾಲ ಬರುತ್ತದೆ ಎಂದರು.

ಅಂತರಾಳದಿಂದ...
EDITORIAL

# ಎಐ ತಂತ್ರಜ್ಞಾನ ಸವಾಲು ಅಲ್ಲ, ಉದ್ಯೋಗ ಸೃಷ್ಟಿಯ ಹೊಸ ದಾರಿ



ಕೃತಕ ಬುದ್ಧಿಮತ್ತೆ (ಎಐ) ಬೆಳೆದಂತೆ ಉದ್ಯೋಗಗಳು ನಶಿಸಿಹೋಗಲಿವೆ ಎಂಬ ಆತಂಕ ಜಾಗತಿಕ ಮಟ್ಟದಲ್ಲಿ ವ್ಯಕ್ತವಾಗುತ್ತಲೇ ಬಂದಿದೆ. ಆದರೆ, ಭಾರತದ ಮಟ್ಟಿಗೆ ಈ ಆತಂಕ ಭಾಗಶಃ ಸುಳ್ಳಾಗಿದೆ ಎಂಬುದನ್ನು ಇತ್ತೀಚೆಗೆ ನೊಮುರಾ ಸಂಸ್ಥೆಯು ನಡೆಸಿದ ಅಧ್ಯಯನ ವರದಿ ಸ್ಪಷ್ಟಪಡಿಸಿದೆ.

2022ರಿಂದ 2026ರ ಅವಧಿಯಲ್ಲಿ ಎಐಯಿಂದಾಗಿ ದೇಶದಲ್ಲಿ 31,921 ಉದ್ಯೋಗಗಳು ನಷ್ಟವಾಗಿದ್ದರೆ, ಅದಕ್ಕೆ ಪ್ರತಿಯಾಗಿ 83,100 ಹೊಸ ಎಐ ಸಂಬಂಧಿ ಉದ್ಯೋಗಗಳು ಸೃಷ್ಟಿಯಾಗಿವೆ. ಅಂದರೆ ಕಳೆದುಕೊಂಡ ಪ್ರತಿಯೊಂದು ಹುದ್ದೆಗೆ ಸರಾಸರಿ 2.6ರಷ್ಟು ಹೊಸ ನೌಕರಿಗಳು ಸೃಷ್ಟಿಯಾಗಿವೆ. ಇದು ಅತ್ಯಂತ ಆಶಾದಾಯಕ ಬೆಳವಣಿಗೆ ಎನ್ನಲು ಅಡ್ಡಿಯಿಲ್ಲ.

ಈ ಅಂಕಿ-ಅಂಶಗಳು ಉದ್ಯೋಗ ಮಾರುಕಟ್ಟೆಯ ಬದಲಾಗುತ್ತಿರುವ ಸ್ವರೂಪವನ್ನು ಎತ್ತಿತೋರಿಸುತ್ತಿವೆ. ಇಲ್ಲಿ ಉದ್ಯೋಗ ನಷ್ಟವಾಗಿರುವುದು ಮುಖ್ಯವಾಗಿ ಸಾಂಪ್ರದಾಯಿಕ ಗ್ರಾಹಕ ಸೇವಾ ವಲಯದಲ್ಲಿ. ಎಐ ಚಾಟ್‌ಬಾಟ್‌ಗಳ ಆಗಮನದಿಂದಾಗಿ ಗ್ರಾಹಕ ಸಂಪರ್ಕ ಕಾರ್ಯಗಳು ಸರಳವಾಗಿದ್ದು, ಹಳೆಯ ಮಾದರಿಯ ಹುದ್ದೆಗಳು ಕಡಿಮೆಯಾಗಿವೆ. ಆದರೆ, ಅದೇ ಸಮಯದಲ್ಲಿ ಆ ಚಾಟ್‌ಬಾಟ್‌ಗಳ ನಿರ್ವಹಣೆ, ತಾಂತ್ರಿಕ ನೆರವು ಹಾಗೂ ಎಐ ತಂತ್ರಜ್ಞಾನದ ಅಭಿವೃದ್ಧಿಗೆ ಸಂಬಂಧಿಸಿದ ಸುಧಾರಿತ ಹುದ್ದೆಗಳಿಗೆ ಬೇಡಿಕೆ ಗಣನೀಯವಾಗಿ ಹೆಚ್ಚಿದೆ. ಭಾರತವು ಕೇವಲ ಶ್ರಮಧಾರಿತ ಮಾನವ ಸಂಪನ್ಮೂಲ ಒದಗಿಸುವ ದೇಶವಾಗಿ ಉಳಿಯದೆ, ಕೌಶಲಯುತ ತಾಂತ್ರಿಕ ರಾಷ್ಟ್ರವಾಗಿ ಹೊರ ಹೊಮ್ಮುತ್ತಿರುವುದಕ್ಕೆ ಇದು ಸಾಕ್ಷಿಯಾಗಿದೆ.

> ಕೌಶಲ ಅಭಿವೃದ್ಧಿ ಅತ್ಯಗತ್ಯವಾಗಿದ್ದು, ಹಳೆಯ ಕೆಲಸಗಳು ಮರೆಯಾಗುತ್ತಿರುವ ಈ ಕಾಲಘಟ್ಟದಲ್ಲಿ, ಹೊಸ ತಂತ್ರಜ್ಞಾನಕ್ಕೆ ತಕ್ಕಂತೆ ತಮ್ಮ ಕೌಶಲಗಳನ್ನು ನಿರಂತರವಾಗಿ ಬೆಳೆಸಿಕೊಳ್ಳುವುದು ಯುವಜನರ ತುರ್ತು ಅಗತ್ಯವಾಗಿದೆ. ಶಿಕ್ಷಣದ ಅವಧಿಯಲ್ಲಿಯೇ ಈ ಕುರಿತು ವಿದ್ಯಾರ್ಥಿಗಳಿಗೆ ಸಮರ್ಪಕ ತರಬೇತಿ ನೀಡಬೇಕಾಗಿದೆ. ಸರಕಾರಿ ವ್ಯವಸ್ಥೆಯಲ್ಲಿ ಕೂಡ ಇದಕ್ಕೆ ಪೂರಕವಾದ ಕ್ರಮಗಳನ್ನು ತೆಗೆದುಕೊಳ್ಳುವುದು ಅಗತ್ಯವಾಗಿದೆ.
> ಕೇವಲ ಖಾಸಗಿ ಸಂಸ್ಥೆಗಳ ವರದಿಗಳನ್ನು ನೆಚ್ಚಿಕೊಳ್ಳದೆ, ಸರಕಾರ ಮತ್ತು ಶಿಕ್ಷಣ ಇಲಾಖೆಗಳು ಸ್ವಂತ ಸಮೀಕ್ಷೆಗಳನ್ನು ನಡೆಸಿ ಭವಿಷ್ಯದ ಮಾರುಕಟ್ಟೆಯ ಅಗತ್ಯಗಳನ್ನು ಮುಂಚಿತವಾಗಿಯೇ ಗುರುತಿಸಬೇಕಿದೆ.

ಈ ಬದಲಾವಣೆಯು ದೇಶದ ಯುವಜನತೆ, ಶಿಕ್ಷಣ ವ್ಯವಸ್ಥೆ ಮತ್ತು ಆಡಳಿತಕ್ಕೆ ಕೆಲವು ಪ್ರಮುಖ ಸೂಚನೆಗಳನ್ನು ನೀಡುತ್ತದೆ. ಎಐಯಂತಹ ಅನಿವಾರ್ಯ ತಂತ್ರಜ್ಞಾನ ಮುನ್ನಡೆಗಳು ಭಾರತೀಯ ಯುವಜನರು, ಸಮಾಜ ದಲ್ಲಿ ಸಕಾರಾತ್ಮಕ ವಾಗಿ ಸ್ವೀಕೃತವಾಗುತ್ತಿರುವುದರ ಸಂಕೇತ ಇದು ಎಂದು ಭಾವಿಸಬಹುದು.

ಸರಕಾರಗಳು, ಶಿಕ್ಷಣ ಇಲಾಖೆ, ಶಿಕ್ಷಣ ಸಂಸ್ಥೆಗಳು ಇಂತಹ ವರದಿಗಳ ಜತೆಗೆ ಸ್ವಂತ ಸಮೀಕ್ಷೆಗಳನ್ನು ಕೂಡ ನಡೆಸಿ ಫಲಿತಾಂಶಗಳ ಆಧಾರದಲ್ಲಿ ಭವಿಷ್ಯದ ಕಾರ್ಯಯೋಜನೆಗಳನ್ನು ಸಿದ್ಧಪಡಿಸಿದರೆ ಹೊಸ ಪೀಳಿಗೆಗಳು ಎಐಯಂತಹ ತಾಂತ್ರಿಕ ಪ್ರಗತಿಗಳನ್ನು ಸಶಕ್ತವಾಗಿ ಸ್ವೀಕರಿಸಲು, ಸನ್ನದ್ಧವಾಗಿರಲು ಸಾಧ್ಯವಾಗುತ್ತದೆ. ಶಾಲಾ-ಕಾಲೇಜು ಹಂತದಲ್ಲೇ ಎಐ ಮತ್ತು ತಾಂತ್ರಿಕ ಕೌಶಲಗಳನ್ನು ಪಠ್ಯಕ್ರಮದಲ್ಲಿ ಅಳವಡಿಸಿ, ಯುವಜನರನ್ನು ಭವಿಷ್ಯದ ಸವಾಲುಗಳಿಗೆ ಸನ್ನದ್ಧಗೊಳಿಸಬೇಕು. ಎಐ ತಂತ್ರಜ್ಞಾನವನ್ನು ಉದ್ಯೋಗ ಕಸಿಯುವ ಬೆದರಿಕೆ ಎಂಬುದಾಗಿ ನೋಡುವ ಬದಲು, ಅದನ್ನು ಸಶಕ್ತೀಕರಣದ ದಾರಿಯಾಗಿ ಸ್ವೀಕರಿಸಬೇಕಿದೆ.

ಕಾಲಕ್ಕೆ ತಕ್ಕಂತೆ ಸೂಕ್ತ ತಾಂತ್ರಿಕ ಕೌಶಲಗಳನ್ನು ಮೈಗೂಡಿಸಿಕೊಂಡರೆ, ಕೃತಕ ಬುದ್ಧಿಮತ್ತೆಯು ಭಾರತದ ಯುವಜನತೆಗೆ ಹಾಗೂ ಆರ್ಥಿಕತೆಗೆ ವರವಾಗುವುದರಲ್ಲಿ ಯಾವುದೇ ಸಂಶಯವಿಲ್ಲ. ಎಐಯನ್ನು ಒಂದು ಬೆದರಿಕೆಯಾಗಿ ನೋಡದೆ ಅದರ ಜತೆಗೆ ಮುನ್ನಡೆಯುವ, ಅವಕಾಶಗಳನ್ನು ಕಂಡುಕೊಳ್ಳುವ ದಿಶೆಯಲ್ಲಿ ನಮ್ಮ ಯುವ ಪೀಳಿಗೆಯನ್ನು ಆರಂಭದಿಂದಲೇ ಸಜ್ಜುಗೊಳಿಸಬೇಕಿದೆ.

# ರಾಮಾಯಣ



3. ಮುಂದೆ ಮಾಡಬೇಕಾದುದರ ಬಗ್ಗೆ ಮತ್ತೆ ರಾವಣನ ಸಮಾಲೋಚನೆ

• ಹಿಂದಿನ ಸಂಚಿಕೆಯಿಂದ 121ನೆಯ ಅಧ್ಯಾಯ

ಕ್ರಮಿತರು ಪಟ್ಟಣದಲ್ಲಿ ಕಂಡ ದುಶ್ಶಕುನಗಳನ್ನೂ ಸುಕ್ಷೇಮಪಥವನ್ನು ಸೂಚಿಸುವ ಸಮಯದಲ್ಲಿ, ''ಮಹಾಪ್ರಭುಗಳೇ ಲಾಲಿಸಿ, ಧರಣಿಸುತೆಯನ್ನು ತಂದಂದಿನಿಂದಲೂ ನಮ್ಮ ಪಟ್ಟಣದಲ್ಲಿ ಮಹಾ ವಿಪ್ರರು ಮಾಡುವ ಉಪಚಾರ ನೇಮಗಳಿಂದ ಅಗ್ನಿಯು ತೇಜಸ್ಸಿನಿಂದ ಕೂಡಿದ ಬ್ರಹ್ಮಸ್ಥಳಗಳಲ್ಲ ಭೀಕರರೂಪದ ಸರೀಸೃಪಗಳು, ವಿಮಲಧಾಮಗಳ ಹವ್ಯಗಳಲ್ಲಿ ಇರುವೆಗಳು ತುಂಬಿವೆ;ಕಾಮಧೇನುಗಳಂತಿದ್ದ ಹಸುಗಳು ಒಣಗಿ ಬರಡಾಗಿವೆ. ಆನೆಗಳ ಮದವಿಳಿದಿದ್ದರೆ, ಕುದುರೆಗಳು ಭಯದಿಂದ ಹೇಷಾರವವನ್ನು ಮಾಡುತ್ತಿವೆ; ದಿನದಿನಕ್ಕೆ ಉಭಯ ಸಂಧ್ಯಾಕಾಲಗಳಲ್ಲಿ ಸದಾ ಕೇಳುವ ಘೋರವಾದ ಗುಡುಗಿನ ಶಬ್ದಗಳು ಹಾಗೂ ನರಿಗಳ ಊಳಿಡುವಿಕೆ - ಈ ಭೀಕರ ಅಶುಭಗಳನ್ನು ಇಷ್ಟೇ ಎಂದು ಹೇಳುವಂತಿಲ್ಲ. ಒಬ್ಬ ಹೆಣ್ಣಿನ ಕಾರಣದಿಂದ ಈ ನಗರವು ಹಾಳಾಗುವುದು ಎಂದು ನನಗೆ ತೋರುತ್ತಿದೆ, ಮಹಾರಾಜರು ಪರಾಂಬರಿಸಬೇಕು'' ಎಂದು ನಿವೇದಿಸಿದರು. ''ಮಹಾಪ್ರಭು, ಈ ಘೋರ ಅಶುಭಸೂಚನೆಗಳಿಗೆ ಮಾಡಬೇಕಾದ ಶಾಂತಿಯೆಂದರೆ ಬುವಿಯಣುಗಿಯನ್ನು ರಾಮನಿಗೆ ಒಪ್ಪಿಸುವುದು.

ಮಾತ್ರ ಎಂದು ಜನರೆಲ್ಲ ದೇಶಕಾಲ ನೀತಿಗಳ ಬಗ್ಗೆ ಮಾತಾಡಿಕೊಳ್ಳುತ್ತಿದ್ದಾರೆ. ನಿನ್ನ ಚಿತ್ತಕ್ಕೆ ಇವೆಲ್ಲವೂ ತಿಳಿಯದವೇನಲ್ಲ. ನನ್ನ ಬುದ್ಧಿಗೆ ತೋಚಿದುದನ್ನು ನಾನು ಬಿನ್ನವಿಸಿಕೊಂಡಿದ್ದೇವೆ. ಅತ್ಯಂತ ತ್ವರಿತವಾಗಿ ಕಾರ್ಯಸಂಗತಿಗಳ ಬಗ್ಗೆ ತೀರ್ಮಾನ ಕೈಗೊಳ್ಳಬೇಕಾದುದು ಉಚಿತ. ನಿನ್ನ ಚರಣಸೇವಕನಾದ ಕಾರಣದಿಂದ ತೋರಿದನಿತನ್ನು ಹೇಳಿ, ಮಹಾಪ್ರಭು, ನಿನ್ನನ್ನು ಎಚ್ಚರಿಸಬೇಕಾಯಿತು. ವಿಜ್ಞಾಪಿಸಿಕೊಂಡದ್ದನ್ನು ನಿನ್ನ ಮನಸಿನಲ್ಲಿರಿಸಿಕೊಂಡು ಪರಿಪಾಲನೆ ಮಾಡಿ ಕುಲವನ್ನುದ್ಧರಿಸಬೇಕು ಎಂದು ಉರುತರ ಪ್ರೇಮದಿಂದ ಅಹಿತಕರವಾದ ಮಾತುಗಳನ್ನು ವಿಭೀಷಣನು ಬಿನ್ನವಿಸಿಕೊಳ್ಳಲು ದೈತ್ಯನಾಥನು ಅತಿ ಕೋಪದಿಂದ ಅದಕ್ಕೆ ಉತ್ತರವನ್ನಿತ್ತನು ನಿಮಗೆಲ್ಲರಿಗೂ ರಣಭೀತಿ ಮೆಟ್ಟಿಕೊಂಡಿದೆ;ಕೆಂದಾವರೆಗಳನ್ನು ಕಂಡರೂ ನಡುಕವುಂಟಾಗಿ ಹಲುಬುವಂತಾಗಿದೆ. ವಿಭೀಷಣ, ಬೇರಾವುದನ್ನೂ ಆಲೋಚಿಸದೆ ನೀನು ಮನೆಯಲ್ಲಿಯೇ ಆನಂದದಿಂದ ಇದ್ದುಬಿಡು. ಸೀತೆಯನ್ನು ಒಪ್ಪಿಸಿಬಿಡು ಎಂದು ನುಡುಗುವುದರಿಂದೇನು ಫಲ. ನನ್ನ ಕಣ್ಣ ಮುಂದಿನಿಂದ ಹೊರಟುಹೋಗು ಎಂದು ತನ್ನ ತಮ್ಮನನ್ನು ಕಳಿಸಿಬಿಟ್ಟ ಹಾಗೆಯೇ ಅತಿ ಕೋಪದಿಂದ ಮಂತ್ರಿಗಳನ್ನೂ ಕಳಿಸಿದ. ಆನಂತರ ಆ ಖಳಶಿರೋಮಣಿಯು ತನ್ನ ಅಂತಃಪುರವನ್ನು ಹೊಕ್ಕು ಕಾಮಕಾತರತೆಯಿಂದ ಸೀತೆಯನ್ನು ನೆನೆನೆನೆದು ಹಲುಬಿದ. ಬೆಳಗಾಗುವುದನ್ನೇ ಎದುರುನೋಡುತ್ತ ಯೋಚನೆಯಿಂದ ಕೂಡಿ ಹೊರಳಾಡುತ್ತ ನಳಿನಮಿತ್ರನ ಉದಯವಾದ ಕೂಡಲೆ ತನ್ನ ಮಣಿರಥವನ್ನಡರಿ ಸಚಿವರ ಜೊತೆಯಲ್ಲಿ ಆಸ್ಥಾನದತ್ತ ಹೊರಟ. ಉದಯಶೈಲವನ್ನೇರಿದ ಸೂರ್ಯನಂತೆ ಮಹಾಭ್ಯುದಯ ಸಿಂಹಾಸನವನ್ನೇರಿದ ದಶಕಂಧರನ ಎಡಬಲಗಳಲ್ಲಿ ಕದನಕಾತರದಿಂದ ಅಮಾತ್ಯರು ತಮ್ಮ ತಮ್ಮ ಸ್ಥಾನಗಳಲ್ಲಿ ಕುಳಿತರು. ಮದಹಸ್ತಿಗಳೂ ಬಿರುಗುದುರೆಗಳೂ ಹೊಂದೇರುಗಳೂ ಸೈನ್ಯಸಂದಣಿಯೂ ಆ ಕ್ಷಣವೇ ಬಂದು ನೆರೆದವು ಇವೆಲ್ಲದರಿಂದ ಭೂತಳವು ಅದುರುತ್ತಿರಲು ದೈತ್ಯೇಂದ್ರನ ಆಸ್ಥಾನಮಂಟಪವು ರಾಜಿಸಿತು. ಹೊಡೆಯುವ ತಂಬಟ ಭೇರಿಗಳೂ, ಚೀರುತ್ತಿರುವ ಕಹಳೆಗಳೂ, ನುಡಿಯುವ ವಾದ್ಯಗಳೂ ಸದ್ದು ಮಾಡುತ್ತಿರಲು, ಅಡಿಗಡಿಗೆ ಹೆಚ್ಚಾಗುವ ವೀರಯೋಧರ ಕೇಕೆಗಳು ಅಂಬರದಲ್ಲಿ ಮಾರ್ದನಿಸುತ್ತಿದ್ದವು. ಹೀಗೆ ರಾವಣನ ಪಡೆಯು ಮುನ್ನಡೆದು ಬರಲು ಪೊಡವಿ ತಲ್ಲಣಿಸಿತು, ಮೃಡವಿಕ್ರಮರು ಬಂದು ಅರಸನಿಗೆ ಪೊಡಮಟ್ಟು ಸೈನ್ಯದಲ್ಲಿ ತಮ್ಮ ಸ್ಥಾನಗಳನ್ನು ಸೇರಿಕೊಂಡರು. ಒಂದು ನಿಮಿಷದಲ್ಲಿಯೇ ರಕ್ಕಸಶಿಖಾಮಣಿಯ ಪರ್ಬಲವೆಲ್ಲ ಬಂದು ಸೇರಿತು. ರಾಜಪುತ್ರರನ್ನು ಕರೆತರುವಂತೆ ರಾವಣನು ಬೆಸಸಲು ಅನುಚರರು ಹೋಗಿ ನೃಪಸುತರನ್ನೆಚ್ಚರಿಸಿದರು. ಆಗ ಹೊಂದೇರು ಗಜತುರಗಗಳನ್ನು ಏರಿ ಬಾಂಧವರ ನೆರವಿ ಬಂದು ದಶಶಿರನಿಗೆ ವಂದಿಸಿ ಸುವರ್ಣರಚಿತ ಪೀಠಗಳಲ್ಲಿ ಯಥಾಪ್ರಕಾರದಂತೆ ಕುಳಿತರು. ಅಧೀನರಾಜರೂ ಮಂತ್ರಿಗಳೂ ಆಯುಧಗಳನ್ನು ಧರಿಸಿ ಬಂದು ರಾವಣನ ಶೌರ್ಯವನ್ನು ಹೊಗಳಲು ದೇವಸಭೆ ತಲ್ಲಣಿಸಿತು, ಹರನ ಸಖ ನಡುಗಿದರೆ ಅಮರ್ತ್ಯತತಿ ಕಂಪಿಸಿತು. ಆ ಸಮಯದಲ್ಲಿ ವಿಭೀಷಣನು ರಾಜಸಭೆಗೆ ಆಗಮಿಸಿದ. ಬಂದವನೇ ರಾಜನನ್ನು ಕುರಿತು ಮೃದುನುಡಿಗಳಿಂದ ಸಂಸ್ತುತಿಸಿ ಅವನ ಪಕ್ಕದಲ್ಲಿಯೇ ಆಸೀನನಾದ. ದೈತ್ಯವೃಂದದಲ್ಲಿ ಎಲ್ಲರೂ ಯಥಾಯೋಗ್ಯವಾಗಿ ಮನ್ನಿಸುತ್ತ ವಂದಿಸಲು, ಪ್ರಹಸ್ತ ಶುಕಸಾರಣರು ಬಂದು ವಂದಿಸಿ ಅವನ ಎಡಬಲಗಳಲ್ಲಿ ಮಂಡಿತರಾದರು. ನೆರದ ಆಸುರೀಬಲದ ವೈಭವವನ್ನು ನಿಟ್ಟಿಸುತ್ತ ದೈತ್ಯಶಿರೋಮಣಿಯು ಪ್ರಹಸ್ತನನ್ನು ಕುರಿತು ನಗರದಲ್ಲಿ ಯಥಾಯೋಗ್ಯವಾಗಿ ರಕ್ಷಣೆಗೆಂದು ಯೋಧರನ್ನು ನೇಮಿಸಲು ಅಪ್ಪಣೆಯಿತ್ತ. ಅರಸನ ಆಣತಿಯಂತೆ ಸೇನಾಪತಿಯು ಮಹಾರಾಜನಿಗೆ ವಂದಿಸಿ ಹೊರಟು ನಗರವನ್ನೆಲ್ಲ ಸುತ್ತಿ ಠಾಣಗಳನ್ನು ಗುರುತಿಸಿ ಭೀಮಬಲರಾದ ರಕ್ಕಸರನ್ನು ಕಾವಲಿಗಿಟ್ಟು ವಾಪಸು ಬಂದು ಮಾಡಿದ್ದ ಏರ್ಪಾಟುಗಳನ್ನು ಅರಸನಿಗೆ ಬಿನ್ನವಿಸಿಕೊಂಡು ತನ್ನ ಸ್ಥಾನದಲ್ಲಿ ಕುಳಿತುಕೊಂಡ.''

ಮುಂದುವರೆಯುವುದು



## ವಿದ್ಯಾರ್ಥಿ ವಿಜಯ

ಡಾ.ಸುಧಾಕರ್ . ಜಿ. ಲಕ್ಕವಳ್ಳಿ
ಲೇಖಕರು
ಸಾಮಾಜಿಕ ಚಿಂತಕರು

50

### ಆನ್ಲೈನ್ ಗೇಮಿಂಗ್ ಅರಿವು: ಮನರಂಜನೆ ಅಥವಾ ಮರುಳಾಟ?

> ಮನೋವಿಜ್ಞಾನದ ಪ್ರಕಾರ, ಗೇಮಿಂಗ್ ಸಮಯದಲ್ಲಿ ಮೆದುಳಿನಲ್ಲಿ ಡೋಪಮೈನ್ ಬಿಡುಗಡೆಯಾಗಿ ತ್ವರಿತ ಸಂತೋಷ ದೊರೆಯುತ್ತದೆ. ಇದೇ ಕಾರಣಕ್ಕೆ ವಿದ್ಯಾರ್ಥಿ ಪದೇಪದೇ ಆಟಕ್ಕೆ ಮರಳುತ್ತಾನೆ. ಫಲಿತಾಂಶವಾಗಿ ಗಮನ ಕೇಂದ್ರೀಕರಣ ಕಡಿಮೆಯಾಗುವುದು, ನಿದ್ರಾ ಭಂಗ, ಕಿರಿಕಿರಿ ಮತ್ತು ಶೈಕ್ಷಣಿಕ ಸಾಧನೆಯಲ್ಲಿ ಇಳಿಕೆ ಕಂಡುಬರುತ್ತದೆ. ಆದರೆ ಸಂಪೂರ್ಣ ನಿಷೇಧ ಪರಿಹಾರವಲ್ಲ.




ಡಿಜಿಟಲ್ ಯುಗದಲ್ಲಿ ವಿದ್ಯಾರ್ಥಿಯ ಯಶಸ್ಸು ತಂತ್ರಜ್ಞಾನವನ್ನು ಎಷ್ಟು ಜಾಣ್ಮೆಯಿಂದ ಬಳಸುತ್ತಾನೆ ಎಂಬುದರ ಮೇಲೆ ನಿರ್ಧಾರವಾಗುತ್ತದೆ. ಆನ್ಲೈನ್ ಗೇಮಿಂಗ್ ಇಂದು ಮನರಂಜನೆಯ ಪ್ರಮುಖ ಮಾಧ್ಯಮವಾಗಿದ್ದರೂ, ಅದರ ಅತಿಯಾದ ಬಳಕೆ ಗಂಭೀರ ಸವಾಲಾಗಿದೆ.

**ಶಿಕ್ಷಣ ತಜ್ಞರು ಮತ್ತು ಪೋಷಕರು ಅಳವಡಿಸಬೇಕಾದ ಮಾರ್ಗ:**

ನಿಯಂತ್ರಿತ ಬಳಕೆ. ವಿದ್ಯಾರ್ಥಿ ಅಧ್ಯಯನ ಮತ್ತು ಕರ್ತವ್ಯ ಮುಗಿಸಿದ ನಂತರ, ದಿನಕ್ಕೆ 30-45 ನಿಮಿಷಗಳಿಗೆ ಮಿತಿ ಹಾಕಿ ಆಟವಾಡಬಹುದು. ಈ ಸಮಯವನ್ನು ಒಪ್ಪಂದದಂತೆ ನಿಗದಿಪಡಿಸಬೇಕು. ಜೊತೆಗೆ ಮೈದಾನದ ಆಟ, ಓದು ಮತ್ತು ಕುಟುಂಬದೊಂದಿಗೆ ಸಮಯಕ್ಕೆ ಆದ್ಯತೆ ನೀಡಬೇಕು.

ಅರಿವುಳ್ಳ ವಿದ್ಯಾರ್ಥಿ ಗೇಮಿಂಗ್‌ನ್ನು ಒತ್ತಡ ನಿವಾರಣೆಯ ಸಾಧನವಾಗಿ ಬಳಸುತ್ತಾನೆ, ಅದಕ್ಕೆ ಗುಲಾಮನಾಗುವುದಿಲ್ಲ. ಆತ್ಮನಿಯಂತ್ರಣ, ಸಮಯ ನಿರ್ವಹಣೆ ಮತ್ತು ಜವಾಬ್ದಾರಿ ಇಲ್ಲಿ ಬೆಳೆಯುತ್ತದೆ.

**ನೆನಪಿರಲಿ:** ಗೇಮ್ ಆಡುವವನು ಆಟವನ್ನು ಆಳಬೇಕು, ಆಟ ಅವನನ್ನು ಆಳಬಾರದು.

ತಂತ್ರಜ್ಞಾನವನ್ನು ಸಾಧನವನ್ನಾಗಿ ಮಾಡಿದಾಗ ಮಾತ್ರ ವಿದ್ಯಾರ್ಥಿ ನಿಜವಾದ ವಿಜಯ ಸಾಧಿಸುತ್ತಾನೆ.



ಲೇಖಕರು
ವಿಶ್ವಾಸ್ .ಡಿ.ಗೌಡ
ಲೇಖಕರು
ಸಾಮಾಜಿಕ ಚಿಂತಕರು

## ಫಿಲ್ಟರ್ ಕಾಫಿಯ ಘಮಲು: ದಕ್ಷಿಣ ಭಾರತದ ಬೆಳಗ್ಗಿನ ಸಂಭ್ರಮ ತಾಳ್ಮೆಯಿಂದ ತಯಾರಿಸಿದ ಡಿಕಾಕ್ಷನ್

### ಪರಿಪೂರ್ಣ ಕಾಫಿಗೆ ಹಾಲಿಗೂ ವಿಶೇಷ ಮಹತ್ವವಿದೆ

ದಕ್ಷಿಣ ಭಾರತದ ಬೆಳಗನ್ನು ಕಲ್ಪಿಸಿಕೊಂಡಾಗ ಮನಸ್ಸಿಗೆ ಬರುವ ಸುಗಂಧಗಳಲ್ಲಿ ಫಿಲ್ಟರ್ ಕಾಫಿಯ ಪರಿಮಳವೂ ಒಂದು. **ಕಾಫಿ ಕೇವಲ ಒಂದು ಪಾನೀಯವಲ್ಲ;** ಅದು ದಕ್ಷಿಣ ಭಾರತದ ಬದುಕಿನ ಅವಿಭಾಜ್ಯ ಭಾಗವಾಗಿರುವ ಒಂದು ಸಂಸ್ಕೃತಿ. ಮನೆಯ ಅಡುಗೆಮನೆಯಿಂದ ಹಿಡಿದು ಹೋಟೆಲ್‌ಗಳವರೆಗೆ, ಅತಿಥಿ ಸತ್ಕಾರದಿಂದ ಸ್ನೇಹಿತರ ಮಾತುಕತೆಯವರೆಗೆ ಫಿಲ್ಟರ್ ಕಾಫಿ ತನ್ನದೇ ಆದ ಸ್ಥಾನವನ್ನು ಹೊಂದಿದೆ.

ದಕ್ಷಿಣ ಭಾರತದ ಪ್ರಸಿದ್ಧ ಫಿಲ್ಟರ್ ಕಾಫಿಯ ತಯಾರಿಕೆಯಲ್ಲಿ ಬಳಸುವ ಸಾಧನ ಅತ್ಯಂತ ಸರಳವಾದರೂ ಅದರ ಕಾರ್ಯವಿಧಾನ ವಿಶಿಷ್ಟವಾಗಿದೆ. ಎರಡು ಕೋಣೆಗಳನ್ನು ಹೊಂದಿರುವ ಈ ಫಿಲ್ಟರ್‌ನ್ನು ಗುರುತ್ವಾಕರ್ಷಣೆಯ ಆಧಾರದ ಮೇಲೆ ಕೆಲಸ ಮಾಡುವ ಪರ್ಕೊಲೇಷನ್ ಸಾಧನ ಎಂದು ಕರೆಯಬಹುದು. ಮೇಲಿನ ಕೋಣೆಯಲ್ಲಿ ಕಾಫಿ ಪುಡಿಯನ್ನು ಹಾಕಿ, ಅದರ ಮೇಲೆ ಕುದಿಯುವ ನೀರನ್ನು ಸುರಿಯಲಾಗುತ್ತದೆ. ಸಣ್ಣ ರಂಧ್ರಗಳ ಮೂಲಕ ನೀರು ನಿಧಾನವಾಗಿ ಕಾಫಿ ಪುಡಿಯೊಳಗೆ ಇಳಿದು, ಅದರ ಸುವಾಸನೆ ಮತ್ತು ರುಚಿಯನ್ನು ಹೀರಿಕೊಂಡು ಕೆಳಗಿನ ಕೋಣೆಯಲ್ಲಿ ಗಾಢವಾದ ಕಾಫಿ ಡಿಕಾಕ್ಷನ್ ಆಗಿ ಸಂಗ್ರಹವಾಗುತ್ತದೆ.

ಆದರೆ ಪರಿಪೂರ್ಣ ಫಿಲ್ಟರ್ ಕಾಫಿಯ ರಹಸ್ಯ ಕೇವಲ ಫಿಲ್ಟರ್‌ನಲ್ಲಿಲ್ಲ. ಉತ್ತಮ ಗುಣಮಟ್ಟದ ಕಾಫಿ ಬೀಜ, ಸರಿಯಾದ ಹುರಿಯುವಿಕೆ, ಸೂಕ್ತವಾದ ಪುಡಿಯ ಪ್ರಮಾಣ, ನೀರಿನ ತಾಪಮಾನ ಮತ್ತು ಡಿಕಾಕ್ಷನ್‌ನ ಸಮಯ ಇವೆಲ್ಲವೂ ಕಾಫಿಯ ಅಂತಿಮ ರುಚಿಯನ್ನು ನಿರ್ಧರಿಸುತ್ತವೆ.

ಸಾಮಾನ್ಯವಾಗಿ ಅರೇಬಿಕಾ ಮತ್ತು ರೋಬಸ್ಟಾ ಕಾಫಿ ಬೀಜಗಳ ಮಿಶ್ರಣವನ್ನು ಬಳಸಲಾಗುತ್ತದೆ. ಕೆಲವರು ಚಿಕೋರಿ ಸೇರಿಸಿದ ಕಾಫಿಯನ್ನು ಇಷ್ಟಪಡುತ್ತಾರೆ. ಚಿಕೋರಿ ಕಾಫಿಗೆ ವಿಶಿಷ್ಟವಾದ ಘಮಲು, ಗಾಢತೆ ಮತ್ತು ರುಚಿಯನ್ನು ನೀಡುತ್ತದೆ. ಕಾಫಿ ಬೀಜಗಳನ್ನು ಸರಿಯಾದ ಮಟ್ಟದಲ್ಲಿ ಹುರಿದು, ನಂತರ ಸೂಕ್ತವಾದ ದಪ್ಪದಲ್ಲಿ ಪುಡಿ ಮಾಡುವುದು ಅತ್ಯಂತ ಮುಖ್ಯ. ಅತಿಯಾಗಿ ನುಣ್ಣಗೆ ಅಥವಾ ಹೆಚ್ಚು ದಪ್ಪವಾಗಿ ಪುಡಿಮಾಡಿದರೆ ಡಿಕಾಕ್ಷನ್‌ನ ಗುಣಮಟ್ಟದಲ್ಲಿ ವ್ಯತ್ಯಾಸ ಉಂಟಾಗಬಹುದು.

ಪರಿಪೂರ್ಣ ಕಾಫಿಗೆ ಹಾಲಿಗೂ ವಿಶೇಷ ಮಹತ್ವವಿದೆ. ತಾಜಾ ಹಾಲನ್ನು ಚೆನ್ನಾಗಿ ಕುದಿಸಿ, ಅಗತ್ಯ ಪ್ರಮಾಣದ ಕಾಫಿ ಡಿಕಾಕ್ಷನ್ ಮತ್ತು ಸಕ್ಕರೆಯೊಂದಿಗೆ ಬೆರೆಸಿದಾಗ ಅದರ ನಿಜವಾದ ರುಚಿ ಹೊರಹೊಮ್ಮುತ್ತದೆ. ಕಾಫಿಯನ್ನು ಎತ್ತರದಿಂದ ಲೋಟ ಮತ್ತು ದಬರಾ ನಡುವೆ ಸುರಿದು ಕಲಸುವ ವಿಧಾನವೂ ದಕ್ಷಿಣ ಭಾರತದ ಫಿಲ್ಟರ್ ಕಾಫಿಯ ವಿಶೇಷತೆಯಾಗಿದೆ. ಇದರಿಂದ ಕಾಫಿಗೆ ನೊರೆ ಬರುತ್ತದೆ ಮತ್ತು ಕುಡಿಯುವ ಅನುಭವ ಮತ್ತಷ್ಟು ರುಚಿಕರವಾಗುತ್ತದೆ.

ಫಿಲ್ಟರ್ ಕಾಫಿಯ ಮತ್ತೊಂದು ವಿಶೇಷತೆ ಅದರ ಸಾಮಾಜಿಕ ಮತ್ತು ಭಾವನಾತ್ಮಕ ಬಂಧ. ಮನೆಗೆ ಅತಿಥಿ ಬಂದಾಗ ''ಕಾಫಿ ಕುಡಿಯುತ್ತೀರಾ?'' ಎಂಬ ಪ್ರಶ್ನೆಯೇ ಆತ್ಮೀಯತೆಯ ಸಂಕೇತ. ಬೆಳಗಿನ ಪತ್ರಿಕೆಯೊಂದಿಗೆ ಒಂದು ಕಪ್ ಕಾಫಿ, ಸ್ನೇಹಿತರೊಂದಿಗೆ ಹರಟೆಯ ನಡುವೆ ಕಾಫಿ, ಕೆಲಸದ ನಡುವೆ ಉಲ್ಲಾಸ ನೀಡುವ ಕಾಫಿಹೀಗೆ ಅದು ಜೀವನದ ಅನೇಕ ಕ್ಷಣಗಳಿಗೆ ಸಾಕ್ಷಿಯಾಗಿದೆ. ಇಂದು ಜಗತ್ತಿನಾದ್ಯಂತ ವಿವಿಧ ರೀತಿಯ ಕಾಫಿಗಳು ಜನಪ್ರಿಯವಾಗಿದ್ದರೂ, ದಕ್ಷಿಣ ಭಾರತದ ಫಿಲ್ಟರ್ ಕಾಫಿಯ ಘಮಲು ಮತ್ತು ಅದರ ಹಿಂದಿರುವ ಸಂಪ್ರದಾಯಕ್ಕೆ ವಿಶಿಷ್ಟ ಸ್ಥಾನವಿದೆ.

ಸರಳವಾದ ಎರಡು ಕೋಣೆಗಳ ಫಿಲ್ಟರ್‌ನಲ್ಲಿ ನಿಧಾನವಾಗಿ ತಯಾರಾಗುವ ಡಿಕಾಕ್ಷನ್, ಬಿಸಿ ಹಾಲಿನೊಂದಿಗೆ ಬೆರೆತು ಲೋಟಕ್ಕೆ ಬಂದಾಗ ಅದು ಕೇವಲ ಕಾಫಿಯಾಗಿರುವುದಿಲ್ಲ, ಅದು ದಕ್ಷಿಣ ಭಾರತದ ಆತಿಥ್ಯ, ನೆನಪು, ಸಂಸ್ಕೃತಿ ಮತ್ತು ಜೀವನಶೈಲಿಯ ಸುವಾಸನೆಯಾಗಿರುತ್ತದೆ.

ಒಂದು ಪರಿಪೂರ್ಣ ಕಪ್ ಫಿಲ್ಟರ್ ಕಾಫಿ ಎಂದರೆ ಸರಿಯಾದ ಕಾಫಿ ಪುಡಿ, ಕುದಿಯುವ ನೀರು, ತಾಳ್ಮೆಯಿಂದ ತಯಾರಿಸಿದ ಡಿಕಾಕ್ಷನ್, ಬಿಸಿ ಹಾಲು ಮತ್ತು ಅದನ್ನು ಹಂಚಿಕೊಳ್ಳುವ ಆತ್ಮೀಯ ಮನಸ್ಸು.





## ಕಲಾ ಸಾಹಿತ್ಯ

ಕೃಷ್ಣಪ್ಪ
ಲೇಖಕರು
ಪ್ರಗತಿ ಪರ ಚಿಂತಕ ಹಾಗೂ ವಿಮರ್ಶಕರು

## ಕೆಲವು ಕುಟುಂಬಗಳಲ್ಲಿ ಪತಿ ಅಥವಾ ಪತ್ನಿ ಒಂದು ದೊಡ್ಡ ಉನ್ನತ ಹುದ್ದೆಯಲ್ಲಿದ್ದರೆ ಸಾಕು ಆಗ ಇಡೀ ಮನೆಯವರೆಲ್ಲರೂ ಸಹ ಸಂಭ್ರಮಿಸಿ ಬೀಗುವರೇ ಹೆಚ್ಚು

**ಬಹುತೇಕ ಪತಿಯ ಅಥವಾ ಪತ್ನಿಯ ಪದವಿಯನ್ನು ಸತಿ-ಪತಿ ಯಾದವರು ಹಾಗೂ ಒಂದು ಹೆಜ್ಜೆ ಚಿಂತಿಸಿದರೆ ಕೆಲವು ಮಕ್ಕಳೂ ಸಹ ದುರ್ಬಳಕೆ ಮಾಡಿಕೊಳ್ಳುವುದೂ ಸಹ ಸಮಾಜದಲ್ಲಿ ಕಂಡುಬರುತ್ತದೆ ಒಟ್ಟಾರೆ ಒಂದು ಕುಟುಂಬದಲ್ಲಿ ಒಬ್ಬರು ಉನ್ನತಾಧಿಕಾರಿಗಳಾದರೆ ಎಲ್ಲವನ್ನೂ ತ್ಯಾಗ ಮಾಡಿ ಲೋಕಕಲ್ಯಾಣ, ಲೋಕಹಿತಕ್ಕಾಗಿ ಸೇವೆ ಮಾಡುವ ಸೇವಾಮನೋಭಾವ ಉಳ್ಳವರಾಗಿ ಅಧಿಕಾರವನ್ನು ಸ್ವಾರ್ಥಕ್ಕೆ ಉಪಯೋಗಿಸಿಕೊಳ್ಳದೇ ನಿಸ್ವಾರ್ಥ ಸೇವೆ ಮಾಡುವ ಗುರಿ ಇಟ್ಟುಕೊಂಡು ಯೋಜನೆಗಳನ್ನು ಅನುಷ್ಠಾನಕ್ಕೆ ತರುವುದು ಮುಖ್ಯ. ಆದಷ್ಟು ಕುಟುಂಬ ದವರನ್ನು ದೂರ ಇಟ್ಟು ಹಾಗೂ ಕುಟುಂಬದ ಮೇಲಿರುವ ವ್ಯಾಮೋಹವನ್ನು ತ್ಯಜಿಸಿ ಸರ್ಕಾರದ ನಡಾವಳಿಗಳನ್ನು ಚಾಚೂ ತಪ್ಪದೇ ಪಾಲಿಸಿ ಸರ್ಕಾರಕ್ಕೆ ಮತ್ತು ಸಮಾಜಕ್ಕೆ ಅತ್ಯಂತ ನಿಕಟ ಸಂಪರ್ಕದಿಂದ ಪಾರದರ್ಶಕ ಆಡಳಿತ ನೀಡಿ ಅಭಿವೃದ್ಧಿ ಮೂಲಕ ತಮ್ಮಗಳ ಅಧಿಕಾರದಿಂದ ನಿವೃತ್ತರಾಗಬೇಕು.**

ಪತಿ ಮತ್ತು ಪತ್ನಿ ಒಂದು ಮನೆಯ ಭಾಗವಾದರೂ ಯಾವುದೇ ಸಂಬಂಧವಿಲ್ಲದ ರೀತಿ ಬದುಕುವುದೇ ನಿಜವಾದ ಬದುಕು. ಅಪ್ಪ ಯಾರೋ,ಅಮ್ಮ ಯಾರೋ,ಗಂಡ ಯಾರೋ,ಹೆಂಡತಿ ಯಾರೋ ಕಡೆಗಾಲಕ್ಕೆ ಮಕ್ಕಳು ಯಾರೋ ಎಂಬ ಕೊನೇ ಹಂತಕ್ಕೆ ನಾವುಗಳು ಅರ್ಥೈಸಿಕೊಂಡು ಬದುಕಬೇಕಾಗಿದೆ. ಆದರೆ ಸೃಷ್ಟಿಕರ್ತನ (ತ್ರಿಮೂರ್ತಿಗಳು) ವಿಚಾರದಲ್ಲಿ ನಾವುಗಳು ಬೇರೆ ಬೇರೆ. ಹುಟ್ಟುವಾಗಲೇ ಯಾವುದೇ ಸಂಬಂಧವಿಲ್ಲದೇ ನಮ್ಮ-ನಮ್ಮ ಜೀವ ಮತ್ತು ಜೀವನದ ಫೈಲುಗಳನ್ನು ಪ್ರತ್ಯೇಕ ಮಾಡಿ ನಮ್ಮ-ನಮ್ಮ ಬೆನ್ನಿಂದೆ ಮುದ್ರಿಸಿ ನಮ್ಮ-ನಮ್ಮ ಫೈಲುಗಳ ಭಾರ ಮತ್ತು ಜವಾಬ್ದಾರಿ ನಾವೇ ಹೊರಬೇಕೆಂದು ನಿಗದಿ ಮಾಡಿದ್ದಾನೆ. ಆದರೆ ಈ ನಿಗದಿಮಾಡಿರುವ ವಿಚಾರದಲ್ಲಿ ಯಾವುದೇ ರಾಜಿಯಾಗಲೀ ಅಥವಾ ಬೇರೆಯವರೊಂದಿಗೆ ಹೊಂದಾಣಿಕೆಯಾಗಲೀ ಸಾಧ್ಯವಾಗದೇ ಇರುವುದೇ ಜೀವ ಮತ್ತು ಜೀವನ. ಹೀಗಿರುವಾಗ ಕೆಲವು ಕುಟುಂಬಗಳಲ್ಲಿ ಮನೆಯಲ್ಲಿರುವ ಪತಿ ಅಥವಾ ಪತ್ನಿ ಪೈಕಿ ಒಬ್ಬರು ಉನ್ನತ ಹುದ್ದೆ ಅಥವಾ ಪದವಿ ಏರಿದರೆ ಸಾಕು ಇಡೀ ಮನೆಯವರೆಲ್ಲಾ ಕೂಡ ಸಮಾಂತರದ ಉನ್ನತ ಹುದ್ದೆ ಅಥವಾ ಪದವಿಯಲ್ಲಿ ಇದ್ದೇವೆಂದು ಬಾಸಮಾಡಿಕೊಳ್ಳುತ್ತಾರೆ. ಈ ಹಿಂದಿನ ಕಾಲದಲ್ಲಿ ಕುಟುಂಬಕ್ಕೆ ಯಾವುದೇ ಸಂಬಂಧವಿಲ್ಲದೇ ಉನ್ನತ ಹುದ್ದೆಯನ್ನು ನಿಭಾಯಿಸಿದ ಅನೇಕ ಮಹಾನುಭಾವರು ಇದ್ದರು ಅವರೆಲ್ಲಾ ಸ್ವಾರ್ಥ ಮರೆತು ನಿಸ್ವಾರ್ಥ ಸೇವೆ ಮಾಡಿರುವ ಮಾನವೀಯತೆಉಳ್ಳವ ಮಹನೀಯರಾಗಿದ್ದರು.ಈಗಂತೂ ಇದರ ಕಬಂಧಬಾಹು ಇಡೀ ರಾಷ್ಟ್ರದ ಉದ್ದಗಲಕ್ಕೂ ಚಾಚಿದೆ ಇದು ಒಳ್ಳೆಯ ಬೆಳವಣಿಗೆಯಲ್ಲ. ರಾಷ್ಟ್ರದ ಅಭಿವೃದ್ಧಿಗೆ ಮಾರಕ ಈಗಲೇ ಎಚ್ಚೆತ್ತುಕೊಂಡರೆ ಸರಿ ! ಇಲ್ಲದಿದ್ದರೆ ಮುಂದಿನ ಭವಿಷ್ಯಕ್ಕೆ ಬಾರಿ ಗಂಡಾಂತರವನ್ನು ಸಮ ಸಮಾಜದ ನಾಗರೀಕರು ಎದುರಿಸಬೇಕಾಗುತ್ತದೆ. **ಉದಾಹರಣೆಗೆ :** ಪತಿ ಐಎಎಸ್, ಐಪಿಎಸ್, ಐಎಫ್‌ಎಸ್, ಐ ಆರ್ ಎಸ್, ಕೆಎಎಸ್ ಅಧಿಕಾರಿಗಳಾದರೆ ಪತ್ನಿಯೂ ಕೂಡ ನಾನು ಅಧಿಕಾರಿಯ ಪತ್ನಿಯೆಂದು ಬೀಗುತ್ತಾರೆ. ರಾಜಕಾರಣಿಗಳಲ್ಲಿ, ಎಂಎಲ್ಎ ,ಎಂಪಿ ಅಥವಾ ಸಚಿವರಾದರೆ ಹೆಂಡತಿ ಮೊದಲುಗೊಂಡು ಮನೆಯವರೆಲ್ಲಾ ಅವರ ಸಮಾಂತರ ರೀತಿ ಕಾಣಿಸಿಕೊಳ್ಳುತ್ತಾರೆ. ಹಾಗೂ ಇನ್ನೂ ಇತರೆ ಅಧಿಕಾರಿಗಳಾದರೆ ಅವರವರ ಮನೆಯವರ ಆರ್ಭಟ ಎಲ್ಲೆ ಮೀರಿರುತ್ತದೆ. **ಇಂಥಹ ಕೆಲವರು ಸಾಮಾನ್ಯರ ಜೊತೆ ಬೆರೆಯುವುದೂ ಇಲ್ಲ ಇವರೆಲ್ಲಾ ಬಹುಶಹ:** ದೇವಲೋಕದಿಂದ ಇಳಿದಿದ್ದಾರೆ ಎಂಬುದಾಗಿ ಭಾಸವಾಗುತ್ತದೆ. ಕುಟುಂಬದಲ್ಲಿ ಯಾರಾದರೂ ಪತಿ ಆಗಲೀ ಅಥವಾ ಪತ್ನಿ ಆಗಲೀ ಅವರ ಪೈಕಿ ಒಬ್ಬರು ಉನ್ನತ ಅಧಿಕಾರಿಗಳಾದರೆ ಸಾಕು ಇಡೀ ಕುಟುಂಬವೇ ಸಂಭ್ರಮಿಸುತ್ತದೆ. ಕೆಲವರಂತೂ ಲಾಭಗಳಿಸುತ್ತಾ ಹಾಗೂ ಅವರ ವರ್ತನೆಗಳಲ್ಲಿ ಬದಲಾಗುತ್ತಾ ಇರುತ್ತಾರೆ ಆದರೆ ಇದು ಒಳ್ಳೆಯ ಬೆಳವಣಿಗೆಯಲ್ಲ ಹಾಗೂ ಭಾರತಮಾತೆಯು ಸಹ ಒಪ್ಪುವುದಿಲ್ಲ. ಒಂದು ವೇಳೆ ಪತಿ ಮತ್ತು ಪತ್ನಿ ಇಬ್ಬರೂ ಉನ್ನತ ಅಧಿಕಾರಿಗಳಾದರೆ ಕೆಲವರಲ್ಲಿ ಹೊಂದಾಣಿಕೆ ಬಹಳಷ್ಟು ಕಡಿಮೆ ಅಂತರ ಇರುತ್ತದೆ ಹಾಗೂ ಸಾರ್ವಜನಿಕ ಜೀವನದಲ್ಲಿ ಕೆಲವೊಂದು ಹೇಳಿಕೊಳ್ಳದೇ ಮಾನಸಿಕ ಸಮತೋಲನವನ್ನು ಕಳೆದುಕೊಂಡಿರುತ್ತಾರೆ. ಹಾಗೂ ಕೆಲವು ಕುಟುಂಬಗಳಲ್ಲಿ ಅವಲಂಬಿತ ಸದಸ್ಯರು ಉನ್ನತ ಅಧಿಕಾರಿಗಳ ನೆರಳಲ್ಲಿ ಅವಲಂಬಿತರಾಗಿರುತ್ತಾರೆ ಅಂಥವರೆಲ್ಲಾ ಈ ದೇಶಕ್ಕೆ ಮಾರಕ. ಮನೆಯವರೆಲ್ಲಾ ನಾವು ಅಧಿಕಾರಿಗಳ ಸಂಬಂಧ ಹಾಗೂ ನಾವು ಕೂಡ ಅಧಿಕಾರಿಗಳ ಸಮಾಂತರ ಎಂದು ತಿಳಿದುಕೊಂಡು ಬೀಗುವುದು ಸರಿಯಲ್ಲ ಹಾಗೂ ಅಕ್ಷಮ್ಯ. ಈ ರೀತಿ ಇರುವ ಜನಸಮೂಹಕ್ಕೆ ತಿಳುವಳಿಕೆ ಇದೆ ಆದರೆ ನಡವಳಿಕೆ ಇಲ್ಲ.ಯಾರು ಉನ್ನತ ಅಧಿಕಾರಿಗಳು ಅಥವಾ ಜನಪ್ರತಿನಿಧಿಗಳು ಅಥವಾ ಸಚಿವರು ಆಗಿರುತ್ತಾರೋ ಅವರಿಗೆ ಮಾತ್ರ ಸೀಮಿತವಾಗಿರಬೇಕು, ಇನ್ನು ಮಿಕ್ಕವರೆಲ್ಲಾ ಸಮಾಜದ ಇತರೆ ಸಾರ್ವಜನಿಕರಂತೆ ಇರಬೇಕು. ಆಗ ಅದಕ್ಕೆ ತಕ್ಕ ಭೂಷಣ ಹಾಗೂ ಪದವಿಗೆ ಒಂದು ಗೌರವ.ಮುಂದಿನ ದಿನಗಳಲ್ಲಿ ಆದಷ್ಟು ವಿದ್ಯಾವಂತ, ಜ್ಞಾನವಂತ, ಬುದ್ಧಿವಂತ,ದಕ್ಷ ಪ್ರಮಾಣಿಕತೆ ಉಳ್ಳ, ರಾಷ್ಟ್ರಪ್ರೇಮಿಗಳಾದ ಬ್ರಹ್ಮಚಾರಿ ಅಥವಾ ಬ್ರಹ್ಮಚಾರಿಣಿರವರುಗಳನ್ನು ಉನ್ನತ ಅಧಿಕಾರ ಹುದ್ದೆಗಳಿಗೆ ಹಾಗೂ ರಾಜಕೀಯ ಪ್ರವೇಶಕ್ಕೆ ಆಯ್ಕೆಮಾಡುವುದು ಸರ್ವ ದೃಷ್ಟಿಯಲ್ಲಿಯೂ ಸಾಧಾರಣ ಒಳ್ಳೆಯದು ಇಲ್ಲಾಂದ್ರೆ, ಭಾರತಕ್ಕೆ ಭವಿಷ್ಯವಿಲ್ಲ.



## ಕಲಾ ಸಾಹಿತ್ಯ

ಕೃಷ್ಣಪ್ಪ
ಲೇಖಕರು
ಪ್ರಗತಿ ಪರ ಚಿಂತಕ ಹಾಗೂ ವಿಮರ್ಶಕರು

**ಬಡಿದಾಡುವ ಮನುಷ್ಯರನ್ನು ನೋಡಿ ಸೃಷ್ಟಿಕರ್ತ ನಗುತ್ತಾನೆ. ಹಾಗೂ ಮನುಷ್ಯರಿಗಿಂತ ಪಶುಪಕ್ಷಿಗಳೇ ಮೇಲೆಂದು ಅಂದುಕೊಳ್ಳುತ್ತಾನೆ. ಪಶುಪಕ್ಷಿಗಳಿಗೆ ಆಯಸ್ಸು ಕಡಿಮೆ ಆದರೆ ಮನುಷ್ಯನಿಗೆ ಆಯಸ್ಸು (ಜಾಸ್ತಿ) ಶತಮಾನ. ಇಲ್ಲಿ ಒಂದು ವಿಶೇಷ: ಪಶು-ಪಕ್ಷಿಗಳು ಸೃಷ್ಟಿಕರ್ತ ನಿಗದಿಮಾಡಿದ ಆಯಸ್ಸನ್ನು ಬಹಳ ಅರ್ಥಪೂರ್ಣವಾಗಿ ಮುಗಿಸಿ ಸೃಷ್ಟಿಕರ್ತನಿಗೆ ಗೌರವ ನೀಡುತ್ತವೆ. ಅದೇ ಮಾನವನಿಗೆ ನಿಗದಿಮಾಡಿದ ಆಯಸ್ಸನ್ನು ಮಾನವ ಪೂರ್ತಿ ಮಾಡದೇ ಮಧ್ಯೆ - ಮಧ್ಯವಯಸ್ಸಿನಲ್ಲಿ ಕಳಚಿ ಕೊಳ್ಳುತ್ತಾ ಸೃಷ್ಟಿಕರ್ತನಿಗೆ ಅಗೌರವ ತೋರಿಸುತ್ತಾನೆ ಎಂತಹ ವಿಪರ್ಯಾಸ. ಮಾನವ ಭೂಮಿಯ ಮೇಲೆ ಸೃಷ್ಟಿಯ ವಿರುದ್ಧ ಹಾಗೂ ಪ್ರಕೃತಿಯ ವಿರುದ್ಧ ಮಾಡಬಾರದನ್ನೆಲ್ಲಾ ಮಾಡಿ ಸ್ವರ್ಗದಂತಿರುವ ಭೂಮಿಯನ್ನು ನರಕ ಮಾಡುತ್ತಾನೆ.**

## ಪಂಚಭೂತಗಳ ಒಡೆಯರು ಯಾರು.? ಇವುಗಳು ಯಾರ ಅಧೀನದಲ್ಲಿವೆ ಹಾಗೂ ಯಾರ ಸ್ವತ್ತು?

ಪಂಚಭೂತಗಳಾದ ಭೂಮಿ, ಆಕಾಶ,ಗಾಳಿ,ನೀರು ಮತ್ತು ಬೆಂಕಿ ಇವುಗಳು ಪ್ರಕೃತಿದತ್ತವಾಗಿ ಹಾಗೂ ದೈವದತ್ತವಾಗಿ ಸೃಷ್ಟಿಯಾಗಿರುವ ಸೃಷ್ಟಿಯ ಸ್ವತ್ತು ಹಾಗೂ ಸೃಷ್ಟಿಯೇ ಇವುಗಳ ಮೂಲ ಒಡೆಯ. ಸಕಲಿಷ್ಟು ಜೀವರಾಶಿಗಳಿಗೆ ಜೀವನಾಧಾರ ಹಾಗೂ ಏನನ್ನೂ ಅಪೇಕ್ಷಪಡದ ಉಚಿತವಾಗಿ ನೀಡಿರುವ ಪ್ರಕೃತಿಯ ಕೊಡುಗೆ ಹಾಗೂ ಬಳುವಳಿ. ಹೀಗಿರುವಲ್ಲಿ ಈಗ ಜಗತ್ತಿನಲ್ಲಿರುವ, ರಾಷ್ಟ್ರದಲ್ಲಿರುವ ಹಾಗೂ ರಾಜ್ಯದಲ್ಲಿರುವ ಕೆಲವು ಅಂಧ ಭಕ್ತ ಮಹಾಶಯರುಗಳು ನಾವೇ ಇವುಗಳ ಒಡೆಯರು ಎಂದು ಬಿಂಬಿಸಿಕೊಳ್ಳುತ್ತಿದ್ದಾರೆ. ಒಂದು ವೇಳೆ ಈ ಪಂಚಭೂತಗಳು ಈ ಕೆಳಕಂಡಂತಹ ಮಹಾಶಯರುಗಳಿಗೆ ಹಸ್ತಾಂತರಿಸಿದ್ದರೆ.

**ಉದಾಹರಣೆಗೆ:** ಹಿಟ್ಲರ್,ಮುಸಲೋನಿ,ಅಲೆಕ್ಸಾಂಡರ್, ನೆಪೋಲಿಯನ್, ಸದ್ದಾಮ್ ಹುಸೇನ್, ಗಡಾಫಿ ಇನ್ನೂ ಇತರೆ ಸರ್ವಾಧಿಕಾರಿಗಳಂತೆ ಮೆರೆದು ಮಣ್ಣಾದ ಇಂತಹ ಸಮಕಾಲೀನರ ವ್ಯಾಪ್ತಿಯಲ್ಲಿ ನಾವುಗಳು ಬದುಕಬೇಕಾಗಿತ್ತು.ಇಡೀ ಜಗತ್ತಿನಲ್ಲಿ ಜೀವಂತವಾಗಿ ಈಗಿರುವ ಕೆಲವು ಅಂಧ ಭಕ್ತ ಮಹಾಶಯರುಗಳು ಸಹ ಮೇಲ್ಕಂಡವರ ರೀತಿ ವರ್ತಿಸುವ ಸಮೂಹವೇ ಇದೆ.

ಆದರೆ ಇವುಗಳು ಯಾರ ಸ್ವತ್ತೂ ಅಲ್ಲ, ಒಡೆಯರೂ ಅಲ್ಲ ಹಾಗೂ ಮಾಲೀಕರೂ ಅಲ್ಲ ಅವುಗಳ ಅಡಿಯಲ್ಲಿ ಪ್ರಕೃತಿಯ ಕೊಡುಗೆಯನ್ನು ನಾವುಗಳು ಉಪಯೋಗಿಸಿಕೊಂಡು ಸುಂದರವಾದ ಬದುಕನ್ನು ಕಟ್ಟಿಕೊಂಡು ಬದುಕಬೇಕು. ಮಾನವ ಸೇರಿ ಸಕಲಿಷ್ಟು ಜೀವರಾಶಿಗಳೂ ಕೂಡ ಜೀವಿಸಲು ಸೃಷ್ಟಿಕರ್ತನ ಋಣದಲ್ಲಿ ಹುಟ್ಟು ಮತ್ತು ಸಾವುಗಳ ಮಧ್ಯೆ ಬದುಕನ್ನು ಕಟ್ಟಿಕೊಂಡು ಜೀವಿಸಬೇಕು. ಸೃಷ್ಟಿಕರ್ತನ ಋಣವನ್ನು ತೀರಿಸಲು ಪ್ರಾಣಿ-ಪಕ್ಷಿಗಳು ಹೊರತುಪಡಿಸಿ ಮನುಷ್ಯನಿಂದ ತೀರಿಸಲು ಸಾಧ್ಯವೇ ಇಲ್ಲ. ಕಡೆಗಾಲಕ್ಕೆ ಭೂಮಿಯ ಋಣ, ಗಾಳಿಯ ಋಣ,ನೀರಿನ ಋಣ ಮಿಗಿಲಾಗಿ ಪ್ರಕೃತಿಯ ಋಣದಲ್ಲಿಯೇ ಜೀವಿಸುತ್ತಾ ಮುಕ್ತಿ ಕಾಣದೇ ಮಣ್ಣಲ್ಲಿ ಮಣ್ಣಾಗುತ್ತೇವೆ. ನಾವೇನು ಅವುಗಳ ಪಾಲುದಾರರಲ್ಲ ಆದರೆ ಇಲ್ಲಿ ಸ್ವಂತದ್ದು ಅಂತ ಯಾರದ್ದು ಇಲ್ಲ.

ಸುಮ್ಮನೆ ಮಾನವ ನನ್ನದು-ನನ್ನದು ಎಂದು ಭೂಮಿ ಮೇಲೆ ಬಡಿದಾಡುತ್ತಿರುತ್ತಾನೆ. ಮಿಗಿಲಾಗಿ ಜೀವಿಸಲು ಅತ್ಯಂತ ಉಪಯುಕ್ತವಾದ ಗಾಳಿ ಮತ್ತು ನೀರನ್ನು ಮಲಿನ ಮಾಡುತ್ತಾನೆ.ಜಗತ್ತು ಸೃಷ್ಟಿಕರ್ತನಿಂದ ಸೃಷ್ಟಿಯಾಗಿದ್ದು ಸರಿ ಆದರೆ ಜಗತ್ತು ನಾಶವಾಗಬೇಕಾದರೆ ಅದೇ ಮನುಷ್ಯನಿಂದಲೇ! **ಉದಾಹರಣೆಗೆ :** ಜಗತ್ತಿನ ಎಲ್ಲಾ ಪ್ರಬಲ ರಾಷ್ಟ್ರಗಳು ಅಣುಬಾಂಬು, ಪರಮಾಣು ಬಾಂಬು, ಹೈಡ್ರೋಜನ್ ಬಾಂಬ್, ಅಣ್ವಸ್ತ್ರಗಳನ್ನು ಸಿದ್ಧಪಡಿಸಿಕೊಂಡಿದ್ದಾರೆ. ಕಾರಣ ಮನುಕುಲ ಮತ್ತು ಜಗತ್ತನ್ನು ನಾಶಮಾಡುವ ಪ್ರಬಲ ಶಕ್ತಿಗಳನ್ನು ಇಟ್ಟುಕೊಂಡು ಸಿದ್ದರಾಗಿ ಪಂಚಭೂತಗಳಿಗೆ ಸೆಡ್ಡು ಹೊಡೆಯಲು ಹೊಸ್ತಿಲಿನಲ್ಲಿದ್ದಾರೆ ಎಂತಹ ವಿಪರ್ಯಾಸ. ಮಾನವ ಬಹುತೇಕ ಪ್ರಕೃತಿಯನ್ನು ನಾಶ ಮಾಡಿದ್ದಾಯಿತು ಆದರೆ ಸೃಷ್ಟಿಕರ್ತ ಮಾನವನ ಅದೀನದಲ್ಲಿಲ್ಲ. ಒಂದು ವೇಳೆ ಸೃಷ್ಟಿಕರ್ತ ಮಾನವನ ಅಧೀನದಲ್ಲಿ ಇದ್ದಿದ್ದರೆ ಇಡೀ ಭೂಮಂಡಲವೇ ನರಕ ಸದೃಶ್ಯವಾಗುತ್ತಿತ್ತು.

ಇಲ್ಲಿ ಮಾನವನ ಕೊಡುಗೆ ಏನೇನೂ ಇಲ್ಲ ಇರುವುದನ್ನ ಸದ್ಬಳಕೆ ಮಾಡಿಕೊಂಡು ಜೀವಿಸಿದ್ದರೆ ಸಾಕು ಅದೇ ನೀವು ಸೃಷ್ಟಿಕರ್ತನಿಗೆ ಕೊಡಬೇಕಾಗಿರುವ ಗೌರವ.ಇಂತಹ ಸಾಮಾನ್ಯ ಜ್ಞಾನ ಇಲ್ಲದ ಕೆಲವು ಮನುಷ್ಯರು ಭೂಮಿಯ ಮೇಲೆ ಸರ್ವಾಧಿಕಾರಿಗಳಂತೆ ವರ್ತಿಸುತ್ತಾ ದೆವ್ವ, ಪಿಶಾಚಿ,ರಾಕ್ಷಸ ರೀತಿ ಪರಿವರ್ತನೆಯಾಗಿದ್ದಾರೆ ಈ ಭೂಮಿಯ ಮೇಲೆ ನನ್ನದೂ ಅಂತ ಏನೇನೂ ಇಲ್ಲ. ಹಕ್ಕಿಗಳು ವಾಸಿಸಲು ಗೂಡು ಹೇಗೆ ಕಟ್ಟಿ ಕೊಳ್ಳುತ್ತವೆಯೋ ಅದೇ ರೀತಿ ಮಾನವ ವಾಸಿಸಲು ಮನೆಯನ್ನು ಕಟ್ಟಿಕೊಳ್ಳುತ್ತಾನೆ ಆದರೆ ಆ ಮನೆಯ ತಾತ್ಕಾಲಿಕ ಮಾಲೀಕರೇ ಹೊರತು ಶಾಶ್ವತ ಮಾಲೀಕರು ನಾವಲ್ಲ. ನಾವುಗಳು ಈ ಭೂಮಿಗೆ ಬರುವುದಕ್ಕಿಂತ ಮುಂಚೆ ಈ ಜಗತ್ತು ಇತ್ತು ನಾವುಗಳು ಹೋದಮೇಲೂ ಕೂಡ ಈ ಜಗತ್ತು ಇರುತ್ತದೆ ಎಂಬ ಸಾಮಾನ್ಯ ಜ್ಞಾನ ಮಾನವನಿಗೆ ಅರಿವಿರಬೇಕು.

**ಈ ಭೂಮಿ ಒಂದು ರಂಗಮಂಟಪ. ನಾವುಗಳು ಪಾತ್ರದಾರಿಗಳೇ ವಿನಹ:** ಸೂತ್ರದಾರಿ ಅಲ್ಲ ಆ ಸೃಷ್ಟಿಕರ್ತನೇ ಸೂತ್ರದಾರಿ. ಸೃಷ್ಟಿಕರ್ತನಿಗೆ ಸಾವಿಲ್ಲ ಒಂದು ವೇಳೆ ಸೃಷ್ಟಿಕರ್ತನಿಗೆ ಸಾವು ವ್ಯಾಪಿಸಿದರೆ ಆಗ ಇಡೀ ಜಗತ್ತೇ ಪ್ರಳಯ ಹಾಗೂ ಸರ್ವನಾಶ. ಒಟ್ಟಾರೆ ಪಂಚಭೂತಗಳ ಒಡೆಯ ಆ ಸೃಷ್ಟಿಕರ್ತ ಹಾಗೂ ಅವುಗಳು ಸೃಷ್ಟಿಕರ್ತನ ಸ್ವತ್ತು ಎಂಬ ಕನಿಷ್ಠ ಸಾಮಾನ್ಯ ಜ್ಞಾನ ಜಗತ್ತಿನ ಪ್ರತಿಯೊಬ್ಬ ಮಾನವನಿಗಿರಬೇಕು. ಆಗ ನಾವುಗಳು ಮನುಷ್ಯರಾಗಿ ಹುಟ್ಟಿದ್ದಕ್ಕೂ ಸಾರ್ಥಕವಾದ ಬದುಕಾಗುತ್ತದೆ.

## ನೀವು ಬೇರೆಯವರಾಗಲು ಪ್ರಯತ್ನಿಸಬೇಡಿ

ದಟ್ಟವಾದ ಮತ್ತು ಹಸಿರಿನಿಂದ ಕಂಗೊಳಿಸುವ ಒಂದು ಸುಂದರ ಅರಣ್ಯದಲ್ಲಿ, 'ಕಾಗೂ' ಎಂಬ ಒಂದು ಚಿಕ್ಕ ಕಾಗೆ ವಾಸಿಸುತ್ತಿತ್ತು. ಆ ಕಾಗೆಗೆ ತನ್ನ ಕಪ್ಪು ಬಣ್ಣವೆಂದರೆ ಸ್ವಲ್ಪ ಬೇಸರ ಮತ್ತು ಅಸಮಾಧಾನ. ಪ್ರತಿದಿನವೂ ಅದು ಹಳ್ಳದ ಬಳಿಯ ಸ್ವಚ್ಛ ನೀರಿನಲ್ಲಿ ತನ್ನ ಪ್ರತಿಬಿಂಬವನ್ನು ದಿಟ್ಟಿಸಿ ನೋಡುತ್ತಾ, ಮನಸ್ಸಿನಲ್ಲಿಯೇ ಕೊರಗುತ್ತಿತ್ತು. ಛೇ, ನಾನೆಷ್ಟು ಕಪ್ಪು! ನೋಡು, ನವಿಲು ಎಷ್ಟು ಅದ್ಭುತವಾಗಿ ಕುಣಿಯುತ್ತದೆ, ಅದರ ಗರಿಗಳು ಎಷ್ಟು ಬಣ್ಣಬಣ್ಣವಾಗಿ ಮಿನುಗುತ್ತವೆ! ಮತ್ತು ಹಂಸವು ಎಷ್ಟು ಸ್ನಿಗ್ಧವಾಗಿ, ಬೆಳ್ಳಗೆ ಈಜುತ್ತದೆ! ನನಗೇಕೆ ಇಷ್ಟು ಸಾದಾ ಬಣ್ಣ ಈ ಆತ್ಮವೈಷಮ್ಯ, ಅದನ್ನು ದಿನೇದಿನೇ ಕಾಡತೊಡಗಿತು. ತನ್ನ ಅಸ್ತಿತ್ವವೇ ನೀರಸವೆಂದು ಭಾವಿಸಿದ ಆ ಕಾಗೆ, ತನಗಿಂತ ಸೌಂದರ್ಯದಲ್ಲಿ ಮಿಗಿಲಾದವರ ಬಗ್ಗೆ ಹೊಟ್ಟೆಕಿಚ್ಚು ಪಡಲಾರಂಭಿಸಿತು. ಒಂದು ದಿನ, ಆ ಅಸಮಾಧಾನವು ಅದರ ತಾಳ್ಮೆಯನ್ನು ಮೀರಿತು. ಕಾಗೂ ನೇರವಾಗಿ ಆ ಆಕರ್ಷಕ ನವಿಲಿನ ಬಳಿಗೆ **ಹಾರಿಹೋಯಿತು ಮತ್ತು ಕುತೂಹಲದಿಂದ ಕೇಳಿತು:** ನಮಸ್ಕಾರ ಸ್ನೇಹಿತರೇ, ನೀವು ಖಂಡಿತವಾಗಿಯೂ ಈ ಇಡೀ ಅರಣ್ಯದಲ್ಲಿಯೇ ಅತ್ಯಂತ ಸಂತೋಷದ ಹಕ್ಕಿಯಾಗಿರಬೇಕು, ಸರಿಯೇ? ನಿಮ್ಮ ಗರಿಗಳ ಅದ್ಭುತ ವರ್ಣವೈಭವ, ನಿಮ್ಮ ಮನಮೋಹಕ ನೃತ್ಯ, ನಿಮ್ಮ ಚೆಲುವಿನ ರೂಪ... ಎಲ್ಲವೂ ಅದ್ಭುತ. ನಿಮ್ಮ ಬದುಕು ಎಷ್ಟು ಸುಂದರವಾಗಿರಬೇಕು!ಇದನ್ನು ಕೇಳಿದ ಕೂಡಲೇ ನವಿಲು ಒಂದು ದೀರ್ಘ ಮತ್ತು ನೋವಿನ ನಿಟ್ಟುಸಿರು ಬಿಟ್ಟಿತು. ಅದರ ಕಣ್ಣುಗಳಲ್ಲಿ ಅಸಹಾಯಕತೆಯ ನೆರಳು ಆವರಿಸಿತು. ಅದು ಕಾಗೆಗೆ ಉತ್ತರಿಸಿತು. ಹೌದು ಕಾಗೇಶ್ವರ, ನಾನೂ ಒಮ್ಮೆ ನಿಮ್ಮಂತೆಯೇ ಅಂದುಕೊಂಡಿದ್ದೆ. ಆದರೆ ನಿನ್ನೆಯಷ್ಟೇ ಅರಣ್ಯದ ಅಂಚಿನಲ್ಲಿರುವ ಪ್ರಾಣಿ ಸಂಗ್ರಹಾಲಯದ ಅಧಿಕಾರಿಗಳು ಇಲ್ಲಿಗೆ ಬಂದರು. ಅವರು ನನ್ನ ದೇಹದ ಮೇಲಿನ ವರ್ಣರಂಜಿತ ಗರಿಗಳಿಗಾಗಿ ನನ್ನನ್ನು ಸೆರೆ ಹಿಡಿದು ಪಂಜರದಲ್ಲಿಡಲು ಪ್ರಯತ್ನಿಸುತ್ತಿದ್ದಾರೆ. ನನಗೆ ನನ್ನ ಸ್ವಾತಂತ್ರ್ಯವೇ ಇಲ್ಲವಾಗಿದೆ?ನಾನು ಸದಾ ಭಯದಿಂದ, ಸೆರೆಯ ವಾಸ್ತವವನ್ನು ಅನುಭವಿಸುತ್ತಿದ್ದೇನೆ. **ನವಿಲು ತನ್ನ ದುಃಖವನ್ನು ಇನ್ನಷ್ಟು ತೆರೆದಿಟ್ಟಿತು:** ನೋಡಿ, ಕಾಗೇಶ್ವರ, ನೀನು ಜಗತ್ತಿನಲ್ಲೇ ಅತ್ಯಂತ ಸ್ವತಂತ್ರ ಮತ್ತು ಸುರಕ್ಷಿತ ಹಕ್ಕಿ. ನಿನ್ನ ಕಪ್ಪು ಗರಿಗಳು ನಿನ್ನನ್ನು ಎಲ್ಲೆಂದರಲ್ಲಿ ಮರೆಯಾಗಲು, ಅಪಾಯಗಳಿಂದ ತಪ್ಪಿಸಿಕೊಳ್ಳಲು ಮತ್ತು ಎಲ್ಲೆಂದರಲ್ಲಿ ಮುಕ್ತವಾಗಿ ಹಾರಾಡಲು ಸಹಾಯ ಮಾಡುತ್ತವೆ. ನಿನ್ನನ್ನು ಯಾರೂ ಖೈದಿ ಮಾಡಲು ಬಯಸುವುದಿಲ್ಲ, ಯಾರೂ ನಿನ್ನನ್ನು ಮೆಚ್ಚಿ ಸೆರೆಹಿಡಿಯಲು ಹಂಬಲಿಸುವುದಿಲ್ಲ. ನೀನು ಮುಕ್ತ, ನೀನು ಬುದ್ಧಿವಂತ, ನೀನು ನಿಜವಾದ ಅದೃಷ್ಟಶಾಲಿ. ನಿನ್ನ ಸರಳತೆಯೇ ನಿನ್ನ ಶಕ್ತಿ, ನಿನ್ನ ಕಪ್ಪು ಗರಿಗಳೇ ನಿನ್ನ ರಕ್ಷಾಕವಚ! ಆ ಕ್ಷಣವೇ ಕಾಗೂಗೆ ಸತ್ಯದ ಸ್ಫೋಟವಾಯಿತು. ತನ್ನ ಕಪ್ಪು ಬಣ್ಣದಲ್ಲಿಯೇ ಅದು ಎಷ್ಟು ಸಹಜ, ಸಮರ್ಥ ಮತ್ತು ಸುರಕ್ಷಿತವಾಗಿದೆ ಎಂಬುದು ಅದಕ್ಕೆ ಸ್ಪಷ್ಟವಾಯಿತು. ಅದು ಮನಸ್ಸಿನಲ್ಲಿಯೇ ಯೋಚಿಸಿತು. ನಾನು ಬಣ್ಣಗಳ ಅಮೃತಶಿಲೆಯಲ್ಲ, ಆದರೆ ನಾನು ಸ್ವಾತಂತ್ರ್ಯದ ಪ್ರತೀಕ. ನನ್ನ ಗರಿಗಳು ನನ್ನನ್ನು ಅಪಾಯದಿಂದ ಬಚ್ಚಿಡುತ್ತವೆ. ನನ್ನ ಬುದ್ಧಿ ನನಗೆ ಆಹಾರವನ್ನುಗಳಿಸಿಕೊಡುತ್ತದೆ. ನನ್ನ ಸರಳತೆಯೇ ನನ್ನ ಗುರುತು. ನಾನು ಬೇರೆಯವರಂತಾಗಲು ಹಂಬಲಿಸಬೇಕಿಲ್ಲ. ಏಕೆಂದರೆ ನಾನಾಗಿಯೇ ನಾನು ಅಮೂಲ್ಯ! ಕಾಗೂ ತನ್ನ ಹಿಂದಿನ ವೈಷಮ್ಯವನ್ನು ಬದಿಗಿರಿಸಿತು. ಅದು ನವಿಲಿಗೆ ಧನ್ಯವಾದಗಳನ್ನು ಅರ್ಪಿಸಿತು ಮತ್ತು ಹೆಮ್ಮೆಯಿಂದ, ಹಗುರವಾದ ಮನಸ್ಸಿನಿಂದ ಗಗನಕ್ಕೇರಿತು. ತನ್ನ ಕಪ್ಪು ಗರಿಗಳನ್ನು ಪ್ರೀತಿಸಿತು, ತನ್ನನ್ನು ತಾನೇ ಸ್ವೀಕರಿಸಿತು ಮತ್ತು ತನ್ನ ಅಸ್ತಿತ್ವದ ಅರ್ಥವನ್ನು ಅರಿತುಕೊಂಡಿತು. **ನೀತಿ :** ನಾವು ಬೇರೆಯವರೊಂದಿಗೆ ನಮ್ಮನ್ನು ಹೋಲಿಸಿಕೊಂಡು, ನಮ್ಮಲ್ಲಿಲ್ಲದ ಗುಣಗಳಿಗಾಗಿ ದುಃಖಿಸಬಾರದು. **ಪ್ರತಿಯೊಬ್ಬ ವ್ಯಕ್ತಿಯೂ ವಿಶಿಷ್ಟ;** ಪ್ರತಿಯೊಬ್ಬರಲ್ಲೂ ಏನೋ ವೈಶಿಷ್ಟ್ಯವಿದೆ. ಪ್ರಕೃತಿಯು ಪ್ರತಿಯೊಬ್ಬರಿಗೂ ಅವರದೇ ಆದ ವಿಶೇಷವಾದ ಮತ್ತು ಅನನ್ಯ ಗುಣಗಳನ್ನು ನೀಡಿದೆ. ನಮ್ಮಲ್ಲಿರುವ ತನ್ನತನವನ್ನು ಪ್ರೀತಿಸುವುದು, ಅದನ್ನು ಅರಿತುಕೊಳ್ಳುವುದು ಮತ್ತು ಅದನ್ನು ಸದ್ಬಳಕೆ ಮಾಡಿಕೊಳ್ಳುವುದೇ ನಿಜವಾದ ಬದುಕಿನ ಸಾರ್ಥಕತೆ. **ನೀವು ಬೇರೆಯವರಾಗಲು ಪ್ರಯತ್ನಿಸಬೇಡಿ;** ಏಕೆಂದರೆ ಬ್ರಹ್ಮಾಂಡದಲ್ಲಿ ಒಂದೇ ಒಂದು 'ನೀವು' ಇದ್ದೀರಿ. ಆ 'ನೀವು' ಆಗಿಯೇ ನೀವು ಪರಿಪೂರ್ಣರು.

ಷ.ಬ್ರ.ಡಾ.ಅಭಿನವ ರಾಮಲಿಂಗ ಶ್ರೀ

# 1,007 ಇಂಗುಗುಂಡಿ ನಿರ್ಮಿಸಿ ಅಂತರ್ಜಲ ಹೆಚ್ಚಳಕ್ಕೆ ಕ್ರಾಂತಿಕಾರಿ ಕೊಡುಗೆ

## ವಿದ್ಯಾರ್ಥಿಗಳು ತಮ್ಮ ಮನೆಗಳ ಸುತ್ತಮುತ್ತ ಒಟ್ಟು 1,007 ಇಂಗುಗುಂಡಿಗಳನ್ನು ನಿರ್ಮಿಸಿ ಅಂತರ್ಜಲ ಹೆಚ್ಚಳಕ್ಕೆ ಕ್ರಾಂತಿಕಾರಿ ಕೊಡುಗೆ ನೀಡಿದ್ದಾರೆ

• **ಉದಯವಾಹಿನಿ, ಮಂಗಳೂರು:**

ಮಳೆ ನೀರು ವ್ಯರ್ಥವಾಗಿ ಹರಿದು ಹೋಗುವುದನ್ನು ತಡೆದು, ಅಂತರ್ಜಲ ಮಟ್ಟ ಹೆಚ್ಚಿಸುವಲ್ಲಿ ಮೊಡಂಕಾಪುವಿನ ಕಾರ್ಮೆಲ್ ಪ್ರೌಢಶಾಲೆಯ ವಿದ್ಯಾರ್ಥಿಗಳು ವಿಶೇಷ ಸಾಧನೆ ಮಾಡಿದ್ದಾರೆ. ಶಾಲಾ ಪಠ್ಯಪುಸ್ತಕಗಳಲ್ಲಷ್ಟೇ ಮಳೆನೀರು ಕೊಯ್ಲು ಕಲಿಯುವ ಮಕ್ಕಳಿಗೆ ಪ್ರಾಯೋಗಿಕವಾಗಿ ಪರಿಸರ ಕಾಳಜಿ ಬೆಳೆಸುವ ಉದ್ದೇಶದಿಂದ

**1 : ನಗದು ಬಹುಮಾನದ ಪ್ರೋತ್ಸಾಹ**
**2 : ಇದು ಸಮಾಜದಲ್ಲೂ ಜಲಜಾಗೃತಿ**
**3 : ಈ ಜಾಗರೂಕತೆ ಮತ್ತು ಕಾಳಜಿ**

ಶಾಲೆಯ 'ಹಸಿರು ಭವಿಷ್ಯ ಪರಿಸರ ಸಂಘ' ಕೈಗೊಂಡ ಜಲಸಂರಕ್ಷಣಾ ಅಭಿಯಾನವು ಕಳೆದ ಏಳು ವರ್ಷಗಳಿಂದ ಯಶಸ್ವಿಯಾಗಿ ಸಾಗುತ್ತಿದ್ದು, ಬಂಟ್ವಾಳ ತಾಲ್ಲೂಕಿನಾದ್ಯಂತ ವ್ಯಾಪಕ ಮೆಚ್ಚುಗೆಗೆ ಪಾತ್ರವಾಗಿದೆ. ವಿದ್ಯಾರ್ಥಿಗಳು ನಿರ್ಮಿಸಿರುವ ಪ್ರತಿ ಇಂಗುಗುಂಡಿಯು 3★2★2 ಅಡಿ (12 ಘನ ಅಡಿ) ಆಳತೆಯನ್ನು ಹೊಂದಿದೆ. ಒಮ್ಮೆ ಪೂರ್ಣ ಮಳೆನೀರು ತುಂಬಿಕೊಂಡರೆ ಒಂದು ಇಂಗುಗುಂಡಿಯಲ್ಲಿ 340 ಲೀಟರ್ ನೀರು ಭೂಮಿಯ ಆಳಕ್ಕೆ ಇಂಗುತ್ತದೆ.

ಈ ಲೆಕ್ಕಾಚಾರದಂತೆ 180 ಇಂಗುಗುಂಡಿಗಳಿಂದ ಒಮ್ಮೆಗೆ 61,200 ಲೀಟರ್ ಮಳೆನೀರು ಭೂಗರ್ಭ ತಲುಪಲಿದ್ದು, ಬೇಸಿಗೆಯಲ್ಲಿ ಬಾವಿ ಕೊಳವೆಬಾವಿಗಳಲ್ಲಿ ನೀರಿನ ಮಟ್ಟ ಹೆಚ್ಚಲು ಗಣನೀಯವಾಗಿ ನೆರವಾಗುತ್ತಿದೆ. ವಿದ್ಯಾರ್ಥಿಗಳು ಇಂತಹ ಶ್ರಮದಾಯಕ ಕಾರ್ಯಕ್ಕೆ ಮುಂದಾಗಲು ವಿಜ್ಞಾನ ವಿಷಯದ ಯೋಜನೆಯಡಿಯಲ್ಲಿ ಫಾರ್ಮೇಟಿವ್ ಅಸೆಸ್‌ಮೆಂಟ್ ಪ್ರೊಜೆಕ್ಟ್‌ಗೆ 30 ಅಂಕಗಳನ್ನು ಕಾಯ್ದಿರಿಸಲಾಗಿತ್ತು. ಅಷ್ಟೇ ಅಲ್ಲದೆ, ಪೂರ್ಣಗೊಳಿಸಿದ ಇಂಗುಗುಂಡಿಯ ಫೋಟೋ ಕಳುಹಿಸಿದ ಪ್ರತಿಯೊಬ್ಬ ವಿದ್ಯಾರ್ಥಿಗೂ ಶಾಲೆಯಿಂದ ಪ್ರೋತ್ಸಾಹಕ ಬಹುಮಾನಗಳನ್ನು ನೀಡಲಾಗಿದೆ.





ಉದಯವಾಹಿನಿ ಚಿತ್ರ

> ಅತ್ಯಧಿಕ ಗುಂಡಿ ತೋಡಿದ ವಿದ್ಯಾರ್ಥಿಗಳಿಗೆ ರೂ. 500, ರೂ. 300, ರೂ. 200 ನಗದು ಬಹುಮಾನ, ಹೆಸರು ಮುದ್ರಿಸಿದ ಪೆನ್ ಹಾಗೂ ವಿಶೇಷ ಬ್ಯಾಜ್‌ಗಳನ್ನು ನೀಡಿ ಗೌರವಿಸಲಾಗುತ್ತಿದೆ. ಹಲವು ವಿದ್ಯಾರ್ಥಿಗಳು ಈ ಬಾರಿಯ ಜಲಜಾಗೃತಿಯಲ್ಲಿ ಮುಂಚೂಣಿಯಲ್ಲಿ ನಿಂತಿದ್ದಾರೆ. -ಸಿಸ್ಟರ್ ವೀರಾ ಎ.ಸಿ

> 2019ರಿಂದ ಆರಂಭವಾದ ಈ ಕಾರ್ಯಕ್ರಮ ಕೊರೋನಾ ಸಮಯದಲ್ಲೂ ನಿಲ್ಲದೆ ಸಾಗಿತ್ತು. ಈವರೆಗೆ 1,007 ಇಂಗುಗುಂಡಿಗಳು ನಿರ್ಮಾಣವಾಗಿವೆ. ಮಕ್ಕಳಿಗೆ ಇದರ ಉದ್ದೇಶ ಮತ್ತು ಪ್ರಯೋಜನಗಳನ್ನು ತಿಳಿಸಿಕೊಟ್ಟು, ವಿಜ್ಞಾನ ಪ್ರಾಜೆಕ್ಟ್‌ಗೆ 30 ಅಂಕಗಳನ್ನು ಹಾಗೂ ವಿಶೇಷ ಬಹುಮಾನಗಳನ್ನು ನೀಡಿ ಪ್ರೋತ್ಸಾಹಿಸುತ್ತಿದ್ದೇವೆ. ಇದು ಸಮಾಜದಲ್ಲೂ ಜಲಜಾಗೃತಿ ಮೂಡಿಸಿದೆ ಎಂದು ತಿಳಿಸಿದರು. -ಶಿಕ್ಷಕ ರೋಷನ್ ಪಿಂಟೊ

ಮೊಡಂಕಾಪು ಕಾರ್ಮೆಲ್ ಪ್ರೌಢಶಾಲೆಯ ಮುಖ್ಯಶಿಕ್ಷಕಿ ಸಿಸ್ಟರ್ ವೀರಾ ಎ.ಸಿ. ಅವರು ಮಾತನಾಡಿ, ನಮ್ಮ ಶಾಲೆಯ 8, 9 ಮತ್ತು 10ನೇ ತರಗತಿಯ 107 ವಿದ್ಯಾರ್ಥಿಗಳು ರಜಾ ದಿನಗಳಲ್ಲಿ ಶ್ರಮಪಟ್ಟು 180 ಇಂಗುಗುಂಡಿಗಳನ್ನು ತೋಡಿರುವುದು ನಮಗೆ ಅತ್ಯಂತ ಸಂತಸ ಹಾಗೂ ಹೆಮ್ಮೆಯ ವಿಷಯ.

ಪುಟ್ಟ ವಯಸ್ಸಿನಲ್ಲೇ ಮಕ್ಕಳು ಮಳೆನೀರು ಸಂರಕ್ಷಣೆ, ಪರಿಸರ ಕಾಳಜಿ

> ಪ್ರಸಕ್ತ ವರ್ಷದಲ್ಲಿ ಜೂನ್‌ನಿಂದ ಆಗಸ್ಟ್ ತಿಂಗಳ ಅವಧಿಯಲ್ಲಿ ಹಮ್ಮಿಕೊಳ್ಳಲಾಗಿದ್ದ ಇಂಗುಗುಂಡಿ ನಿರ್ಮಾಣ ಸ್ಪರ್ಧೆಯಲ್ಲಿ ಶಾಲೆಯ 107 ವಿದ್ಯಾರ್ಥಿಗಳು ಸಕ್ರಿಯವಾಗಿ ಭಾಗವಹಿಸಿ 180 ವೈಜ್ಞಾನಿಕ ಇಂಗುಗುಂಡಿಗಳನ್ನು ತೋಡಿದ್ದಾರೆ.

ಹಾಗೂ ಅಂತರ್ಜಲ ಹೆಚ್ಚಳದ ಬಗ್ಗೆ ತೋರಿರುವ ಈ ಜಾಗರೂಕತೆ ಮತ್ತು ಕಾಳಜಿ ಸಮಾಜಕ್ಕೆ ದೊಡ್ಡ ಮಾದರಿಯಾಗಿದೆ ಎಂದರು. 10ನೇ ತರಗತಿ ವಿದ್ಯಾರ್ಥಿನಿ ಅದಿತಿ ರಾವ್ ಮಾತನಾಡಿ, ಶಾಲೆಯಲ್ಲಿ ಕೇವಲ ಅಂಕ ಗಳಿಕೆಗೆ ಮಾತ್ರವೇ ಆದ್ಯತೆ ನೀಡದೆ ಇಂತಹ ರಚನಾತ್ಮಕ ಚಟುವಟಿಕೆಗಳ ಮೂಲಕ ನಮ್ಮ ಭವಿಷ್ಯವನ್ನು ರೂಪಿಸುವ ಕೆಲಸ ನಡೆಯುತ್ತಿದೆ. ಎಂಟನೇ ತರಗತಿಯಿಂದಲೇ ನಾನು ಇಂಗುಗುಂಡಿ ತೋಡಲು ಆರಂಭಿಸಿದ್ದು ಇಲ್ಲಿಯವರೆಗೆ 7 ಇಂಗುಗುಂಡಿಗಳನ್ನು ನಿರ್ಮಿಸಿದ್ದೇನೆ. ಪೋಷಕರು ದುಡಿಯುವಾಗ ಪಡುವ ಶ್ರಮದ ಮಹತ್ವ ನಮಗೆ ಇಂಗುಗುಂಡಿ ತೋಡುವಾಗ ಅರ್ಥವಾಗುತ್ತದೆ. ನಮ್ಮ ಬಾವಿಯ ನೀರಿನ ಮಟ್ಟದಲ್ಲೂ ಏರಿಕೆಯಾಗಿದೆ ಎಂದು ಹೇಳಿದರು. 10ನೇ ತರಗತಿ ವಿದ್ಯಾರ್ಥಿ ರೋಯ್ಸ್ಟನ್ ಲೋಬೊ ಮಾತನಾಡಿ, ವಿಜ್ಞಾನ ಶಿಕ್ಷಕ ರೋಷನ್ ಪಿಂಟೊ ಸರ್ ಅವರ ಮಾರ್ಗದರ್ಶನದಲ್ಲಿ ನಾನು ಕಳೆದ 3 ವರ್ಷಗಳಲ್ಲಿ ನನ್ನ ಮನೆಯ ಸುತ್ತಮುತ್ತ 68 ಇಂಗುಗುಂಡಿಗಳನ್ನು ನಿರ್ಮಿಸಿದ್ದೇನೆ. ಇದರಿಂದಾಗಿ ಬೇಸಿಗೆ ಕಾಲದಲ್ಲಿ ನಮ್ಮ ತೋಟದ ಬಾವಿಯಲ್ಲಿ ನೀರಿನ ಮಟ್ಟ ಗಣನೀಯವಾಗಿ ಹೆಚ್ಚಾಗಿದೆ. ಮಳೆನೀರು ರಸ್ತೆಗೆ ಹರಿದು ನದಿ ಸೇರುವ ಬದಲು ಮಣ್ಣಿನ ಆಳಕ್ಕೆ ಇಂಗಿಸಿದರೆ ನೀರಿನ ಅಭಾವ ತಗ್ಗಿಸಬಹುದು ಎಂದು ನೆರೆಹೊರೆಯವರಿಗೂ ಅರಿವು ಮೂಡಿಸಿದ್ದೇನೆ ಎನ್ನುತ್ತಾರೆ.

# ಅಲ್ಬೆಂಡಜೋಲ್ ಮಾತ್ರೆ ರಕ್ತಹೀನತೆ ತಡೆಗೆ ರಾಮಬಾಣ: ಡಾ.ಸಂತೋಷ ಪಾಟೀಲ

• **ಉದಯವಾಹಿನಿ, ಶಹಾಬಾದ,-**

ಮಕ್ಕಳಲ್ಲಿ ಜಂತುಹುಳು ಬಾಧೆಯಿಂದ ಉಂಟಾಗುವ ರಕ್ತಹೀನತೆ ,ಅಪೌಷ್ಟಿಕತೆಯನ್ನು ತಡೆಗಟ್ಟುವ ನಿಟ್ಟಿನಲ್ಲಿ ಅಲ್ಬೆಂಡಜೋಲ್ ಮಾತ್ರೆ ಸೇವನೆ ಅತ್ಯಂತ ಪರಿಣಾಮಕಾರಿಯಾಗಿದ್ದು, ಜಂತುಹುಳು ನಿವಾರಣೆಯಲ್ಲಿ ಇದು ಪ್ರಮುಖ ಪಾತ್ರ ವಹಿಸುತ್ತದೆ ಎಂದು ಸಮುದಾಯ ಆರೋಗ್ಯ ಕೇಂದ್ರ ಶಹಾಬಾದದ ಆಡಳಿತ ವೈದ್ಯಾಧಿಕಾರಿ ಡಾ. ಸಂತೋಷ ಪಾಟೀಲ ಹೇಳಿದರು.

ಕಲಬುರಗಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಸಮುದಾಯ ಆರೋಗ್ಯ ಕೇಂದ್ರ ಶಹಾಬಾದ ಹಾಗೂ ಸರ್ಕಾರಿ ಪದವಿ ಪೂರ್ವ ಕಾಲೇಜು ಶಹಾಬಾದ ಇವರ ಸಂಯುಕ್ತ ಆಶ್ರಯದಲ್ಲಿ ಹಮ್ಮಿಕೊಂಡಿದ್ದ ರಾಷ್ಟ್ರೀಯ ಜಂತುಹುಳು ನಿವಾರಣ ದಿನಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಅಲ್ಬೆಂಡಜೋಲ್ ಮಾತ್ರೆಯನ್ನು ವಿಶ್ವ ಆರೋಗ್ಯ ಸಂಸ್ಥೆಯು ಅಗತ್ಯ ಔಷಧಗಳ ಪಟ್ಟಿಯಲ್ಲಿ ಸೇರಿಸಿದ್ದು,



ಉದಯವಾಹಿನಿ ಚಿತ್ರ

ಮಕ್ಕಳಿಗೆ ನಿಯಮಿತವಾಗಿ ಜಂತುಹುಳು ನಿವಾರಣ ಮಾತ್ರೆ ನೀಡುವುದರಿಂದ ಜಂತುಹುಳು ಬಾಧೆ, ರಕ್ತಹೀನತೆ ಹಾಗೂ ಅಪೌಷ್ಟಿಕತೆಯನ್ನು ನಿಯಂತ್ರಿಸಲು ಸಾಧ್ಯವಾಗುತ್ತದೆ. ಶುದ್ಧ ನೀರು ಸೇವಿಸುವುದು, ಶೌಚಾಲಯ ಬಳಸಿದ ನಂತರ ಹಾಗೂ ಆಹಾರ ಸೇವಿಸುವ ಮುನ್ನ ಸಾಬೂನಿನಿಂದ ಕೈಗಳನ್ನು ಸ್ವಚ್ಛವಾಗಿ ತೊಳೆಯುವುದು, ಬರಿಗಾಲಿನಲ್ಲಿ ಓಡಾಡದೆ ಪಾದರಕ್ಷೆಗಳನ್ನು ಧರಿಸುವುದು ಮತ್ತು ಸುತ್ತಮುತ್ತಲಿನ ಪರಿಸರವನ್ನು

> ಮಕ್ಕಳು ಪೌಷ್ಟಿಕಾಂಶಯುಕ್ತ ಆಹಾರ ಸೇವಿಸುವುದರ ಜೊತೆಗೆ ಶುದ್ಧ ನೀರನ್ನು ಕುಡಿಯುವ ಅಭ್ಯಾಸ ಬೆಳೆಸಿಕೊಳ್ಳಬೇಕು. ವೈಯಕ್ತಿಕ ಸ್ವಚ್ಛತೆ ಹಾಗೂ ಪರಿಸರ ನೈರ್ಮಲ್ಯಕ್ಕೆ ಹೆಚ್ಚಿನ ಆದ್ಯತೆ ನೀಡಿದರೆ ಜಂತುಹುಳು ಬಾಧೆಯನ್ನು ಬಹುತೇಕ ತಡೆಗಟ್ಟಬಹುದು ಎಂದು ಅವರು ಹೇಳಿದರು.
> -ಡಾ.ಸಂತೋಷ ಪಾಟೀಲ

ಸ್ವಚ್ಛವಾಗಿಟ್ಟುಕೊಳ್ಳುವುದು ಅಗತ್ಯವಾಗಿದೆ ಎಂದು ತಿಳಿಸಿದರು. ನಗರ ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ ಡಾ. ಶಂಕರ ರಾಥೋಡ್ ಮಾತನಾಡಿ, 1ರಿಂದ 2 ವರ್ಷದ ಮಕ್ಕಳಿಗೆ ಅರ್ಧ ಮಾತ್ರೆಯನ್ನು ಪುಡಿ ಮಾಡಿ ನೀರಿನೊಂದಿಗೆ ಸೇವಿಸಲು ನೀಡಬೇಕು. 2ರಿಂದ 3 ವರ್ಷದ ಮಕ್ಕಳಿಗೆ ಒಂದು ಪೂರ್ಣ ಮಾತ್ರೆಯನ್ನು ಪುಡಿ ಮಾಡಿ ಸೇವಿಸಲು ನೀಡಬೇಕು. 3ರಿಂದ 19 ವರ್ಷದ ಮಕ್ಕಳಿಗೆ ಒಂದು ಪೂರ್ಣ ಮಾತ್ರೆಯನ್ನು ಚೆನ್ನಾಗಿ ಜಗಿದು ನೀರಿನೊಂದಿಗೆ ಸೇವಿಸುವಂತೆ ಮಾಡಬೇಕು ಎಂದು ತಿಳಿಸಿದರು.

# ಅಂತರಾಷ್ಟ್ರೀಯ ಜೈವಿಕ ಇಂಧನ ದಿನಾಚರಣೆ

• **ಉದಯವಾಹಿನಿ, ಕಲಬುರಗಿ,:**

ಕರ್ನಾಟಕ ರಾಜ್ಯ ಜೈವಿಕ ಇಂಧನ ಅಭಿವೃದ್ಧಿ ಮಂಡಳಿ, ಜಿಲ್ಲಾ ಪಂಚಾಯತ್, ಸಾಮಾಜಿಕ ಅರಣ್ಯ ವಿಭಾಗ, ಕೃಷಿ ಮಹಾವಿದ್ಯಾಲಯ ಹಾಗೂ ಸಹಾರಾ ಸೇವಾ ಸಂಸ್ಥೆ ಸಹಭಾಗಿತ್ವದಲ್ಲಿ ''ಅಂತರಾಷ್ಟ್ರೀಯ ಜೈವಿಕ ಇಂಧನ ದಿನಾಚರಣೆ''ಯನ್ನು ನಗರದ ಆಳಂದ ರಸ್ತೆಯಲ್ಲಿರುವ ಕೃಷಿ ಮಹಾವಿದ್ಯಾಲಯದಲ್ಲಿ ಆಚರಿಸಲಾಯಿತು.

ಕಾರ್ಯಕ್ರಮ ಉದ್ಘಾಟನೆ ಮಾಡಿದ ಉಪ ಅರಣ್ಯ ಸಂರಕ್ಷಣಾಧಿಕಾರಿ ಹಾಗೂ ಜಿಲ್ಲಾ ಜೈವಿಕ ಇಂಧನ ಉಸ್ತುವಾರಿ ಸಮಿತಿ ಸಮಾವೇಶಕ ಸಾಗರ್ ಎಸ್. ತಾವಡೆ ಕಲಬುರಗಿ ಅವರು ದೇಶದಲ್ಲಿ ಜೈವಿಕ ಇಂಧನ ಬಹಳಷ್ಟು ಇದ್ದು, ವಾಣಿಜ್ಯಕವಾಗಿ ವಾಹನಗಳ ಇಂಧನ ಕ್ಷೇತ್ರದಲ್ಲಿ ಬಳಕೆ ಹಂತ ಪ್ರಸ್ತುತ ತಲುಪುತ್ತಿದೆ ಎಂದರು. ಪೆಟ್ರೋಲಿಯಂ ಉತ್ಪನ್ನಗಳ ಜೊತೆಗೆ ಜೈವಿಕ ಇಂಧನ ಕರ್ನಾಟಕದಲ್ಲಿ ಹೆಚ್ಚು ಪ್ರೋತ್ಸಾಹ ನೀಡಲಾಗುತ್ತಿದೆ. ಇದರಿಂದ ವಾಯು ಮಾಲಿನ್ಯ ಕಡಿಮೆಯಾಗುತ್ತಿದೆ ಹಾಗೂ ಪರಿಸರ ಸ್ನೇಹಿ ವಾಹನಗಳ ಬಳಕೆ ಕಾರ್ಯರೂಪಕ್ಕೆ ಬರುತ್ತಿದೆ ಎಂದರು.

ನಿವೃತ್ತ ಪ್ರಾಧ್ಯಾಪಕ ಡಾ. ಎಮ್. ಎಸ್. ಜೋಗದ ಮಾತನಾಡಿ, ಜೈವಿಕ ಇಂಧನ ಕ್ಷೇತ್ರದಲ್ಲಿ ಕೃಷಿ, ಅರಣ್ಯ, ತಂತ್ರಜ್ಞಾನ ಮತ್ತು ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ಸಂಶೋಧನೆಗೆ ವಿಪುಲ ಅವಕಾಶವಿದೆ. ಉತ್ತಮ ಪರಿಸರಕ್ಕಾಗಿ ಹಾಗೂ ಇಂಧನಕ್ಕಾಗಿ ಸಕ್ಕರೆ ಕಾರ್ಖಾನೆಗಳು ಕಬ್ಬು ಮತ್ತು ಮೆಕ್ಕೆಜೋಳದಿಂದ ಇಥೇನಾಲ್ ಉತ್ಪನ್ನ ಮಾಡತ್ತಿದೆ ಎಂದರು.

# ಬೈರದೇವನಹಳ್ಳಿಯಲ್ಲಿ ಮುಂಗಾರು ಜಾನಪದ ಸಂಭ್ರಮ

• **ಉದಯವಾಹಿನಿ, ಬಳ್ಳಾರಿ, :**

ತಾಲ್ಲೂಕಿನ ಬೈರದೇವನಹಳ್ಳಿ ಸರ್ಕಾರಿ ಮೊರಾರ್ಜಿವಸತಿ ಶಾಲೆಯಲ್ಲಿ ಚಿಗುರು ಕಲಾತಂಡದವರು ಆಯೋಜಿಸಿದ್ದ ಜಾನಪದ ಸಂಭ್ರಮ ಕಾರ್ಯಕ್ರಮ ಯಶಸ್ವಿಯಾಗಿ ಜರುಗಿತು.

ಈ ಕಾರ್ಯಕ್ರಮದ ಉದ್ಘಾಟನೆ ಶ್ರೀಮತಿ ಅನುಸೂಯಾ,ಕೆ, ಪ್ರಾಂಶುಪಾಲರು ನೆರವೇರಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಉಪ ಪ್ರಾಂಶುಪಾಲರಾದ ರಾಮಕೋಟಿರೆಡ್ಡಿ ರವರು ವಹಿಸಿದರು. ಕಾರ್ಯಕ್ರಮದ ಪ್ರಸ್ತಾವಿಕ ನುಡಿಗಳು ಚಿಗುರು ಕಲಾ ತಂಡದ ಅಧ್ಯಕ್ಷರಾದ ಹುಲುಗಪ್ಪ ಎಸ್ ಎಂ ಅವರು ಮಾತಾನಾಡಿದ್ರು, ನಂತರ ಶ್ರೀಮತಿ ಅನುಸೂಯಾ .ಕೆ.ಪ್ರಾಂಶುಪಾಲರು,ರವರು, ವೇದಿಕೆ ಮೇಲಿರುವ ಎಲ್ಲಾ ಶಿಕ್ಷಕ, ಶಿಕ್ಷಕೀಯರು ಸಸಿಗೆ ನೀರಾಕುವ ಮೂಲಕ ಕಾರ್ಯಕ್ರಮ ಉದ್ಘಾಟನೆ ಮಾಡಿದರು. ನಂತರ ಪ್ರಾಂಶುಪಾಲರಾದ ಶ್ರೀಮತಿ ಅನುಸೂಯಾ,ಕೆ. ಮಾತನಾಡಿ ನಮ್ಮ ಮೂಲ ಕಲೆ ಸಾಹಿತ್ಯಗಳು ಉಳಿಸುವ ಸಲು ವಾಗಿ, ಮಾನಸಿಕ ಒತ್ತಡದಿಂದ ಹೊರಗೆ ಬರಲು ಸಾಂಸ್ಕೃತಿಕವಾಗಿ ಮಕ್ಕಳನ್ನು ತೊಡಗಿಸಬೇಕು ಎಂದು ಅವರು ಉದ್ಘಾಟನೆ ನುಡಿಗಳನ್ನು ಹೇಳಿದರು, ಕಾರ್ಯಕ್ರಮ ಅಧ್ಯಕ್ಷತೆ ವಹಿಸಿದ ಶ್ರೀರಾಮಕೋಟೆ ರೆಡ್ಡಿ ಸರ್ ಅವರು ಮಾತನಾಡಿ ಕಲೆ ಸಾಹಿತ್ಯ ಮೂಲ ಕಲೆಗಳು ಉಳಿವಿಗಾಗಿ



ಉದಯವಾಹಿನಿ ಚಿತ್ರ

ನಾವು ಮಕ್ಕಳನ್ನ ಸೃಜನಶೀಲರಾಗಿ ತೊಡಗಿಸಿಕೊಳ್ಳಬೇಕು ಎಂದು ಅವರು ಹೇಳಿದರು .

ಈ ಕಾರ್ಯಕ್ರಮದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮ ಆಯೋಜನೆ ಮಾಡಲಾಗಿತ್ತು ಅಕ್ಷತಾ ಮತ್ತು ತಂಡದವರಿಂದ ಜಾನಪದ ಗೀತೆಗಳು ಕಾರ್ಯಕ್ರಮ, ಸುಂಕಪ್ಪ ಮತ್ತು ತಂಡದವರು ಜಾಗೃತಿ ಗೀತೆಗಳು, ದೀಪ್ತಿರವರಿಂದ ಜಾನಪದ ನೃತ್ಯ ಮಾಡಿದರು, ಕಾರ್ಯಕ್ರಮದಲ್ಲಿ ಭಾಗವಹಿಸಿದ ನಿಲಯದ ಎಲ್ಲಾ ಮಕ್ಕಳಿಗೆ ಮತ್ತು ಎಲ್ಲಾ ಶಿಕ್ಷಕರಿಗೆ ಆಧುನಿಕ ಜಗತ್ತಿನಲ್ಲಿ ನಶಿಸುವ ಕಲೆಗಳನ್ನ ತಮ್ಮ ಹಾಡಿನ ಮೂಲಕ ತಮ್ಮ ಮಾತನಾಡುವ ರಂಗ ಕೌಶಲ್ಯಗಳ ಬಗ್ಗೆ ಮಕ್ಕಳಿಗೆ ಮನಮುಟ್ಟುವಂತೆ ಮೆರಗು ತಂದರು.

# ದ. ಕ ದಲ್ಲಿ ಹೆಚ್ಚುತ್ತಿರುವ ಮಲೇರಿಯಾ ಪ್ರಕರಣ- ಆರೋಗ್ಯ ಇಲಾಖೆ ನಿಗಾ

• **ಉದಯವಾಹಿನಿ, ಮಂಗಳೂರು-**

ದಕ್ಷಿಣ ಕನ್ನಡದಾದ್ಯಂತ ನಿರಂತರ ಮಳೆಯಾಗುತ್ತಿದ್ದು, ಜಿಲ್ಲೆಯಲ್ಲಿ ಮಲೇರಿಯಾ ಪ್ರಕರಣಗಳು ಹೆಚ್ಚುತ್ತಲೇ ಇದ್ದು, ನಿರ್ಮಾಣ ಮತ್ತು ಇತರ ಯೋಜನೆಗಳಿಗಾಗಿ ಇತರ ರಾಜ್ಯಗಳಿಂದ ಆಗಮಿಸುವ ಕಾರ್ಮಿಕರಲ್ಲಿ ಸೋಂಕುಗಳ ಪ್ರಮಾಣ ಪತ್ತೆಯಾಗಿವೆ.

ವಿವಿಧ ಜಿಲ್ಲೆ ಮತ್ತು ರಾಜ್ಯಗಳಿಂದ ಹೆಚ್ಚಿನ ಸಂಖ್ಯೆಯಲ್ಲಿ ಕಾರ್ಮಿಕರು ದ.ಕ ಜಿಲ್ಲೆಗೆ ಆಗಮಿಸುತ್ತಿರುವ ಹೆನ್ನಲೆ ಮಲೇರಿಯಾ ನಿಯಂತ್ರಣ ಆರೋಗ್ಯ ಇಲಾಖೆಗೆ ಸವಾಲಾಗಿ ಪರಿಣಮಿಸಿದೆ. ಬಿಹಾರ, ಒಡಿಶಾ ಮತ್ತು ಜಾರ್ಖಂಡ್ ಸೇರಿದಂತೆ ರಾಜ್ಯಗಳಲ್ಲಿ ಮಲೇರಿಯಾ ಪ್ರಕರಣಗಳು ವರದಿಯಾಗುತ್ತಲೇ ಇವೆ. ಈ ರಾಜ್ಯಗಳಿಂದ ಕರಾವಳಿ ಕರ್ನಾಟಕಕ್ಕೆ ಆಗಮಿಸುವ ಕೆಲವು ಕಾರ್ಮಿಕರಲ್ಲಿಯೂ ಸಹ ಸೋಂಕು ಪತ್ತೆಯಾಗುತ್ತಿದ್ದು, ಆರೋಗ್ಯ ಇಲಾಖೆಯು ರಾಜ್ಯದ ಹೊರಗಿನ ಕಾರ್ಮಿಕರ ಮೇಲೆ ವಿಶೇಷ ಕಣ್ಗಾವಲಿನಲ್ಲಿ ಇರಿಸಲು ಮುಂದಾಗಿದೆ.

ಕಳೆದ ಎರಡು ತಿಂಗಳಿನಿಂದ ಜಿಲ್ಲೆಯಲ್ಲಿ ಮಲೇರಿಯಾ ಪ್ರಕರಣಗಳು ಹೆಚ್ಚಾಗಿದ್ದು, ಇಲ್ಲಿಯವರೆಗೆ 30 ಪ್ರಕರಣಗಳು ದೃಢಪಟ್ಟಿವೆ. ಈ



ಉದಯವಾಹಿನಿ ಚಿತ್ರ

> ಇತರ ರಾಜ್ಯಗಳಿಂದ ಆಗಮಿಸುವ ಕಾರ್ಮಿಕರು ಕೆಲಸಕ್ಕೆ ಸೇರುವ ಮೊದಲು ಮಲೇರಿಯಾ ಪರೀಕ್ಷೆಗೆ ಒಳಗಾಗುವಂತೆ ಆರೋಗ್ಯ ಇಲಾಖೆ ಎಚ್ಚರಿಸಿದೆ.

ಪ್ರಕರಣಗಳಲ್ಲಿ 23 ಪ್ರಕರಣಗಳು ಜಿಲ್ಲೆಯ ಹೊರಗಿನವರು ಅಥವಾ ಇತರ ರಾಜ್ಯಗಳ ಜನರು. ಹೆಚ್ಚಿನ ಪ್ರಕರಣಗಳು ಮಂಗಳೂರು ನಗರ ವ್ಯಾಪ್ತಿಯಲ್ಲಿ ವರದಿಯಾಗಿವೆ. ಉದ್ಯೋಗ, ಶಿಕ್ಷಣ ಮತ್ತು ಇತರ ಉದ್ದೇಶಗಳಿಗಾಗಿ ದೇಶದ ವಿವಿಧ ಭಾಗಗಳಿಂದ ಜನರು ಮಂಗಳೂರು ನಗರಕ್ಕೆ ಬರುತ್ತಾರೆ. ಕೆಲವು ಕಾರ್ಮಿಕರು ಬರುವಾಗಲೇ ಜ್ವರದ ಲಕ್ಷಣಗಳನ್ನು ಕಂಡು ಬರುತ್ತಿದೆ ಎಂದು ಆರೋಗ್ಯ ಅಧಿಕಾರಿಗಳು ತಿಳಿಸಿದ್ದಾರೆ. ಒಮ್ಮೆ ಸೋಂಕು ತಗುಲಿದರೆ, ಸೊಳ್ಳೆಗಳ ಮೂಲಕ ಪರಾವಲಂಬಿ ಹರಡಬಹುದು, ಇದು ಮತ್ತಷ್ಟು ಹರಡುವಿಕೆಗೆ ಕಾರಣವಾಗಬಹುದು.

ಇಂತಹ ಪ್ರಕರಣಗಳು ವ್ಯಾಪಕ ಸಾರ್ವಜನಿಕ-ಆರೋಗ್ಯ ಕಾಳಜಿಯಾಗುವುದನ್ನು ತಡೆಗಟ್ಟುವ ಸಲುವಾಗಿ, ಆರೋಗ್ಯ ಇಲಾಖೆಯು ಸಂಬಂಧಪಟ್ಟ ಅಧಿಕಾರಿಗಳ ಸಮನ್ವಯದೊಂದಿಗೆ, ನಿರ್ಮಾಣ ಕಂಪನಿಗಳು ಮತ್ತು ಇತರ ಸಂಸ್ಥೆಗಳಿಗೆ ಜಾಗೃತಿ ಕಾರ್ಯಕ್ರಮಗಳನ್ನು ಯೋಜಿಸುತ್ತಿದೆ.

# ಎಕರೆಗೆ 50 ಸಾವಿರ ಪರಿಹಾರ, ಸಂಪೂರ್ಣ ಸಾಲ ಮನ್ನಾಕ್ಕೆ ಆಗ್ರಹ

• **ಉದಯವಾಹಿನಿ, ಬೀದರ್:**



ಉದಯವಾಹಿನಿ ಚಿತ್ರ

ಜಿಲ್ಲೆಯಲ್ಲಿ ಮಳೆ ಕೊರತೆಯಿಂದ ಉಂಟಾಗಿರುವ ಅನಾವೃಷ್ಟಿ ಪರಿಸ್ಥಿತಿಯನ್ನು ಪರಿಗಣಿಸಿ ಕೂಡಲೇ ಬರಗಾಲ ಘೋಷಿಸಬೇಕು. ರೈತರಿಗೆ ಪ್ರತಿ ಎಕರೆಗೆ ರೂ. 50 ಸಾವಿರ ಬರ ಪರಿಹಾರ ನೀಡಬೇಕು ಹಾಗೂ ರೈತರ ಸಂಪೂರ್ಣ ಸಾಲ ಮನ್ನಾ ಮಾಡಬೇಕು ಎಂದು ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ಜಿಲ್ಲಾ ಘಟಕದಿಂದ ಒತ್ತಾಯಿಸಿದದಾರೆ. ರೈತರ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಆ.21ರಂದು ಬೆಳಿಗ್ಗೆ 11 ಗಂಟೆಗೆ ಬೀದರ್ ನಗರದ ನೌಬಾದ್ ಬಸವೇಶ್ವರ ವೃತ್ತದ ಬಳಿ ರಸ್ತೆ ತಡೆ ಚಳುವಳಿ ಹಮ್ಮಿಕೊಳ್ಳಲಾಗಿದೆ.

2025-26ನೇ ಸಾಲಿನಲ್ಲಿ ರೈತರು ಪೂರೈಸಿರುವ ಕಬ್ಬಿಗೆ ಸಂಬಂಧಿಸಿದಂತೆ ಬಾಕಿ ಉಳಿದಿರುವ ಹಣವನ್ನು ಕೂಡಲೇ ರೈತರ ಖಾತೆಗಳಿಗೆ ಜಮಾ ಮಾಡಬೇಕು. ಅದೇ ಸಾಲಿನಲ್ಲಿ ಬಾಕಿ ಇರುವ ಎಲ್ಲಾ ಅರ್ಹ ರೈತರಿಗೆ ಬೆಳೆ ವಿಮೆ ಮೊತ್ತವನ್ನು ಸಂಪೂರ್ಣವಾಗಿ ಪಾವತಿಸಬೇಕು ಎಂದು ರೈತ ಸಂಘ ಆಗ್ರಹಿಸಿದ್ದಾರೆ.

> ಕಾರಂಜಾ ಏತ ನೀರಾವರಿ ಯೋಜನೆಯ ನೀರನ್ನು ಸಮರ್ಪಕವಾಗಿ ಹರಿಸಿ ರೈತರ ಕೃಷಿ ಚಟುವಟಿಕೆಗಳಿಗೆ ಅನುಕೂಲ ಕಲ್ಪಿಸಬೇಕು. ಜಿಲ್ಲೆಯ ರೈತರ ವಿವಿಧ ಸಮಸ್ಯೆಗಳನ್ನು ಸರ್ಕಾರ ಆದ್ಯತೆಯ ಮೇರೆಗೆ ಪರಿಹರಿಸಬೇಕು ಎಂದು ಆಗ್ರಹಿಸಿದ್ದಾರೆ.

2026-27ನೇ ಸಾಲಿನಲ್ಲಿ ಬಿಎಸ್‌ಎಸ್‌ಕೆ ಸಕ್ಕರೆ ಕಾರ್ಖಾನೆಯನ್ನು ಪುನರಾರಂಭಿಸಲು ಸರ್ಕಾರ ಅಗತ್ಯ ಕ್ರಮ ಕೈಗೊಳ್ಳಬೇಕು. ಕಾರ್ಖಾನೆ ಪುನರಾರಂಭದಿಂದ ಜಿಲ್ಲೆಯ ಕಬ್ಬು ಬೆಳೆಗಾರರಿಗೆ ಅನುಕೂಲವಾಗುವುದರ ಜೊತೆಗೆ ಕಬ್ಬು ಸಾಗಣೆ ಮತ್ತು ಮಾರಾಟಕ್ಕೆ ಸಂಬಂಧಿಸಿದ ಸಮಸ್ಯೆಗಳು ಕಡಿಮೆಯಾಗಲಿವೆ,ಕಾರಂಜಾ ಜಲಾಶಯದಿಂದಾಗಿ ಭೂಮಿ ಹಾಗೂ ಮನೆ ಕಳೆದುಕೊಂಡಿರುವ ಮುಳುಗಡೆ ಸಂತ್ರಸ್ತರ ಸಮಸ್ಯೆಗಳನ್ನು ಸರ್ಕಾರ ತುರ್ತಾಗಿ ಪರಿಹರಿಸಬೇಕು. ಅರ್ಹ ಸಂತ್ರಸ್ತರಿಗೆ ಬಾಕಿ ಇರುವ ಪರಿಹಾರ ಹಾಗೂ ಪುನರ್ವಸತಿ ಸೌಲಭ್ಯಗಳನ್ನು ಒದಗಿಸಬೇಕು ಎಂದು ರೈತ ಸಂಘ ಒತ್ತಾಯಿಸಿದ್ದಾರೆ.

# ಕಾರಿಂಜ ಸಮಗ್ರ ಅಭಿವೃದ್ಧಿಗೆ ಎಲ್ಲರ ಸಹಕಾರ ಅಗತ್ಯ

• **ಉದಯವಾಹಿನಿ, ಬಂಟ್ವಾಳ-**

ಐತಿಹಾಸಿಕ ಹಾಗೂ ಧಾರ್ಮಿಕ ಮಹತ್ವ ಹೊಂದಿರುವ ಶ್ರೀ ಕ್ಷೇತ್ರ, ಕಾರಿಂಜದ ಸಮಗ್ರ ಅಭಿವೃದ್ಧಿಗೆ ಕೇಂದ್ರ, ಹಾಗೂ ರಾಜ್ಯ ಸರ್ಕಾರದ ಯೋಜನೆಗಳ ಜತೆಗೆ ಸಾರ್ವಜನಿಕರು, ಸ್ಥಳೀಯ ಸಂಸ್ಥೆಗಳು, ಕೈಗಾರಿಕಾ ಸಂಸ್ಥೆಗಳು ಹಾಗೂ ವಿವಿಧ ಸಂಘ-ಸಂಸ್ಥೆಗಳ ಸಹಕಾರವೂ ಅಗತ್ಯವಾಗಿದೆ ಎಂದು ದಕ್ಷಿಣ ಕನ್ನಡ ಸಂಸದ ಕ್ಯಾ. ಬ್ರಿಜೇಶ್ ಚೌಟ ಹೇಳಿದರು.

ಕಾವಳಮೂಡೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯ ರಥಬೀದಿ ಶ್ರೀ ಕ್ಷೇತ್ರ ಕಾರಿಂಜದಲ್ಲಿ ಪ್ಯಾರಡೀಪ್ ಫಾಸ್ಫೇಟ್ಸ್ ಲಿಮಿಟೆಡ್ (ಪಿಪಿಎಲ್), ಪಣಂಬೂರು, ಮಂಗಳೂರು ಸಂಸ್ಥೆಯ ಸಿಎಸ್‌ಆರ್ ಯೋಜನೆಯಡಿ ಹಾಗೂ ಸಂಸದ ಕ್ಯಾ। ಬ್ರಿಜೇಶ್ ಚೌಟ ಅವರ ಸಹಕಾರದಿಂದ ನಿರ್ಮಿಸಲಾದ ಸಾರ್ವಜನಿಕ ಶೌಚಾಲಯವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಬಂಟ್ವಾಳ ಶಾಸಕ ರಾಜೇಶ್ ನಾಯ್ಕ್ ಉಳಿಪ್ಪಾಡಿಗುತ್ತು ಮಾತನಾಡಿ, ಬಂಟ್ವಾಳ ಕ್ಷೇತ್ರದಲ್ಲಿ ಧಾರ್ಮಿಕ ಹಾಗೂ ಐತಿಹಾಸಿಕ ಮಹತ್ವ ಹೊಂದಿರುವ ದೇವಾಲಯಗಳ ಅಭಿವೃದ್ಧಿಗೆ ಅಗತ್ಯ ಸಹಕಾರ ನೀಡಲಾಗುತ್ತಿದೆ ಎಂದರು.

# ಜೈನ ಧರ್ಮದ ಆಶ್ರಯ ತಾಣ ಕೋಳೂರು : ನಾಲ್ಕು ಜಿನ ಶಿಲ್ಪಗಳು ಪತ್ತೆ

## ನಾಲ್ಕು ಶಾಸನಗಳು ದೊರಕಿರುವುದರಿಂದ ಈ ಗ್ರಾಮವು ಐತಿಹಾಸಿಕವಾಗಿಯೂ ಪ್ರಸಿದ್ಧಿಯನ್ನು ಹೊಂದಿದೆ ಎಂದು ತಿಳಿದುಬರುತ್ತದೆ

• **ಉದಯವಾಹಿನಿ, ಬಳ್ಳಾರಿ, :**

ಜಿಲ್ಲೆಯ ಬಳ್ಳಾರಿಯಿಂದ 18 ಕಿ. ಮೀಟರ್ ದೂರದಲ್ಲಿರುವ ಕೋಳೂರು ಗ್ರಾಮದ ಹೊರವಲಯದ ಹೊಲದ ಅಗ್ನೇಯ,ಈಶಾನ್ಯ,ನೈಋತ್ತ್ಯ, ವಾಯುವ್ಯ ದಿಕ್ಕಿಗೆ ಒಂದೊಂದು ಸುಂದರವಾದ ನಾಲ್ಕು ಸಲ್ಲೇಖನ ವ್ರತದ ಜಿನಮೂರ್ತಿ ಶಿಲ್ಪಗಳನ್ನು ವಿಜಯನಗರ ತಿರುಗಾಟ ಸಂಶೋಧನ ತಂಡದ ಪ್ರೊ ಹೆಚ್. ತಿಪ್ಪೇಸ್ವಾಮಿ, ಡಾ.ಗೋವಿಂದ, ಡಾ.ಕೃಷ್ಣೆಗೌಡ,ಸಂಶೋಧಕರಾದ ಇಸ್ಮಾಹಿಲ್ ಸಿದ್ದಿಕಿ, ಅಶೋಕ ನಾಯಕ ದಿದ್ದಿಗಿ, ಕೆ.ಶಿವರಾಮಪ್ಪ, ಬಂಡ್ರಿಯ ಪಾಪಯ್ಯ ಅವರುಗಳು ಸ್ಥಳೀಯರಾದ ವಕೀಲ ಕೆ. ಲಕ್ಶ್ಮಣ, ಮಲ್ಲಿಕಾರ್ಜುನ ಅವರುಗಳ ಸಹಕಾರದಿಂದ ಪತ್ತೆ ಮಾಡಲಾಗಿದೆ.

**1 : ಪ್ರಸರಣ ಕೇಂದ್ರ ಕೋಳೂರು**
**2 : ಜಿನ ಮೂರ್ತಿ ಶಿಲ್ಪಗಳು ಪತ್ತೆ**
**3 : ಶಿಲ್ಪಗಳ ರಕ್ಷಣೆಗೆ ತಂಡ ಮೊರೆ**

ಗ್ರಾಮದಲ್ಲಿರುವ ಸೂರ್ಯನಾರಾಯಣ ದೇಗುಲ ಹಾಗೂ ಊರಲ್ಲಿಯ ಇತರೆ ಸ್ಥಳಗಳಲ್ಲಿ ನಾಲ್ಕು ಶಾಸನಗಳು ದೊರಕಿರುವುದರಿಂದ ಈ ಗ್ರಾಮವು ಐತಿಹಾಸಿಕವಾಗಿಯೂ ಪ್ರಸಿದ್ಧಿಯನ್ನು ಹೊಂದಿದೆ ಎಂದು ತಿಳಿದುಬರುತ್ತದೆ.

ಸೂರ್ಯನಾರಾಯಣ ಗುಡಿಯಲ್ಲಿ ಬೃಹತ್ ಶಿಲಾಶಾಸನವಿದೆ.ದೇಗುಲದ ನವರಂಗ ಮಂಟಪದಲ್ಲಿ ದಕ್ಷಿಣ ದಿಕ್ಕಿಗೆ ನಿಲ್ಲಿಸಿರುವ ಶಾಸನವು103 ಸಾಲಿನಲ್ಲಿದೆ. ಶಿಲಾ ಶಾಸನದ ಎರಡು ಬದಿಗೆ ಸಂಸ್ಕೃತ ಭಾಷೆಯ

**ಸೂರ್ಯನಾರಾಯಣ ಗುಡಿಯಲ್ಲಿ ಬೃಹತ್ ಶಿಲಾಶಾಸನವಿದೆ.**



ಉದಯವಾಹಿನಿ ಚಿತ್ರ

ಕನ್ನಡ ಲಿಪಿಯಲ್ಲಿ ಬರೆಸಲಾಗಿದೆ. ಈ ಶಾಸನವು ಚಾಲುಕ್ಯ ಜಗದೇಕಮಲ್ಲನ ಕಾಲಾವಧಿಯ ಪಾಳೆಯಗಾರನಾಗಿದ್ದ ಇಮ್ಮಡಿ ಭೀಮರಸನಿಗೆ ಸಂಬಂಧಿಸಿದುದಾಗಿದೆ. ಇದು ಬಳ್ಳಾರಿ ಜಿಲ್ಲಾ ಶಾಸನ ಸಂಪುಟದಲ್ಲಿ ಪ್ರಕಟವಾಗಿದೆ. ಈ ಶಾಸನದಲ್ಲಿ ನಂದ ಮತ್ತು ಮೌರ್ಯರ ಉಲ್ಲೇಖವಾಗಿರುವುದನ್ನು ಗಮನಿಸಿದ ನಮ್ಮ ತಂಡವು ನಂದ ಮತ್ತು ಮೌರ್ಯರ ಕಾಲದ ಕುರುಹುಗಳು ಊರಲ್ಲಿ ಸಿಗಬಹುದೆಂದು ಕ್ಷೇತ್ರಕಾರ್ಯಕ್ಕೆ ಹೋದಾಗ ಜೈನಧರ್ಮ ಸಂಸ್ಕೃತಿಯ ಪ್ರತೀಕವಾದ ನಾಲ್ಕು ಜಿನ ಮೂರ್ತಿ ಶಿಲ್ಪಗಳು ಪತ್ತೆಯಾದವು.ಇವು ಆಗಿನ ಧರ್ಮ ಮತ್ತು ಸಂಸ್ಕೃತಿಯ

> ಈ ನಾಲ್ಕು ಶಿಲ್ಪಗಳು ಈ ಹಿಂದೆ ಜೈನ ಧರ್ಮಿಯರು ವಾಸವಾಗಿದ್ದರೆನ್ನಲು ಸಾಕ್ಷಿಭೂತವಾಗಿ ನಿಂತಿವೆ.ಈ ಜಿನಮೂರ್ತಿ ಶಿಲ್ಪಗಳನ್ನು ಬಿಸಿಲು, ಗಾಳಿ ಮಳೆಯಿಂದ ರಕ್ಷಿಸಬೇಕಾಗಿದೆ. ಆದ್ದರಿಂದ ಕೋಳೂರಿನ ಪಂಚಾಯತಿ ಇಲ್ಲವೇ ಸಂಬಂಧಿಸಿದ ಇಲಾಖೆಯು ಶಿಲ್ಪಗಳನ್ನು ರಕ್ಷಿಸಿ, ನಮ್ಮ ಸಂಸ್ಕೃತಿ, ಇತಿಹಾಸವನ್ನು ಮುಂದಿನ ಪೀಳಿಗೆಗೆ ಉಳಿಸಲಿ ಎಂದು ಒತ್ತಾಹಿಸಿದ್ದಾರೆ. -ಡಾ. ಕೃಷ್ಣೆಗೌಡ

> ಇದರಿಂದ ಈ ಭಾಗದಲ್ಲಿ ಮೌರ್ಯರ ಕಾಲಾವಧಿಯಲ್ಲಿ ಜೈನ ಧರ್ಮಕ್ಕೆ ಪ್ರೋತ್ಸಾಹ ನೀಡಿದ ಬಗ್ಗೆ ಇದುವರೆಗೂ ನಿಗೂಢವಾಗಿದ್ದ ಧರ್ಮ, ಇತಿಹಾಸವನ್ನು ನಮ್ಮ ತಂಡವು ಬೆಳಕಿಗೆ ತರುವಲ್ಲಿ ಯಶಸ್ವಿಯಾಗಿದೆ. ಮುಂಬರುವ ದಿನದಲ್ಲಿ ಸಂಬಂಧಪಟ್ಟ ಇಲಾಖೆಯು ಈ ಕುರಿತು ವಿಶೇಷ ಅಧ್ಯಯನ ಮಾಡಿ, ಉತ್ಖನನ ಕೈಗೊಂಡರೆ ಜೈನ ಧರ್ಮದ ಕುರಿತಾದ ಮಹತ್ವದ ದಾಖಲೆ ಸಿಗಬಹುದು ಎಂದು ತಿಳಿಸಿದ್ದಾರೆ.
> - ಪ್ರೊ. ಹೆಚ್.ತಿಪ್ಪೇಸ್ವಾಮಿ

> ಈ ಶಿಲ್ಪವನ್ನು ನಾಶಗೊಳಿಸಿದವರು ಹಸುಕೊಂದ ಪಾಪಕ್ಕೆ ಗುರಿಯಾಗುವರು ಎಂಬುದಾಗಿ ಈ ಚಿತ್ರವು ಸೂಚಿಸುತ್ತದೆ. ಆದರೆ ಇಲ್ಲಿರುವ ಯಾವ ಶಿಲ್ಪಗಳಿಗೂ ಲಿಪಿ ಇಲ್ಲ ಎಂದು ಕನ್ನಡ ಸಾಹಿತ್ಯ ಅಧ್ಯಯನ ವಿಭಾಗದ ಹಿರಿಯ ಶ್ರೇಣಿ ಸಹಾಯಕ ಪ್ರಾಧ್ಯಾಪಕರಾದ ಡಾ.ಗೋವಿಂದ ಅವರು ತಿಳಿಸಿದ್ದಾರೆ.

ಮಾಹಿತಿ ನೀಡುವ ತುಂಬಾ ಮಹತ್ವದ ಜಿನಮೂರ್ತಿ ಶಿಲ್ಪಗಳೆಂದು ತಿಳಿದು ಬಂದವು. ಈ ಶಿಲ್ಪದಿಂದ ಜಿನ ಮುನಿಯೊಬ್ಬ ಸಲ್ಲೇಖನ ವ್ರತವನ್ನು ಕೈಗೊಂಡಿರುವ ಕುರಿತಾಗಿ ತಿಳಿಸುತ್ತದೆ. ಆದರೆ ಗ್ರಾನೈಟ್ ಕಲ್ಲಿನಲ್ಲಿ ಕೆತ್ತಿದ ಜಿನಮೂರ್ತಿ ಶಿಲ್ಪಗಳನ್ನು ಆ ಊರಿನ ಜನರು ಮಾತ್ರ ಒಂದೊಂದಕ್ಕೂ ಒಂದೊಂದು ಹೆಸರು ಇಟ್ಟು ಗದ್ದೆಯ ಒಡೆಯರು ಇಂದಿಗೂ ಪೂಜೆ ಸಲ್ಲಿಸುತ್ತಿದ್ದಾರೆ. ಮೊದಲು ಪತ್ತೆಯಾದ ಶಿಲ್ಪಕ್ಕೆ ವೀರಭದ್ರ, ನಂತರ ಪತ್ತೆಯಾದ ಜಿನಮೂರ್ತಿ ಶಿಲ್ಪಗಳಿಗೆ ಖಾಜಾಪೀರ, ದೊಡ್ಡ ಸಂಕ್ರಮ್ಮ, ಸಣ್ಣ ಸಂಕ್ರಮ್ಮ ಎಂದು ಕರೆಯಲಾಗುತ್ತಿದೆ. ಬೇರೆ ಬೇರೆ ಹೆಸರಲ್ಲಿ ಕರೆಯುವ ಇವುಗಳನ್ನು ಗಮನಿಸಿದಾಗ ಅತ್ಯಂತ ಸುಂದರವಾದ ಜಿನ ಶಿಲ್ಪಗಳೆಂದು ಗುರುತಿಸಲಾಯಿತು. ಕೋಳೂರಿನ ಹೊರವಲಯದ ಹೊಲದಲ್ಲಿ ಪತ್ತೆಯಾದ ನಾಲ್ಕು ಜಿನಮೂರ್ತಿ ಶಿಲ್ಪಗಳು ಸಲ್ಲೇಖನ ವ್ರತ ಬಿಂಬಿಸುತ್ತಿವೆ. ಗ್ರಾನೈಟ್ ಕಲ್ಲಿನಲ್ಲಿ ಕೆತ್ತಲಾಗಿರುವ ಒಂದು ಶಿಲ್ಪಕ್ಕೆ ಸುತ್ತಲೂ ಕಟ್ಟೆ ಕಟ್ಟಿ ಅದನ್ನು ವೀರಭದ್ರ ಎಂಬ ಹೆಸರಲ್ಲಿ ಇಂದಿಗೂ ಪೂಜಿಸತೊಡಗಿದ್ದಾರೆ. ಮತ್ತೊಂದು ಜಿನಮೂರ್ತಿ ಶಿಲ್ಪದ ಅರ್ಧ ಭಾಗ ತುಂಡಾಗಿದೆ. ಈ ಶಿಲ್ಪವು ಮಾತ್ರ 7 ಅಡಿ ಎತ್ತರ 3 ಅಡಿ ಅಗಲವಾಗಿದ್ದರೆ, ಉಳಿದ ಮೂರು ಜಿನಮೂರ್ತಿ ಶಿಲ್ಪಗಳು 5 ಅಡಿ ಎತ್ತರ 3 ಅಡಿ ಅಗಲವಾಗಿವೆ.

## ಮಿನಿ ನ್ಯೂಸ್

# ಸಚಿವ ನಾಗೇಂದ್ರಗೆ ದೇಶಾದ್ಯಂತ ಓಡಾಡಲು ಹೈಕೋರ್ಟ್ ಅನುಮತಿ

• **ಉದಯವಾಹಿನಿ, ಬಳ್ಳಾರಿ, :**



ಉದಯವಾಹಿನಿ ಚಿತ್ರ

ವಾಲ್ಮೀಕಿ ಅಭಿವೃದ್ಧಿ ನಿಗಮದ ಹಣ ವಂಚನೆ ಪ್ರಕರಣದ ಆರೋಪಿ ಸಚಿವ ಬಿ.ನಾಗೇಂದ್ರ ಅವರಿಗೆ ದೇಶಾದ್ಯಂತ ಓಡಾಡಲು ಹೈಕೋರ್ಟ್ ಅನುಮತಿಸಿದೆ. ಈಮೊದಲು ಅವರು ರಾಜ್ಯ ಬಿಟ್ಟು ತೆರಳದಂತೆ ನಿರ್ಬಂಧ ಹಾಕಿತ್ತು ಹೈಕೋರ್ಟ್. ಪ್ರಕರಣದಲ್ಲಿ ನಾಗೇಂದ್ರಗೆ ಜಾಮೀನು ಮಂಜೂರು ಮಾಡಿದ ಸಂದರ್ಭದಲ್ಲಿ ನ್ಯಾಯಾಲಯದ ಪೂರ್ವಾನುಮತಿಯಿಲ್ಲದೆ ರಾಜ್ಯ ಬಿಟ್ಟು ತೆರಳುವಂತಿಲ್ಲ ಎಂದು ಜನಪ್ರತಿನಿಧಿಗಳ ಕೋರ್ಟ್ ಷರತ್ತು ವಿಧಿಸಿತ್ತು. ಈಗ ಸಂಪುಟ ಸಚಿವರಾಗಿ ಅಧಿಕಾರ ವಹಿಸಿಕೊಂಡ ಹಿನ್ನೆಲೆಯಲ್ಲಿ ಅಧಿಕೃತ ಕರ್ತವ್ಯ ನಿರ್ವಹಣೆಗಾಗಿ ರಾಜ್ಯ ಬಿಟ್ಟು ಹೊರಗೆ ಪ್ರಯಾಣಿಸಬೇಕಾಗುತ್ತದೆ. ಹಾಗಾಗಿ ಷರತ್ತು ಸಡಿಲಿಸಬೇಕು. ದೆಹಲಿಗೆ ಪ್ರಯಾಣಿಸಲು ಅನುಮತಿ ನೀಡಬೇಕು ಎಂದು ಕೋರಿ ನಾಗೇಂದ್ರ ಅವರ ಪರ ವಕೀಲರು ಸಲ್ಲಿಸಿದ್ದ ಅರ್ಜಿಯನ್ನು ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ತಿರಸ್ಕರಿಸಿತ್ತು. ಇದರಿಂದ ನಾಗೇಂದ್ರ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು. ಅರ್ಜಿ ವಿಚಾರಣೆ ನಡೆಸಿದ ನ್ಯಾ. ಎಂ.ನಾಗಪ್ರಸನ್ನ ಅವರ ಪೀಠ ಜನಪ್ರತಿನಿಧಿಗಳ ಕೋರ್ಟ್ ವಿಧಿಸಿದ್ದ ಷರತ್ತಿಗೆ ತಡೆಯಾಜ್ಞೆ ನೀಡಿದೆ. ನಾಗೇಂದ್ರ ಅವರು ದೇಶದಾದ್ಯಂತ ಮಾತ್ರ ಪ್ರಯಾಣಿಸಬಹುದು. ಆದರೆ, ಹೊರದೇಶಕ್ಕೆ ಪ್ರಯಾಣಿಸುವಂತಿಲ್ಲ ಎಂದು ಆದೇಶ ಮಾಡಿದೆ. ನಂತರ ಅರ್ಜಿ ಸಂಬಂಧ ಆಕ್ಷೇಪಣೆ ಸಲ್ಲಿಸುವಂತೆ ಜಾರಿ ನಿರ್ದೇಶನಾಲಯಕ್ಕೆ (ಇಡಿ) ಸೂಚಿಸಿ ವಿಚಾರಣೆಯನ್ನು ಆ.12ಕ್ಕೆ ಮುಂದೂಡಿದೆ.

# ಬಾವಿಯೊಳಗೆ ಮಗುವಿನ ಶವ ಪತ್ತೆ

• **ಉದಯವಾಹಿನಿ, ಔರಾದ್ :**

ತಾಲ್ಲೂಕಿನ ವಡಗಾಂವ ದಲ್ಲಿ ಎರಡು ತಿಂಗಳ ಗಂಡು ಮಗುವಿಗೆ ಬಾವಿಯಲ್ಲಿ ಬಿಸಾಕಿ ಕೊಲೆ ಮಾಡಿರುವ ಶಂಕೆ ವ್ಯಕ್ತವಾಗಿದೆ.ರಾಣಿ ಗಂಡ ಸಂಜಯ್ (29) ಅನ್ನುವವಳಿಗೆ ಎರಡು ವರ್ಷದ ಹಿಂದೆ ಮಹಾರಾಷ್ಟ್ರದ ಕವಳಗಡ ಗ್ರಾಮಕ್ಕೆ ಮದುವೆಯಾಗಿತ್ತು. ಪ್ರಥಮ ಹೆರಿಗೆಗೆ ತವರು ಮನೆ ವಡಗಾಂವ ಗ್ರಾಮಕ್ಕೆ ಬಂದು ಎರಡು ತಿಂಗಳ ಕೆಳಗೆ ಗಂಡು ಮಗುವಿಗೆ ಜನ್ಮ ನೀಡಿದಳು. ನವಜಾತ ಶಿಶುವಿನ ತಂದೆ ಸಂಜು ವಿಠ್ಠಲ ರಾವ್ ಅವರು ಬಂದಾಗ ಮಗುವಿಗೆ ದೇವರು ಕೊಂಡೊಯ್ಯದಿದ್ದಾನೆ ಎಂದು ಪ್ರಚಾರ ಬಿಂಬಿಸುತ್ತಾರೆ ಅದನ್ನು ಅರಿತ ಮಗುವಿನ ತಂದೆ ನನ್ನ ಮಗುವಿಗೆ ನನ್ನ ಹೆಂಡತಿ, ಮಾವ, ಅತ್ತೆ, ಭಾವ ಒಟ್ಟು ನಾಲ್ಕು ಜನ ಸೇರಿ ಕೊಂಡು ಕೊಲೆ ಮಾಡಿ ಬಾವಿಗೆ ಹಾಕಿದ್ದಾರೆ ಇವರನ್ನು ತಕ್ಕ ಶಿಕ್ಷೆಗೆ ಒಳಪಡಿಸಬೇಕು ಎಂದು ಪೊಲೀಸರಿಗೆ ದೂರು ನೀಡಿದ್ದಾರೆ. ಈಗಾಗಲೇ ಆರೋಪಿತರನ್ನು ಪೊಲೀಸರು ಬಂಧಿಸಿ ತನಿಖೆ ನಡೆಸಿದ್ದಾರೆ. ಕೊಲೆಗೆ ನಿಖರವಾದ ಮಾಹಿತಿ ಲಭ್ಯವಾಗಿಲ್ಲ. ಸ್ಥಳಕ್ಕೆ ಭಾಲ್ಕಿ ವಿಭಾಗದ ಡಿವೈಎಸ್ಪಿ ಬಲ್ಲಪ್ಪ ನಂದಗಾವೆ, ಸಿಪಿಐ ರಘುವೀರಸಿಂಗ ಠಾಕೂರ್, ಪಿಎಸ್‌ಐ ದಿನೇಶ ಎಂ.ಟಿ ನೇತೃತ್ವ ತಂಡ ಸ್ಥಳಕ್ಕೆ ತೆರಳಿ ಪರಿಶೀಲನೆ ನಡೆಸುತ್ತಿದೆ. ಸಂತಪೂರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ಬೀದರ್ ಜಿಲ್ಲೆಯ ನೂತನ ಅಪರ ಜಿಲ್ಲಾಧಿಕಾರಿಯಾಗಿ ಸುರೇಖಾ ಅಧಿಕಾರ ಸ್ವೀಕಾರ

• **ಉದಯವಾಹಿನಿ, ಬೀದರ:**



ಉದಯವಾಹಿನಿ ಚಿತ್ರ

ಬೀದರ್ ಜಿಲ್ಲೆಯ ನೂತನ ಅಪರ ಜಿಲ್ಲಾಧಿಕಾರಿ ಹಾಗೂ ಅಪರ ಜಿಲ್ಲಾ ದಂಡಾಧಿಕಾರಿಯಾಗಿ ಕೆ.ಎ.ಎಸ್ (ಹಿರಿಯ ಶ್ರೇಣಿ) ಅಧಿಕಾರಿ ಸುರೇಖಾ ಅವರು ಸೋಮವಾರ ಅಧಿಕಾರ ಸ್ವೀಕರಿಸಿದರು ಸರ್ಕಾರದ ಅಧೀನ ಕಾರ್ಯದರ್ಶಿ ಕೇಶವಪ್ರಸಾದ್ ಕೆ.ಎಚ್. ಅವರು ಆಡಳಿತಾತ್ಮಕ ಹಿತದೃಷ್ಟಿಯಿಂದ ಜಾರಿಗೆ ಬರುವಂತೆ ಹೊರಡಿಸಿದ ಆದೇಶದನ್ವಯ, ಈ ಹಿಂದೆ ಸೇವೆಯಲ್ಲಿದ್ದ ಶಿವಾನಂದ ಬಿ. ಕರಾಳೆ ಅವರು ನೂತನ ಅಪರ ಜಿಲ್ಲಾಧಿಕಾರಿಗಳಿಗೆ ಅಧಿಕಾರ ಹಸ್ತಾಂತರಿಸಿದರು.

ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯ ಉಪ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸುತ್ತಿದ್ದ ಸುರೇಖಾ ಅವರು, ಈ ಹಿಂದೆ ಬೀದರ್ ವಿಶ್ವವಿದ್ಯಾಲಯದ ಕುಲಸಚಿವರಾಗಿದ್ದ ಅವಧಿಯಲ್ಲಿಯೂ ಕೆಲ ದಿನಗಳ ಕಾಲ ಪ್ರಭಾರ ಅಪರ ಜಿಲ್ಲಾಧಿಕಾರಿಯಾಗಿ ಕಾರ್ಯನಿರ್ವಹಿಸಿದ್ದರು. ಇದೀಗ ಪೂರ್ಣ ಪ್ರಮಾಣದಲ್ಲಿ ಜಿಲ್ಲೆಯ ನೂತನ ಅಪರ ಜಿಲ್ಲಾಧಿಕಾರಿಯಾಗಿ ಅಧಿಕಾರ ವಹಿಸಿಕೊಂಡಿದ್ದಾರೆ.

ಇದೇ ವೇಳೆ, ವರ್ಗಾವಣೆಗೊಂಡಿರುವ 2010ನೇ ಸಾಲಿನ ಕೆಎಎಸ್ ಅಧಿಕಾರಿ ಶಿವಾನಂದ ಬಿ. ಕರಾಳೆ ಅವರನ್ನು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಆಪ್ತ ಕಾರ್ಯದರ್ಶಿ ಹುದ್ದೆಗೆ ನೇಮಕ ಮಾಡಲಾಗಿದೆ. ಅಧಿಕಾರ ಸ್ವೀಕರಿಸಿದ ನೂತನ ಅಪರ ಜಿಲ್ಲಾಧಿಕಾರಿ ಸುರೇಖಾ ಅವರಿಗೆ ಬೀದರ ಜಿಲ್ಲಾಡಳಿತದ ವಿವಿಧ ಇಲಾಖೆಯ ಅಧಿಕಾರಿ ಹಾಗೂ ಸಿಬ್ಬಂದಿಗಳು ಹೂ- ಗುಚ್ಛ ನೀಡಿ ಶುಭ ಕೋರಿದರು.

# ಮನೆ ಮೇಲೆ ತ್ರಿವರ್ಣ ಧ್ವಜ ಹಾರಿಸಿ

• **ಉದಯವಾಹಿನಿ, ಬೀದರ್:**

ಹರ್ ಘರ್ ತಿರಂಗಾ ಅಭಿಯಾನ ಅಂಗವಾಗಿ ಜಿಲ್ಲೆಯ ಪ್ರತಿ ಮನೆ ಮೇಲೂ ತ್ರಿವರ್ಣ ಧ್ವಜ ಹಾರಿಸಬೇಕು ಎಂದು ಬಿಜೆಪಿ ಮಹಿಳಾ ಮೋರ್ಚಾ ಜಿಲ್ಲಾ ಘಟಕದ ಪ್ರಧಾನ ಕಾರ್ಯದರ್ಶಿ ವಿಜಯಲಕ್ಷ್ಮಿ ಕೌಟಗೆ ಮನವಿ ಮಾಡಿದ್ದಾರೆ. ತ್ರಿವರ್ಣ ಧ್ವಜ ಕೇವಲ ಧ್ವಜವಷ್ಟೇ ಅಲ್ಲ ದೇಶದ ಜನರ ಹೃದಯ ಬಡಿತವಾಗಿದೆ. ಹೀಗಾಗಿ ಪ್ರತಿಯೊಬ್ಬರೂ ಅಭಿಯಾನದ ಭಾಗವಾಗಬೇಕು ಎಂದು ಹೇಳಿದ್ದಾರೆ. ಧ್ವಜ ಸಂಹಿತೆಯನ್ನು ಚಾಚೂತಪ್ಪದೇ ಪಾಲಿಸಬೇಕು. ಧ್ವಜದ ಗೌರವಕ್ಕೆ ಧಕ್ಕೆಯಾಗದಂತೆ ಎಚ್ಚರ ವಹಿಸಬೇಕು. ಧ್ವಜ ಹಾರಿಸಿದವರು ಧ್ವಜದೊಂದಿಗೆ ಸೆಲ್ಫಿ ಕ್ಲಿಕ್ಕಿಸಿ ವೆಬ್‌ಸೈಟ್ ವಿಳಾಸ harghartiranga.com ನಲ್ಲಿ ಅಪ್‌ಲೋಡ್ ಮಾಡಬೇಕು ಎಂದು ತಿಳಿಸಿದ್ದಾರೆ.

# ಧರ್ಮಸ್ಥಳದ ಭಕ್ತರಿಂದ ನೇತ್ರಾವತಿ ನದಿಗೆ ಬಾಗಿನ ಅರ್ಪಣೆ

• **ಉದಯವಾಹಿನಿ, ಉಜಿರೆ:**

ಧರ್ಮಸ್ಥಳದಲ್ಲಿ ಸ್ನಾನಘಟ್ಟದ ಬಳಿ ನೇತ್ರಾವತಿ ನದಿ ತುಂಬಿ ಹರಿಯುತ್ತಿದ್ದು ಪರಮಭಕ್ತರಾದ ಹಾಸನದ ಎಚ್.ವೈ. ಸೋಮಶೇಖರ್ ಕುಟುಂಬ ಸಮೇತರಾಗಿ ಹಾಗೂ ತಮ್ಮ ಆತ್ಮೀಯ ಬಳಗದವರೊಂದಿಗೆ ಧರ್ಮಸ್ಥಳಕ್ಕೆ ಬಂದು ನೇತ್ರಾವತಿ ಸ್ನಾನಘಟ್ಟದಲ್ಲಿ ಶ್ರದ್ಧಾ-ಭಕ್ತಿಯಿಂದ ಬಾಗಿನ ಅರ್ಪಿಸಿದರು.

ಇವರು ಧರ್ಮಸ್ಥಳದ ಭಕ್ತರಾಗಿದ್ದು ವರ್ಷದಲ್ಲಿ ಅನೇಕ ಬಾರಿ ಧರ್ಮಸ್ಥಳಕ್ಕೆ ಬಂದು ಸೇವೆ ಮಾಡುತ್ತಿದ್ದಾರೆ. ಹಾಸನ ಜಿಲ್ಲಾ ಸ್ಕೌಟ್ಸ್ ಮತ್ತು ಗೈಡ್ಸ್ ಜಿಲ್ಲಾ ಸಂಚಾಲಕಿ ಹಾಗೂ ಜನಜಾಗೃತಿ ವೇದಿಕೆಯ ಸದಸ್ಯರಾದ ಕಾಂಚನಮಾಲ, ನವಜೀವನ ಸಮಿತಿಯ ಸದಸ್ಯರು, ಕಲಾವಿದರು ಹಾಗೂ ಶೌರ್ಯ ತಂಡದ ಮಹಿಳೆಯರು ಕೂಡಾ ಜೊತೆಯಲ್ಲಿದ್ದರು.

ಹೆಗ್ಗಡೆಯವರ ಆಪ್ತ ಕಾರ್ಯದರ್ಶಿ ಎ.ವಿ. ಶೆಟ್ಟಿ ಉಪಸ್ಥಿತರಿದ್ದು ಸಹಕರಿಸಿದರು.

